# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಆಗಸ್ಟ್ 19, 2020

ಸಂಪುಟ : 47 ಸಂಚಿಕೆ : 101 ದೂರವಾಣಿ : 254736 ವಾಟ್ಸ್ಆ್ಯಪ್ : 91642 99999 ಪುಟ : 8 ರೂ : 4.00 www.janathavani.com Email: janathavani@mac.com


## ಎಸ್ಸೆಸ್ಸೆಲ್ಸಿ ಉತ್ತರ ಪತ್ರಿಕೆ ಬದಲು : ತನಿಖೆಗೆ ಆದೇಶ

ಬೆಂಗಳೂರು, ಆ. 18 - ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ತರಿಪುರ ಗ್ರಾಮದ ಪ್ರೌಢ ಶಾಲೆಯ ಎಸ್ಎಸ್ಎಲ್‌ಸಿ ವಿದ್ಯಾರ್ಥಿನಿ ಜಿ.ಎಸ್.ಅಶ್ವಿನಿ ಅವರ ಉತ್ತರ ಪತ್ರಿಕೆಗಳ ಹಾಳೆಗಳು ಬದಲಾದ ಪ್ರಕರಣವನ್ನು ತನಿಖೆಗೆ ಆದೇಶ ಮಾಡಲಾಗಿದೆ.

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಸುರೇಶ್‌ಕುಮಾರ್ ಈ ವಿಷಯ ತಿಳಿಸಿರುವುದಲ್ಲದೆ, ಪತ್ರಿಕೆಗಳ ಹಾಳೆ (4ನೇ ಪುಟಕ್ಕೆ)

## 180 ಅಡಿ ತಲುಪಿದ ಭದ್ರಾ ಜಲಾಶಯ

ಶಿವಮೊಗ್ಗ, ಆ.18- ಭದ್ರಾ ಜಲಾಶಯದ ನೀರಿನ ಮಟ್ಟ ಮಂಗಳವಾರ ರಾತ್ರಿ 180 ಅಡಿ ತಲುಪಿದ್ದು ಜಲಾಶಯ ಭರ್ತಿಗೆ 6 ಅಡಿ ಮಾತ್ರ ಬಾಕಿ ಉಳಿದಿದೆ. ಜಲಾಶಯಕ್ಕೆ 12 (4ನೇ ಪುಟಕ್ಕೆ)

# ಆ್ಯಪ್‌ನಿಂದ ರೈತರಿಗೆ ಸ್ವಾತಂತ್ರ್ಯ

### ಕತ್ತಲಗೆರೆ : ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಪ್ರಾತ್ಯಕ್ಷಿಕೆಯಲ್ಲಿ ಸಚಿವ ಬಿ.ಸಿ. ಪಾಟೀಲ್




ಚನ್ನಗಿರಿ, ಆ.18- ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ರೈತರಿಂದಲೇ ಬೆಳೆ ಸಮೀಕ್ಷೆ ನಡೆಸುವ ಆ್ಯಪ್ ಬಿಡುಗಡೆ ಮಾಡಲಾಗಿದೆ. ಈ ಬೆಳೆ ಸಮೀಕ್ಷೆ ಉತ್ಸವವನ್ನು ಒಂದು ರೀತಿ ಹಬ್ಬದ ರೀತಿಯಲ್ಲಿ ಆಚರಿಸೋಣ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ಚನ್ನಗಿರಿ ತಾಲ್ಲೂಕಿನ ಕತ್ತಲಗೆರೆ ಗ್ರಾಮದ ನಾರಪ್ಪನವರ ಜಮೀನಿನಲ್ಲಿ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಳಿಕ ಸುದ್ದಿಗಾರರರೊಂದಿಗೆ ಅವರು ಮಾತನಾಡಿದರು.

ಈ ಹಿಂದೆ ರೈತರಿಗೆ ತಮ್ಮ ಬೆಳೆ ಕುರಿತು ಸಮೀಕ್ಷೆ ನಡೆಸುವ ಸ್ವಾತಂತ್ರ್ಯವನ್ನು ಯಾವತ್ತೂ ಕೊಟ್ಟಿರಲಿಲ್ಲ. ಬೆಳೆ ಸಮೀಕ್ಷೆ ಮೂಲಕ ರೈತರಿಗೆ ವಿಶೇಷ ಸ್ವಾತಂತ್ರ್ಯ ಲಭಿಸಿದೆ. ಒಮ್ಮೊಮ್ಮೆ ಪಿಆರ್‌ಒಗಳಿಗೆ ರೈತರೊಂದಿಗೆ ವೈಮನಸ್ಸಿದ್ದರೆ ಅವರ ಬೆಳೆ ಫೋಟೊ ಹಾಕುತ್ತಿರಲಿಲ್ಲ. ಇಂತಹ ಸನ್ನಿವೇಶಗಳಿಂದ ರೈತರಿಗೆ ತೊಂದರೆ ಯಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ರೈತರಿಗೆ ಆ್ಯಪ್ ಅನುಕೂಲವಾಗಿದೆ ಎಂದರು. (4ನೇ ಪುಟಕ್ಕೆ)

## ಸಮಾಜ ದ್ರೋಹಿ ಸಂಘಟನೆಗಳನ್ನು ನಿಷೇಧಿಸಲಿ : ಸಚಿವ

ದಾವಣಗೆರೆ, ಆ.18- ಯಾವ ಸಂಘಟನೆಗಳ ಸಮಾಜ ದ್ರೋಹಿ ಕೆಲಸ ಮಾಡುತ್ತವೋ ಅಂತಹ ಸಂಘಟನೆಗಳನ್ನು ಮುಲಾಜಿಲ್ಲದೆ ನಿಷೇಧ ಮಾಡಬೇಕು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ಡಿ.ಜಿ. ಹಳ್ಳಿ ಘಟನೆ ರಾಜಕೀಯ ಪಿತೂರಿ ಎಂದು ಹೇಳಿದ ಅವರು, ಅಖಂಡ ಶ್ರೀನಿವಾಸ ಮೂರ್ತಿ ಕಾಂಗ್ರೆಸ್ ಪಕ್ಷದ ದಲಿತ ಶಾಸಕ, ಅವರ (4ನೇ ಪುಟಕ್ಕೆ)

# ಸೆ.30ರ ಪರೀಕ್ಷಾ ಗಡುವು ಆದೇಶವಲ್ಲ

### ಪರೀಕ್ಷೆ ನಡೆಸದೇ ಪದವಿ ನೀಡಲಾಗದು : ಯು.ಜಿ.ಸಿ.

ನವದೆಹಲಿ, ಆ. 18 – ಸೆಪ್ಟೆಂಬರ್ 30ರೊಳಗೆ ವಿಶ್ವವಿದ್ಯಾನಿಲಯ ಹಾಗೂ ಕಾಲೇಜುಗಳು ಅಂತಿಮ ಪರೀಕ್ಷೆ ಪೂರೈಸಬೇಕು ಎಂಬುದು ನಿರ್ದೇಶನವೇ ಹೊರತು ಆದೇಶವಲ್ಲ ಎಂದು ಹೇಳಿರುವ ಯು.ಜಿ.ಸಿ., ಪರೀಕ್ಷೆ ನಡೆಸದೇ ಪದವಿಯನ್ನು ನೀಡಲಾಗದು ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ವಿಶ್ವವಿದ್ಯಾನಿಲಯ ಧನ ವಿನಿಯೋಗ ಆಯೋಗ (ಯು.ಜಿ.ಸಿ.) ಪರವಾಗಿ ಸುಪ್ರೀಂ ಕೋರ್ಟ್ ಎದುರು ಹಾಜರಿದ್ದು ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ, (5ನೇ ಪುಟಕ್ಕೆ)


## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



### ಶ್ರೀ ಪಲ್ಲಾಗಟ್ಟಿ ಕೊಟ್ರೇಶಪ್ಪ

ನಿವೃತ್ತ ಉಪ ಪ್ರಧಾನ ವ್ಯವಸ್ಥಾಪಕರು
ದಿ. ದಾವಣಗೆರೆ ಅರ್ಬನ್ ಕೋ. ಆಪರೇಟಿವ್ ಬ್ಯಾಂಕ್, ದಾವಣಗೆರೆ.
ಇವರು ದಿನಾಂಕ 15.08.2020ನೇ ಶನಿವಾರದಂದು ಸಂಜೆ ನಿಧನರಾದ ಪ್ರಯುಕ್ತ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ 19.08.2020 ನೇ ಬುಧವಾರ ಮಧ್ಯಾಹ್ನ 12.30 ಗಂಟೆಗೆ**
**ದಾವಣಗೆರೆ ಕೆ.ಬಿ. ಬಡಾವಣೆ, ಕೆ.ಇ.ಬಿ. ಎದುರಿನಲ್ಲಿರುವ ಮೃತರ ಸ್ವಗೃಹದಲ್ಲಿ**
ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ
ಪತ್ನಿ : ಶ್ರೀಮತಿ ಪಲ್ಲಾಗಟ್ಟೆ ದಾಕ್ಷಾಯಣಮ್ಮ ಮತ್ತು ಮಕ್ಕಳು
ಪಲ್ಲಾಗಟ್ಟೆ ರಾಜಶೇಖರಪ್ಪ ಮತ್ತು ಸಹೋದರ ಮತ್ತು ಸಹೋದರಿಯರು
ಪಲ್ಲಾಗಟ್ಟೆ ವಂಶಸ್ಥರು ಮತ್ತು ಬಂಧು-ಮಿತ್ರರು.


# ಸಾರ್ವಜನಿಕ ಗಣೇಶೋತ್ಸವಕ್ಕೆ ರಾಜ್ಯ ಸರ್ಕಾರದ ಅನುಮತಿ

### ಹಬ್ಬದ ಆಚರಣೆಗೆ ಪರಿಷ್ಕೃತ ಮಾರ್ಗಸೂಚಿ ಪ್ರಕಟ

ಬೆಂಗಳೂರು, ಆ. 18- ಸಾರ್ವಜನಿಕರಿಗೆ ಅಡ್ಡಿಯಾಗದ ರೀತಿಯಲ್ಲಿ ಗಣೇಶೋತ್ಸವ ಆಚರಣೆಗೆ ರಾಜ್ಯ ಸರ್ಕಾರ ಇಂದಿಲ್ಲಿ ಅನುಮತಿ ನೀಡಿದೆ.

ಕೊರೊನಾ ಸಾಂಕ್ರಾಮಿಕ ರೋಗ ಹರಡುವುದನ್ನು ತಡೆಯುವ ಉದ್ದೇಶದಿಂದ ಸಾರ್ವಜನಿಕವಾಗಿ ಹಬ್ಬ ಆಚರಣೆಗೆ ನಿಷೇಧ ಮಾಡಿದ್ದ ಸರ್ಕಾರ ಇಂದು ಪರಿಷ್ಕೃತ ಮಾರ್ಗಸೂಚಿ ಹೊರಡಿಸಿ, ಹಬ್ಬ ಆಚರಣೆಗೆ ಅನುವು ಮಾಡಿಕೊಟ್ಟಿದೆ.

ಈ ಸಂಬಂಧ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಟ್ವೀಟ್ ಮಾಡಿ, ಕೊರೊನಾ ಸಾಂಕ್ರಾಮಿಕ ಹಿನ್ನೆಲೆಯಲ್ಲಿ ಜನರ ಧಾರ್ಮಿಕ ಭಾವನೆಗಳಿಗೆ ಸ್ಪಂದಿಸಿ, ಗಣೇಶೋತ್ಸವ ಆಚರಣೆಗೆ ಧಕ್ಕೆ ಬಾರದಂತೆ ಮಾರ್ಗಸೂಚಿಗಳನ್ನು ರೂಪಿಸಿದೆ ಎಂದು ಹೇಳಿದ್ದಾರೆ. ಸೋಂಕು ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, (5ನೇ ಪುಟಕ್ಕೆ)

## ಗಣೇಶೋತ್ಸವದ ವೇಳೆ ಮೆರವಣಿಗೆ, ಮನರಂಜನೆ ಇಲ್ಲ

ದಾವಣಗೆರೆ, ಆ. 18 – ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಆದೇಶ ಹೊರಡಿಸಿದ್ದಾರೆ. ಆದರೆ, ಮೆರವಣಿಗೆ ಹಾಗೂ ಮನರಂಜನಾ ಕಾರ್ಯಕ್ರಮಗಳ ಮೇಲೆ ನಿರ್ಬಂಧ ಹೇರಲಾಗಿದೆ.

ಕೊರೊನಾ ಹಿನ್ನೆಲೆಯಲ್ಲಿ ಹಲವು ನಿರ್ಬಂಧಗಳ ಸಮೇತ ಸಾರ್ವಜನಿಕ ಗಣೇಶೋತ್ಸವ ಆಚರಿಸಲು ಅನುಮತಿ ನೀಡಲಾಗಿದೆ.

ಸಾರ್ವಜನಿಕ ಗಣೇಶ ಮೂರ್ತಿ 4 ಅಡಿ ಎತ್ತರ ಮೀರಬಾರದು. ಪ್ರತಿಷ್ಠಾಪನೆ ಸ್ಥಳದಲ್ಲಿ ಯಾವುದೇ ಸಂಗೀತ – ನೃತ್ಯ, (5ನೇ ಪುಟಕ್ಕೆ)

## ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರದ ಸ್ವಾಯತ್ತತೆಗೆ ಮನವಿ

ನವದೆಹಲಿ, ಆ. 18 – ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಸ್ವಾಯತ್ತ ಸ್ಥಾನಮಾನ ನೀಡುವಂತೆ ಕೇಂದ್ರ ಶಿಕ್ಷಣ ಸಚಿವ ರಮೇಶ್ ಪೊಖ್ರಿಯಾಲ್‌ಗೆ ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ.ಟಿ. ರವಿ ಒತ್ತಾಯಿಸಿದ್ದಾರೆ.


2011ರಲ್ಲಿ ಮೈಸೂರಿನಲ್ಲಿರುವ ಕೇಂದ್ರೀಯ ಭಾರತೀಯ ಭಾಷಾ ಸಂಸ್ಥೆಯಲ್ಲಿ ಕನ್ನಡ ಕೇಂದ್ರ ಸ್ಥಾಪಿಸಲಾಗಿತ್ತು.

ಈ ಕೇಂದ್ರದ ಕಟ್ಟಡ ಹಾಗೂ ತಾತ್ಕಾಲಿಕ ಕಚೇರಿಗಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯ ಸರ್ಕಾರ ಈಗಾಗಲೇ 3 ಎಕರೆ ಜಾಗ ನೀಡಿದೆ.

## ಜಿಲ್ಲೆಯಲ್ಲಿ 332 ಕೊರೊನಾ ಪಾಸಿಟಿವ್, 45 ಮಂದಿ ಗುಣಮುಖ

ದಾವಣಗೆರೆ, ಆ.18- ಜಿಲ್ಲೆಯಲ್ಲಿ ಇಂದು 332 ಕೊರೊನಾ ಪಾಸಿಟಿವ್ ಪ್ರಕರಣಗಳು ವರದಿಯಾಗಿದ್ದು, 45 ಮಂದಿ ಸಂಪೂರ್ಣ ಗುಣಮುಖರಾಗಿ ನಿಗದಿತ ಕೋವಿಡ್ ಆಸ್ಪತ್ರೆಯಿಂದ ಬಿಡುಗಡೆಗೊಳಿಸಲಾಗಿದೆ. 1 ಸಾವು ಸಂಭವಿಸಿದೆ. ಈ ದಿನ ದಾವಣಗೆರೆಯಲ್ಲಿ 206, ಹರಿಹರ 42, ಜಗಳೂರು 25, ಚನ್ನಗಿರಿ 19, ಹೊನ್ನಾಳಿ 29 ಹಾಗೂ ಅಂತರ್‌ಜಿಲ್ಲೆಯಿಂದ 11, ಕೋವಿಡ್ 19 ಪ್ರಕರಣಗಳು ಇಂದು ವರದಿಯಾಗಿದೆ.

**ಇಂದು ತಾಲ್ಲೂಕುವಾರು ಬಿಡುಗಡೆಯಾದವರು :** ದಾವಣಗೆರೆ 29, ಹರಿಹರ 05, ಜಗಳೂರು 01, ಚನ್ನಗಿರಿ 03, ಹೊನ್ನಾಳಿ 07 ಸೇರಿದಂತೆ ಒಟ್ಟು 45 ಮಂದಿ ಸಂಪೂರ್ಣ ಗುಣಮುಖರಾಗಿ ಜಿಲ್ಲಾ (4ನೇ ಪುಟಕ್ಕೆ)




## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಷೆಡ್ಯೂಲ್ ಸ್ಥಿರ ಸೊತ್ತನ್ನು ಅದರ ಮಾಲೀಕರಾದ **(1) ಶ್ರೀ ಎ.ಜಿ. ವಿಠಲ್ ಬಿನ್ ಶ್ರೀ ಗಣಪತಿಭಟ್ ಅವಾಜಿ (2) ಶ್ರೀಮತಿ ಚಂದ್ರಕಲಾ ವಿ.ಎ. ಕೋಂ. ಶ್ರೀ ಎ.ಜಿ. ವಿಠಲ್ (3) ಶ್ರೀ ಸತ್ಯನಾರಾಯಣ ರಾಯ್ಕರ್ ಬಿನ್ ಶ್ರೀ ರಾಮರಾವ್ ರಾಯ್ಕರ್ ಹಾಗೂ (4) ಶ್ರೀಮತಿ ಶಶಿಕಲಾ ಎಸ್. ರಾಯ್ಕರ್ ಕೋಂ. ಶ್ರೀ ಸತ್ಯನಾರಾಯಣ ರಾಯ್ಕರ್,** ದಾವಣಗೆರೆ ಇವರುಗಳು ನನ್ನ ಕಕ್ಷಿದಾರರಾದ **ಶ್ರೀ ಎಂ.ಎನ್. ಬಸವರಾಜ್ ಬಿನ್ ಶ್ರೀ ಎಂ. ನಾಗಬಸಪ್ಪ, ಬೇತೂರು/ ದಾವಣಗೆರೆ** ಇವರಿಗೆ **ದಿನಾಂಕ : 13.2.2015 ರಂದು ರೂ. 80,00,000/-ಗಳಿಗೆ ಶುದ್ಧ ಕ್ರಯಕ್ಕೆ ಮಾರಾಟ ಮಾಡಲು ಒಪ್ಪಿ ಆ ದಿನ ಒಂದು ರಿಜಿಸ್ಟರ್ ಕ್ರಯದ ಕರಾರು ಪತ್ರ ಬರೆದುಕೊಟ್ಟು ರೂ. 25,00,000/-ಗಳನ್ನು** ಮುಂಗಡವಾಗಿ ಪಡೆದಿರುತ್ತಾರೆ.

ನಂತರ ಮತ್ತೆ ದಿನಾಂಕ : 17.2.2015 ರಂದು ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್, ಶ್ರೀ ಎ.ಜಿ. ವಿಠಲ್, ಶ್ರೀಮತಿ ಚಂದ್ರಕಲಾ ಹಾಗೂ ಶ್ರೀಮತಿ ಶಶಿಕಲಾ ಇವರು ನನ್ನ ಕಕ್ಷಿದಾರರಿಂದ ಹೆಚ್ಚಿನ ಮುಂಗಡ ಹಣ ರೂ. 25,00,000/-ಗಳನ್ನು ಪಡೆದುಕೊಂಡು ಒಂದು ಷರಾ ಪತ್ರ ಬರೆದುಕೊಟ್ಟು ವಾಯಿದೆ ಮುಂದುವರೆಸಿ, ಷೆಡ್ಯೂಲ್ ಸೊತ್ತಿನ ಬಗ್ಗೆ ಎಲ್ಲಾ ದಾಖಲೆಗಳನ್ನು ಒದಗಿಸಿಕೊಟ್ಟು ನನ್ನ ಕಕ್ಷಿಗಾರರಿಗೆ ಕ್ರಯಪತ್ರ ಬರೆಸಿಕೊಟ್ಟು ರಿಜಿಸ್ಟರ್ ಮಾಡಿಸಿಕೊಡಲೊಪ್ಪಿರುತ್ತಾರೆ. ಈ ಬಗ್ಗೆ ತಗಲುವ ಖರ್ಚನ್ನು ನನ್ನ ಕಕ್ಷಿಗಾರರೇ ವಹಿಸಬೇಕೆಂದು ಒಪ್ಪಂದವಾಗಿರುತ್ತದೆ.

ನನ್ನ ಕಕ್ಷಿದಾರರು ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್, ಶ್ರೀ ಎ.ಜಿ. ವಿಠಲ್, ಶ್ರೀಮತಿ ಚಂದ್ರಕಲಾ ಹಾಗೂ ಶ್ರೀಮತಿ ಶಶಿಕಲಾ ಇವರುಗಳನ್ನು ಕ್ರಯದ ಕರಾರು ಪತ್ರ ಹಾಗೂ ಷರಾ ಪತ್ರದನ್ವಯ ರಿಜಿಸ್ಟರ್ಡ್ ಕ್ರಯಪತ್ರವನ್ನು ಅವರ ಖರ್ಚಿನಲ್ಲಿ ಮಾಡಿಸಿಕೊಳ್ಳಲು ಸದಾ ಸಿದ್ಧನಿದ್ದೇನೆಂದು ತಿಳಿಸಿ ಕೇಳುತ್ತಾ ಬಂದಿದ್ದರೂ ಸದರಿ 4 ಜನರೂ ಒಂದಲ್ಲ ಒಂದು ಸಬೂಬು/ಕಾರಣ ನೀಡುತ್ತಾ ಕ್ರಯಪತ್ರ ರಿಜಿಸ್ಟರ್ ಮಾಡಿಸಿಕೊಡದೇ ಮುಂದೂಡುತ್ತಾ ಬಂದು ಕರಾರಿನ ಷರತ್ತುಗಳನ್ನು ಅವರೇ ಉಲ್ಲಂಘಿಸಿ ತಪ್ಪಿತಸ್ಥರಾಗಿರುತ್ತಾರೆ.

ಈ ವಿಚಾರವಾಗಿ ನನ್ನ ಕಕ್ಷಿಗಾರರು ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್ ಹಾಗೂ ಇತರೆ ಮೂವರನ್ನು ಆಗಸ್ಟ್ 2020ರ ಮೊದಲನೇ ವಾರದಲ್ಲಿ ಷೆಡ್ಯೂಲ್ ಸೊತ್ತನ್ನು ಅವರ ಕರಾರಿನ ಷರತ್ತುಗಳ ಹಾಗೂ ಷರಾಪತ್ರದ ಷರತ್ತುಗಳನ್ವಯ ರಿಜಿಸ್ಟರ್ ಮಾಡಿಸಿಕೊಡಲು ಕೇಳಿದಾಗ ಸದ್ರಿ ಶ್ರೀ ಎ.ಜಿ. ವಿಠಲ್, ಶ್ರೀಮತಿ ಚಂದ್ರಕಲಾ, ಶ್ರೀ ಸತ್ಯನಾರಾಯಣ ರಾಯ್ಕರ್ ಹಾಗೂ ಶ್ರೀಮತಿ ಶಶಿಕಲಾ ಇವರುಗಳು ಹಾರಿಕೆ ಉತ್ತರ ನೀಡಿದ್ದು, ನನ್ನ ಕಕ್ಷಿದಾರರು ಮುಂದಿನ ಕಾನೂನು ಕ್ರಮ ಜರುಗಿಸುವ ಸಲುವಾಗಿ ದಾಖಲೆಗಳನ್ನು ತೆಗೆಸಲು ಮುಂದಾದಾಗ ಅವರಿಗೆ ಸಿಕ್ಕ ಸುಳಿವಿನ ಮಾಹಿತಿ ಪ್ರಕಾರ ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್, ಶ್ರೀ ಎ.ಜಿ. ವಿಠಲ್ ಹಾಗೂ ಇನ್ನಿಬ್ಬರು ತಾವೇ ಬರೆದುಕೊಟ್ಟಿರುವ ರಿಜಿಸ್ಟರ್ಡ್ ಕ್ರಯದ ಕರಾರಿನ ವಿರುದ್ಧ ನನ್ನ ಕಕ್ಷಿಗಾರರಿಗೆ ಮೋಸ, ಅನ್ಯಾಯ ಹಾಗೂ ದುರುದ್ದೇಶಪೂರ್ವಕವಾದ ನಷ್ಟ ಉಂಟುಮಾಡುವ ಇರಾದೆಯಿಂದ ಷೆಡ್ಯೂಲ್ ಸೊತ್ತನ್ನು ಪರಿವರ್ತನೆಗೊಂಡ ಜಮೀನಿನಿಂದ ನಿವೇಶನಗಳನ್ನಾಗಿ ವಿಂಗಡಿಸಿ, ತಾವೇ ಆ ನಿವೇಶನಗಳ ಸಂಪೂರ್ಣ ಹಕ್ಕುದಾರಿ, ಮಾಲೀಕರೆಂದು ಅಕ್ರಮವಾಗಿ ಘೋಷಿಸಿಕೊಂಡು ಸದರಿ ನಿವೇಶನಗಳ ಪೈಕಿ ಹಲವಾರು ನಿವೇಶನಗಳನ್ನು **1) ಶ್ರೀ ಅಮೃತೇಶ್ ಎಂ. ಶೇಟ್ ಬಿನ್ ಮಧುಕರ್ ಶೇಟ್, 2) ಶ್ರೀಮತಿ ಶ್ವೇತಾ ಆರ್. ವಿಠಲ್‌ಕರ್ ಕೋಂ. ವಿ.ಎಸ್. ರಾಘುವೇಂದ್ರ, 3) ಶ್ರೀಮತಿ ರಾಜೇಶ್ವರಿ ಶೇಟ್ ಕೋಂ. ರಾಘುವೇಂದ್ರ ಶೇಟ್, 4) ಶ್ರೀ ರಾಘುವೇಂದ್ರ ಡಿ. ರೇವಣಕರ್ ಬಿನ್ ದತ್ತಾತ್ರೇಯ ರೇವಣಕರ್, 5) ಶ್ರೀ ಪ್ರಭಾಕರ ರಾಯ್ಕರ್ ಬಿನ್ ರಾಮಚಂದ್ರ ರಾಯ್ಕರ್, 6) ಶ್ರೀ ಇಂದರ್‌ಮಲ್ ಬಿನ್ ಕಪೂರ್‌ಚಂದ್, 7) ಶ್ರೀ ಪ್ರಸಾದ್ ರಾಮಕೃಷ್ಣ ರಾಯ್ಕರ್ ಬಿನ್ ರಾಮಕೃಷ್ಣ ರಾಯ್ಕರ್, 8) ಶ್ರೀಮತಿ ಪ್ರಿಯ ಎಸ್.ಎಲ್. ಬಿನ್ ಲೋಕೇಶ್ ಎಸ್.ಎಂ., 9) ಶ್ರೀ ಉಮೇಶ್ ಪುರುಷನ್ ಬಿನ್ ನಾರಾಯಣ ಪುರುಷನ್, 10) ಶ್ರೀ ಹರೀಶ್ ಎಸ್. ಬಿನ್ ಡಿ. ನಾಗಪ್ಪ, 11) ಶ್ರೀ ವಿಜಯಕುಮಾರ್ ಆರ್. ಜೈನ್ ಬಿನ್ ರಮಣಲಾಲ್ ಜೈನ್, 12) ಶ್ರೀಮತಿ ಶೀತಲ್ ಕೋಂ. ಮಂಜುನಾಥ ಕೆ., 13) ಶ್ರೀಮತಿ ಸುಜಾತಬಾಯಿ ಕೋಂ. ಪಿ. ಕೃಷ್ಣರಾವ್, 14) ಶ್ರೀಮತಿ ರೂಪ ಎಸ್. ಕುರ್ಡೇಕರ್ ಕೋಂ. ಸುಬ್ರಾಯ ಕುರ್ಡೇಕರ್, 15) ಶ್ರೀಮತಿ ಪಾರ್ವತಿ ಕೋಂ. ಈ ನಾಗರಾಜ, 16) ಶ್ರೀ ಜೆ.ಹೆಚ್. ಶ್ರೀನಿವಾಸ ಬಿನ್ ಜೆ. ಹಾಲಪ್ಪ, 17) ಶ್ರೀಮತಿ ಜ್ಯೋತಿಶ್ರೀ ಕೋಂ. ಶ್ರೀ ಕೆ. ಯಲ್ಲಪ್ಪ, 18) ಶ್ರೀ ಮಂಜುನಾಥ ಜೆ. ಬಿನ್ ಎಂ. ಜಗದೀಶ್, 19) ಶ್ರೀ ಕೆ. ಜನಾರ್ಧನ್ ಬಿನ್ ಕೃಷ್ಣ ಶೇಟ್, 20) ಶ್ರೀಮತಿ ವಿನೋದ ವಿ.ಎ. ಕೋಂ. ವಸಂತ್‌ಭಟ್ ಅವಾಜಿ, 21) ಶ್ರೀ ಜಿ. ಮೃತ್ಯುಂಜಯ ಬಿನ್ ಲೇಟ್ ಗುರುಪಾದಪ್ಪ, 22) ಶ್ರೀ ಬಾಬಾನಂದ್ ನಾಗೇಶ್ ಅಣ್ವೇಕರ್ ಬಿನ್ ನಾಗೇಶ್ ಜಿ. ಅಣ್ವೇಕರ್, 23) ಶ್ರೀ ಗಣೇಶ್ ಗೋಪಿನಾಥ ಕುರ್ಡೇಕರ್ ಬಿನ್ ಗೋಪಿನಾಥ ಬಾಬು, 24) ಶ್ರೀ ಪಿ.ಎಂ. ಶಬ್ಬೀರ್ ಅಹಮದ್ ಬಿನ್ ಪಿ. ಮಹಬೂಬ್‌ಸಾಬ್** ಹಾಗೂ ಇತರೆ ಹಲವಾರು ವ್ಯಕ್ತಿಗಳಿಗೆ ಅಕ್ರಮವಾಗಿ, ಕಾನೂನು ವಿರುದ್ಧ ಕ್ರಯಪತ್ರಗಳನ್ನು ಸೃಷ್ಟಿಸಿ ಮಾರಾಟ ಮಾಡಿದಂತೆ ತೋರಿಸಿ ಅಕ್ರಮ ಲಾಭ ಮಾಡಿಕೊಂಡು ಅವುಗಳನ್ನು ವಿಲೇಪಡಿಸಿರುತ್ತಾರೆಂದು ತಿಳಿದಿರುತ್ತೆ.

ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್, ಶ್ರೀ ಎ.ಜಿ. ವಿಠಲ್, ಶ್ರೀಮತಿ ಚಂದ್ರಕಲಾ ಹಾಗೂ ಶ್ರೀಮತಿ ಶಶಿಕಲಾ ಇವರುಗಳು ಅಕ್ರಮವಾಗಿ ಆ ರೀತಿ ಮಾಡಿಕೊಟ್ಟಿರುವ ಯಾವುದೇ ಕ್ರಯಪತ್ರಗಳು ಸಿಂಧುವಾಗತಕ್ಕವುಗಳಲ್ಲ ಹಾಗೂ ನನ್ನ ಕಕ್ಷಿಗಾರರ ಹಕ್ಕಿಗೆ ಬಾಧಿಸುವುದಿಲ್ಲ. ಆ ದಾಖಲೆಗಳು ಖೊಟ್ಟಿ ಹಾಗೂ ಕಾನೂನು ಬಾಹಿರವಾಗಿದ್ದು ಅವುಗಳಿಂದ ಯಾರಿಗೂ ಯಾವ ರೀತಿಯ ಹಕ್ಕು, ಅಧಿಕಾರ, ಮಾಲೀಕತ್ವ ಲಭಿಸುವುದಿಲ್ಲ.

ಕಾರಣ, ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿಗಾರರಾದ ಶ್ರೀ ಎಂ.ಎನ್. ಬಸವರಾಜ್ ಇವರು ಸದರಿ ಶ್ರೀ ಎ.ಜಿ. ವಿಠಲ್, ಶ್ರೀ ಸತ್ಯನಾರಾಯಣ ರಾಯ್ಕರ್, ಶ್ರೀಮತಿ ಚಂದ್ರಕಲಾ ಹಾಗೂ ಶ್ರೀಮತಿ ಶಶಿಕಲಾ ಇವರುಗಳಿಗೆ ನೋಟೀಸು ನೀಡಿ ಷೆಡ್ಯೂಲ್ ಸೊತ್ತನ್ನು ಕ್ರಯಪತ್ರ ರಿಜಿಸ್ಟರ್ ಮಾಡಿಸಿಕೊಡುವುದರ ಮೂಲಕ ಹಕ್ಕು ವರ್ಗಾವಣೆ ಮಾಡಿಸಿಕೊಡಲು ಸೂಕ್ತ ನ್ಯಾಯಾಲಯದಲ್ಲಿ ದಾವೆ ಹೂಡಿ ಪರಿಹಾರಗಳನ್ನು ಕೋರುವವರಿದ್ದಾರೆ. ಆದ ಕಾರಣ ಸಾರ್ವಜನಿಕರು ಯಾರೂ ಸದರಿ ಶ್ರೀ ಸತ್ಯನಾರಾಣರಾಯ್ಕರ್, ಶ್ರೀ ಎ.ಜಿ.ವಿಠಲ್, ಶ್ರೀಮತಿ ಚಂದ್ರಕಲಾ ಹಾಗೂ ಶ್ರೀಮತಿ ಶಶಿಕಲಾ ಇವರೊಡನೇ ಆಗಲೀ ಅಥವಾ ಷೆಡ್ಯೂಲ್ ಸೊತ್ತಿನಲ್ಲಿ ವಿಂಗಡಿಸಿದವೆಂದು ಹೇಳಲಾದ ನಿವೇಶನಗಳನ್ನು ಖರೀದಿಸಿದ್ದೇನೆಂದು ಹೇಳತಕ್ಕ ಯಾರೊಡನೇ ಆಗಲಿ ಈ ಸೊತ್ತುಗಳ ಕುರಿತು ಯಾವುದೇ ರೀತಿಯ ಕ್ರಯ, ವರ್ಗಾವಣೆ, ಭೋಗ್ಯ, ಆಧಾರ ಅಥವಾ ಇನ್ನಾವುದೇ ರೀತಿಯ ಪರಭಾರೆ ಕ್ರಮಗಳನ್ನು ಯಾವೊಂದು ರೀತಿಯಿಂದಲೂ ಮಾಡಬಾರದೆಂದು ತಿಳಿಸಲಾಗಿದೆ.

ಹಾಗೊಂದು ವೇಳೆ ಯಾರಾದರೂ ಸದರಿ ಶ್ರೀ ಸತ್ಯನಾರಾಯಣ ರಾಯ್ಕರ್ ಹಾಗೂ ಇತರೆಯವರೊಂದಿಗೆ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಅಥವಾ ಅದರಲ್ಲಿ ವಿಂಗಡಿಸಿದವೆಂದು ಹೇಳಲಾದ ಯಾವುದೇ ನಿವೇಶನಗಳ ಕುರಿತು ಯಾವುದೇ ದಾಖಲೆ, ವ್ಯವಹಾರ ಹಾಗೂ ಚಟುವಟಿಕೆಗಳನ್ನು ಮಾಡಿದಲ್ಲಿ ಅವು ಅಕ್ರಮ ಹಾಗೂ ನನ್ನ ಕಕ್ಷಿಗಾರರನ್ನು ಎಳ್ಳಷ್ಟು ಮಾತ್ರವೂ ಪ್ರತಿಬಂಧಿಸುವುದಿಲ್ಲ. ಮತ್ತು ಅಂತಹ ಅಕ್ರಮ ವ್ಯವಹಾರಗಳಿಗೆ ಆಯಾಯ ವ್ಯಕ್ತಿಗಳು ತಾವೇ ಜವಾಬ್ದಾರರಾಗುತ್ತಾರೆ ವಿನಃ ನನ್ನ ಕಕ್ಷಿಗಾರರ ಹಕ್ಕುಗಳು ಎಳ್ಳಷ್ಟು ಕುಂಠಿತವಾಗುವುದಿಲ್ಲ. ಅಂತಹ ಎಲ್ಲಾ ವ್ಯವಹಾರ ಹಾಗೂ ದಾಖಲೆಗಳು ಅಕ್ರಮ ಹಾಗೂ ಅಸಿಂಧುವಾಗುತ್ತವೆ. ತಿಳಿಯತಕ್ಕದ್ದು.

**ಷೆಡ್ಯೂಲ್ : ದಾವಣಗೆರೆ ಸಬ್‌ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು ಕುಂದುವಾಡ ಗ್ರಾಮದ ರಿ. ಸರ್ವೆ ನಂಬರ್ 176/1 ಉಳ್ಳ ವಿಸ್ತೀರ್ಣ, ಎಕರೆ ನಾಲ್ಕು ಗುಂಟೆ-ಇಲ್ಲ, ವಾಸೋಪಯೋಗಕ್ಕಾಗಿ ದಾವಣಗೆರೆ ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ ALN/ಸಕಾಲ/ಸಿಆರ್/183/2013-14, ಸಂಖ್ಯೆ ALN/ಸಕಾಲ/SR-11/2014-15 ದಿನಾಂಕ : 17.5.2014 ಪ್ರಕಾರ ಅಲಿನೇಷನ್ ಆಗಿರುವ ಜಮೀನು ಪ್ರದೇಶಕ್ಕೆ ಚಕ್ಕುಬಂದಿ ಪೂರ್ವಕ್ಕೆ : ರಿ. ಸರ್ವೆ ನಂಬರ್ 188ರ ಜಮೀನು, ಪಶ್ಚಿಮಕ್ಕೆ : ರಿ. ಸರ್ವೆ ನಂಬರ್ 276ರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಿ. ಸರ್ವೆ ನಂಬರ್ 176/15ರ ಜಮೀನು, ಈ ಮಧ್ಯದ ಒಂದು ಜಮೀನು.**

ದಾವಣಗೆರೆ.
ದಿನಾಂಕ : 17-08-2020

ಸಹಿ/- ಮಲ್ಲಿಕಾರ್ಜುನ ಕಣವಿ, B.A. L.L.M.,
ವಕೀಲರು,
5 ಹಾಗೂ 6, 1ನೇ ಮಹಡಿ, ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಎದುರು, ಪೂನಾ-ಬೆಂಗಳೂರು ರಸ್ತೆ, ದಾವಣಗೆರೆ-577 006.

# ಸ್ಥಳೀಯರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಿ, ಕಾಮಗಾರಿ ಆರಂಭಿಸಲಿ

## ಹರಿಹರದ ತರಕಾರಿ ಮಾರುಕಟ್ಟೆ ಮಳಿಗೆ ಕಾಮಗಾರಿ ಗುದ್ದಲಿ ಪೂಜೆಯಲ್ಲಿ ಶಾಸಕ ಎಸ್. ರಾಮಪ್ಪ

ಹರಿಹರ,18- ನಗರದ ಮಧ್ಯಭಾಗದಲ್ಲಿ ಇರುವ ರಾಜಕಾಲುವೆ ಮೇಲೆ ಮಳಿಗೆಗಳು ಕಟ್ಟುವುದಕ್ಕೆ ನಾನು ವಿರೋಧ ಮಾಡಿಲ್ಲ. ಆದರೆ ಸ್ಥಳೀಯರಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಕಲ್ಪಿಸಿದ ನಂತರದಲ್ಲಿ ಕಾಮಗಾರಿ ಪ್ರಾರಂಭಿಸಲಿ ಎಂಬ ಉದ್ದೇಶದಿಂದ ಕಾಮಗಾರಿ ನಿಲ್ಲಿಸಲಾಗಿದೆ ಎಂದು ಶಾಸಕ ಎಸ್. ರಾಮಪ್ಪ ಹೇಳಿದರು.



ನಗರದ ಹಳೇ ಕೋರ್ಟ್ ಸ್ಥಳದಲ್ಲಿ ನಗರಸಭೆ ವತಿಯಿಂದ ಕೇಂದ್ರ ಸರ್ಕಾರದ ದೀನ ದಯಾಳ್ ಯೋಜನೆ ಅಡಿಯಲ್ಲಿ ಸುಮಾರು 44 ಲಕ್ಷ ರೂ. ವೆಚ್ಚದಲ್ಲಿ ತರಕಾರಿ ಮಾರುಕಟ್ಟೆಯ 36 ಮಳಿಗೆ ಕಾಮ ಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಪತ್ರಕರ್ತ ರೊಂದಿಗೆ ಅವರು ಮಾತನಾಡಿದರು.

ರಾಜಕಾಲುವೆ ಸೇತುವೆ ಮೇಲೆ ಮಳಿಗೆಗಳು ನಿರ್ಮಾಣ ಮಾಡುವುದಕ್ಕೆ ನಿರ್ಮಿತಿ ಕೇಂದ್ರದವರಿಂದ 1 ಕೋಟಿ 95 ಲಕ್ಷ ರೂಪಾಯಿ ವೆಚ್ಚದಲ್ಲಿ ಕಾಮಗಾರಿ ಮಾಡುವುದಕ್ಕೆ ವ್ಯವಸ್ಥೆ ಮಾಡಲಾಯಿತು. ಆದರೆ ಸರ್ಕಾರ ಬದಲಾವಣೆ ಆದಮೇಲೆ ಹಣವನ್ನು ನಿಲ್ಲಿಸಲಾಗಿದೆ.

ಹಳೇ ಪಿ.ಬಿ. ರಸ್ತೆಯ ಸೇತುವೆಯ ಬಳಿ ಕಾಮಗಾರಿ ಅರ್ಧದಲ್ಲಿ ನಿಲ್ಲಿಸುವುದಕ್ಕೂ ಇದೇ ಕಾರಣ. ಅಲ್ಲಿ ಕೋಮು ವಿಚಾರಗಳನ್ನು ತಂದು ಅಭಿವೃದ್ಧಿಗೆ ಅಡ್ಡಗಾಲು ಹಾಕಿದರು. ಈ ರೀತಿಯಲ್ಲಿ ತೊಂದರೆ ಆಗಿರುವುದರಿಂದ ಕೆಲವು ಕಾಮಗಾರಿ ಸ್ಥಗಿತಗೊಂಡು ಅಭಿವೃದ್ಧಿ ಕುಂಠಿತವಾಗಿದೆ ಎಂದು ಹೇಳಿದರು.

ರಚನಾ ಕ್ರೀಡಾ ಟ್ರಸ್ಟ್ ಪಕ್ಕದಲ್ಲಿ ಇರುವ ಸ್ಥಳ ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು. ಹಾಗಾಗಿ ಅಲ್ಲಿ ಗುದ್ದಲಿ ಪೂಜೆ ಮಾಡುವುದನ್ನು ತಡೆದು ಪಕ್ಕದಲ್ಲಿ ಕಾಮಗಾರಿ ಪ್ರಾರಂಭಿಸಲು ಸೂಚನೆ ನೀಡಲಾಯಿತು.

ಕಾಂಗ್ರೆಸ್ ಪಕ್ಷದ ಆಸ್ತಿ ಎಂದು ನಮ್ಮಲ್ಲಿ ದಾಖಲೆಗಳು ಇವೆ. ಕೊರೊನಾ ಸಮಸ್ಯೆ ಕಡಿಮೆ ಆದ ನಂತರದಲ್ಲಿ ಪಕ್ಷದ ಕಚೇರಿ ಕಟ್ಟುವುದಕ್ಕೆ ಪ್ರಾರಂಭ ಮಾಡಲಾಗುತ್ತದೆ. ರಚನಾ ಕ್ರೀಡಾ ಟ್ರಸ್ಟ್ ಆಡಳಿತ ಬೇರೆ ಗ್ರಾಮದ ಅಧ್ಯಕ್ಷರ ಕೈಯಲ್ಲಿ ಇರುವುದರಿಂದ ಹಾಗೂ ನಗರಸಭೆಗೆ ನೊಂದಣಿ ಮಾಡಿಸದೆ ಇರುವುದರಿಂದ ರಚನಾ ಕ್ರೀಡಾ ಟ್ರಸ್ಟ್ ನ 160/160 ಅಡಿ ಜಾಗವನ್ನು ನಗರಸಭೆ ವಶಪಡಿಸಿಕೊಳ್ಳಬೇಕು.

ಹರಿಹರ ಟೌನ್ ಪುಟ್ಬಾಲ್ ಸಮಿತಿಯಡಿಯಲ್ಲಿ ಇರುವ ಸ್ಥಳವನ್ನು ಸಹ ನಗರಸಭೆ ವಶಕ್ಕೆ ತೆಗೆದುಕೊಳ್ಳಬೇಕು. ಎಸ್. ಜೆ.ವಿ.ಪಿ. ಕಾಲೇಜು ಹಿಂಬದಿಯಲ್ಲಿ ರಾಜಕಾಲುವೆಯನ್ನು ಕಾಲೇಜು ಆಡಳಿತ ಮಂಡಳಿ 2 ಎಕರೆ ಪ್ರದೇಶವನ್ನು ಒತ್ತುವರಿ ಮಾಡುವುದಕ್ಕೆ ಮುಂದಾಗಿದ್ದು, ಅದನ್ನು ತಡೆಯಬೇಕು. ನಗರಸಭೆ ಅಧ್ಯಕ್ಷರ ಚುನಾವಣೆ ನಡೆದ ತಕ್ಷಣವೇ ನಗರದಲ್ಲಿ ಇರುವ ಸರ್ಕಾರಿ ಜಾಗದಲ್ಲಿ ಪ್ರಬಲವಾದ ವ್ಯಕ್ತಿಗಳು ಆಕ್ರಮವಾಗಿ ಇದ್ದರೂ ಅವರಿಂದ ತೆರವುಗೊಳಿಸಿ ಸುಂದರವಾದ ನಗರವನ್ನು ಮಾಡುವುದಾಗಿ ಹೇಳಿದರು.

ಪೌರಾಯುಕ್ತರಾದ ಎಸ್. ಲಕ್ಷ್ಮೀ ಮಾತನಾಡಿ, ಕೇಂದ್ರ ಸರ್ಕಾರದ ದೀನದಯಾಳ್ ಯೋಜನೆ ಅಡಿಯಲ್ಲಿ ನಿರ್ಮಾಣವಾಗುತ್ತಿರುವ ಸುಮಾರು 36 ಮಳಿಗೆಗಳು ಬಡವರು ವ್ಯಾಪಾರ ವಹಿವಾಟು ಮಾಡುವುದಕ್ಕೆ ಅನುಕೂಲವಾಗಬೇಕು ಎಂಬ ಉದ್ದೇಶದಿಂದ ಮಾಡಲಾಗುತ್ತಿದೆ ಎಂದರು. ಕಾಂಗ್ರೆಸ್ ಪಕ್ಷದ ಜಾಗ ಇದೆ ಎಂದು ನಗರಸಭೆಯ ದಾಖಲೆ ಪುಸ್ತಕದಲ್ಲಿ ಯಾವುದೇ ರೀತಿಯ ನೊಂದಣಿ ಇರುವುದಿಲ್ಲ. ಮುಂದೆ ಅವರು ದಾಖಲೆಗಳನ್ನು ತಂದರೆ ಪರಿಶೀಲನೆ ಮಾಡಲಾಗುತ್ತದೆ ಎಂದು ಹೇಳಿದರು.

ತರಕಾರಿ ವ್ಯಾಪಾರಿ ಮಂಜುಳಾ ಮಾತನಾಡಿ, ತರಕಾರಿ ಹೋಲ್ ಸೇಲ್ ವ್ಯಾಪಾರಸ್ಥರು ಸಹ ಚಿಲ್ಲರೆ ವ್ಯಾಪಾರ ವಹಿವಾಟು ಮಾಡುವುದರಿಂದ ನಮ್ಮಂತ ಚಿಲ್ಲರೆ ವ್ಯಾಪಾರಿಗಳಿಗೆ ತೊಂದರೆ ಆಗುತ್ತಿದೆ. ಅವರನ್ನು ದೂರದ ಎಪಿಎಂಸಿ ಆವರಣದಲ್ಲಿ ವ್ಯಾಪಾರ ವಹಿವಾಟು ಮಾಡುವುದಕ್ಕೆ ಅಧಿಕಾರಿಗಳು ಮತ್ತು ಶಾಸಕರು ಸೂಚನೆ ನೀಡಬೇಕು ಎಂದು ಹೇಳಿದರು.

ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಎಸ್. ಎಂ. ವಸಂತ್, ಕೆ.ಜಿ. ಸಿದ್ದೇಶ್, ಪಿ.ಎನ್. ವಿರೂಪಾಕ್ಷ, ವಿಜಯಕುಮಾರ್, ದಿನೇಶ್ ಬಾಬು, ಅಶ್ವಿನಿ ಕೆ.ಜಿ. ಕೃಷ್ಣ, ನಿತಾ ಮೇಹರ್ವಾಡೆ, ದಾದಾಖಲಂದರ್, ಮಹಬೂಬ್ ಬಾಷಾ, ಮುಜಾಮಿಲ್ ಬಿಲ್ಲು, ಹನುಮಂತಪ್ಪ, ಎವಿಣ ಬಿರಾದಾರ, ನಗರಸಭೆ ಸಿಬ್ಬಂದಿಗಳಾದ ಇಂಜಿನಿಯರ್ ಅಬ್ದುಲ್ ಹಮೀದ್ , ಅನ್ವರ ಪಾಷಾ, ವಸಂತ್, ಮುಖಂಡರಾದ ಮರಿದೇವ್, ಜಾಕಿರ್, ಮನಾಸ್ಸುರ್ ಮದ್ವಿ, ದಾದಾಪೀರ್ ಭಾನುವಳ್ಳಿ ಇನ್ನಿತರರಿದ್ದರು.

## ಜಗಳೂರಿನ ಇಒ ಕಾರು ಅಪಘಾತ; ಅಪಾಯದಿಂದ ಪಾರು



ಜಗಳೂರು, ಆ.18- ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವ ಹಣಾಧಿಕಾರಿ ಮಲ್ಲನಾಯ್ಕ ಅವರ ಬುಲೇರೊ ಕಾರು ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಕಾರು ಪಲ್ಟಿಯಾಗಿರುವ ಘಟನೆ ಜಗಳೂರು ತಾಲ್ಲೂಕಿನ ರಸ್ತೆಮಾಚಿಕೆರೆ ಗ್ರಾಮದ ಸಮೀಪ ನಿನ್ನೆ ನಡೆದಿದೆ.

ಜಗಳೂರಿನಿಂದ ದಾವಣಗೆರೆ ಕಡೆಗೆ ಹೊಗುತ್ತಿದ್ದ ವೇಳೆ ಆ್ಯಕ್ಸಲ್ ಕಟ್ ಆದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿ ಹೊಡೆದಿದೆ.

ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಈ ಘಟನೆ ಜಗಳೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಇನ್ನು ಮಾರ್ಗ ಮಧ್ಯದಲ್ಲಿ ತೆರೆಳುತಿದ್ದ ಶಾಸಕ ಎಸ್.ವಿ. ರಾಮಚಂದ್ರ, ಗಾಯಳುಗಳಿಗೆ ಸಾಂತ್ವನ ಹೇಳಿದರು. ಆಸ್ಪತ್ರೆಗೆ ದಾಖಲಿಸಲು ನೆರವಾದರು.

## ಹರಿರದಲ್ಲಿ ಶಾಲಾ ಕೊಠಡಿ ಉದ್ಘಾಟನೆ



ಹರಿಹರ, ಆ.18- ನಗರದ ಹೆಚ್.ಎಸ್. ಬಡಾವಣೆ ಉರ್ದು ಹಿರಿಯ ಪ್ರಾಥಮಿಕ ಶಾಲೆಯ ಎರಡು ಕೊಠಡಿಗಳನ್ನು ಶಾಸಕ ಎಸ್.ರಾಮಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಬಸವರಾಜಪ್ಪ, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ರಹ್ಮತ್ ವುಲ್ ರೆಹಮಾನ್, ಮುಖಂಡರಾದ ಬಿ.ಮಹ್ಮದ್ ಸಿಗ್ಗಬತ್ತ್‌ವುಲ್ಲಾ, ಅಂಜದ್.ಎಂ.ಬಿ. ಅಬಿದ್ ಅಲಿ, ಎಲ್.ಬಿ. ಹನುಮಂತಪ್ಪ ಮತ್ತಿತರರು ಹಾಜರಿದ್ದರು.

## ಲೆಕ್ಕ ಪರಿಶೋಧಕ ಲಿಂಗರಾಜ್ ಅವರಿಗೆ ದಾವಣಗೆರೆ ಅರ್ಬನ್ ಬ್ಯಾಂಕ್ ಶೋಕ



ದಾವಣಗೆರೆ,ಆ.18- ಹಿರಿಯ ಲೆಕ್ಕ ಪರಿಶೋಧಕರೂ ಆಗಿದ್ದ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ವೃತ್ತಿಪರ ನಿರ್ದೇಶಕ ವಿ.ಲಿಂಗರಾಜ್ ಅವರ ನಿಧನಕ್ಕೆ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನಿಂದ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಬ್ಯಾಂಕಿನ ಸಭಾಂಗಣದಲ್ಲಿ ಬ್ಯಾಂಕಿನ ಅಧ್ಯಕ್ಷ ಕೋಗುಂಡಿ ಬಕ್ಕೇಶಪ್ಪ ಅವರ ಅಧ್ಯಕ್ಷತೆಯಲ್ಲಿ ಇಂದು ಬೆಳಿಗ್ಗೆ ಏರ್ಪಾಡಾಗಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಲಿಂಗರಾಜ್ ಅವರು ಬ್ಯಾಂಕಿಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಲಾಯಿತು.

ಸಭೆಯನ್ನುದ್ದೇಶಿಸಿ ಮಾತನಾಡಿದ ಕೋಗುಂಡಿ ಬಕ್ಕೇಶಪ್ಪ, ಮೃದು ಸ್ವಭಾವ, ಸರಳ - ಸಜ್ಜನಿಕೆಗೆ ಹೆಸರಾಗಿದ್ದ ಲಿಂಗರಾಜ್ ಅವರು, ಈ ಬ್ಯಾಂಕಿನಲ್ಲಿ ವೃತ್ತಿಪರ ನಿರ್ದೇಶಕರಾಗಿ ಲಿಂಗರಾಜ್ ಅವರು ಕಳೆದ 7 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು ಎಂದು ಹೇಳಿದರು.

ನಿರ್ದೇಶಕರುಗಳಾದ ಬಿ.ಸಿ. ಉಮಾಪತಿ, ಅಂದನೂರು ಮುಪ್ಪಣ್ಣ, ಟಿ. ಎಸ್.ಜಯರುದ್ರೇಶ್, ಅಜ್ಜಂಪುರ ಶೆಟ್ರು ವಿಜಯಕುಮಾರ್, ಪಲ್ಲಾಗಟ್ಟೆ ಶಿವಾನಂದ್, ಮುಂಡಾಸ ವೀರೇಂದ್ರ ಅವರುಗಳು ಮಾತನಾಡಿದರು.

ನಿರ್ದೇಶಕರುಗಳಾದ ಕಂಚಿಕೆರೆ ಮಹೇಶ್, ಚಂದ್ರಶೇಖರ್, ಇ.ಎಂ. ಮಂಜುನಾಥ, ಎಂ.ದೊಡ್ಡಪ್ಪ, ಬೆಳ್ಳೂಡಿ ಮಂಜುನಾಥ್ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಡಿ.ವಿ. ಆರಾಧ್ಯಮಠ ಅವರು ಕಾರ್ಯಕ್ರಮ ನಿರೂಪಿಸಿದರು.

## ಮಲೇಬೆನ್ನೂರು : 'ವಿದ್ಯಾಗಮ' ಯೋಜನೆಯಡಿ ಶಿಕ್ಷಣ ಕಲಿಕೆ



ಮಲೇಬೆನ್ನೂರು, ಆ.18- ಎರೇಬೂದಿಹಾಳ್ ಗ್ರಾಮದ ಪಿ ಮತ್ತು ಬಿ. ಬಸವನಗೌಡರ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ 'ವಿದ್ಯಾಗಮ' ಯೋಜನೆಯಡಿ ಶಿಕ್ಷಕ ಬಿ.ಎಸ್. ಪದ್ದಪ್ಪ ಅವರು ಪ್ರತಿದಿನ ಶಿಕ್ಷಣ ನೀಡುತ್ತಿದ್ದಾರೆ. ಇದೇ ರೀತಿ ಎಲ್ಲಾ ಪ್ರೌಢಶಾಲೆಗಳ ವ್ಯಾಪ್ತಿಯಲ್ಲಿ ವಿದ್ಯಾರ್ಥಿಗಳು ಇರುವ ಏರಿಯಾದಲ್ಲೇ ದೇವಸ್ಥಾನ, ಸಮುದಾಯ ಭವನಗಳಲ್ಲಿ 'ವಿದ್ಯಾಗಮ' ಯೋಜನೆ ಅನುಷ್ಠಾನಗೊಳಿಸಲಾಗಿದೆ.

## ಕಾರ್ಪೊರೇಟ್ ಕಂಪನಿಗಳೇ ಕೃಷಿ ಬಿಟ್ಟು ತೊಲಗಿ ಪ್ರತಿಭಟನೆ




ಹೊನ್ನಾಳಿ, ಆ. 18- ರಾಜ್ಯ ಸರ್ಕಾರ ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ಮಾಡಿರುವುದು, ರೈತರನ್ನು ಒಕ್ಕಲುತನದಿಂದ ಹೊರಹಾಕಿ ಖಾಸಗಿ ಕಾರ್ಪೊರೇಟ್ ಕಂಪನಿಗಳು, ಬಂಡವಾಳದಾರ ರಿಗೆ ಕೃಷಿ ಭೂಮಿ ವರ್ಗಾಯಿಸುವ ಕುತಂತ್ರವಾಗಿದೆ ಎಂದು ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಶುಂಠಿ ಗಣೇಶಪ್ಪ ಹೇಳಿದರು.

ಅವರು ಈಚೆಗೆ ರೈತ ಸಂಘದ ವತಿಯಿಂದ 1942 ಆಗಸ್ಟ್‌ರ ಘೋಷಣೆ ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬಂತೆ ಕಾರ್ಪೊರೇಟ್ ಕಂಪನಿಗಳೇ ಕೃಷಿ ಬಿಟ್ಟು ತೊಲಗಿ ಎಂಬ ಘೋಷಣೆಯೊಂದಿಗೆ ತಾಲ್ಲೂಕು ಕಛೇರಿ ಮುಂಭಾಗ ಪ್ರತಿಭಟನೆ ನಡೆಸಿ ಮಾತನಾಡಿದರು.

ಪ್ರಸ್ತುತ ಭೂ ಸುಧಾರಣೆ ಕಾಯ್ದೆಯಿಂದ ರಾಜ್ಯದಲ್ಲಿ ಸುಮಾರು ಶೇ. 80ರಷ್ಟು ಸಣ್ಣ ರೈತರು ಮೊದಲ ಹಂತದಲ್ಲಿ ಕೃಷಿ ಕ್ಷೇತ್ರದಿಂದ ಕಣ್ಮರೆಯಾ ಗುತ್ತಾರೆ. ಎರಡನೇ ಹಂತದಲ್ಲಿ ರೈತರ ಭೂಮಿ ಯನ್ನು ಕರಾರು ಪತ್ರಗಳ ಮೂಲಕ ಕಾರ್ಪೊ ರೇಟ್ ಕಂಪನಿಗಳು ಒತ್ತೆಯಿಟ್ಟುಕೊಳ್ಳುತ್ತಿವೆ. ಇದ ರಿಂದ ರೈತರು ತಮ್ಮ ಭೂಮಿಯನ್ನು ಉಳಿಸಿಕೊ ಳ್ಳುವ ಅನಿವಾರ್ಯತೆ ಸೃಷ್ಠಿಯಾಗುತ್ತಿದೆ ಎಂದು ಹೇಳಿದರು.

ಇದೇ ರೀತಿ ವಿದ್ಯುಚ್ಛಕ್ತಿ ಕಾಯ್ದೆ, ಭೂ ಸ್ವಾಧೀನ ಕಾಯ್ದೆಗಳಿಂದಾಗಿ ಇಡೀ ರೈತರ ಸಮೂಹ ಅನೇಕ ತೊಂದರೆಗಳಿಗೆ ಒಳಪಡುವ ಪರಿಸ್ಥಿತಿ ಇದ್ದು, ಈ ಬಗ್ಗೆ ರೈತ ಸಮುದಾಯ ಎಚ್ಚೆತ್ತುಕೊಳ್ಳಬೇಕಿದೆ ಎಂದು ಹೇಳಿದರು.

ರೈತ ಸಂಘ ಸರ್ಕಾರದ ಈ ಧೋರಣೆಗಳನ್ನು ಖಂಡಿಸಿ, ಪ್ರತಿಭಟನೆ ಮಾಡಿ ಸರ್ಕಾರಕ್ಕೆ ತಹಶೀಲ್ದಾರ್ ತುಷಾರ್ ಬಿ. ಹೊಸೂರು ಅವರ ಮೂಲಕ ಮನವಿ ಪತ್ರ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ರೈತ ಸಂಘದ ಅಧ್ಯಕ್ಷ ಪ್ರಭಾಕರ ಡಿ.ಎಂ., ಕಾರ್ಯಾಧ್ಯಕ್ಷ ಉಮೇಶಪ್ಪ, ಉಪಾಧ್ಯಕ್ಷ ಉಮೇಶ್ ಬೇಲಿಮಲ್ಲೂರು, ಕೆ. ನಿಂಗಪ್ಪ, ಹಸಿರು ಸೇನೆ ಅಧ್ಯಕ್ಷ ನಿರಂಜನ ಸೊರಟೂರು, ರೈತ ಮುಖಂಡರಾದ ಮಹಾದೇವಪ್ಪ, ಮಾಸಡಿ ರಾಜಪ್ಪ, ಎಸ್. ಬಸವರಾಜಪ್ಪ, ರಾಜಪ್ಪ ಸೇರಿದಂತೆ ಅನೇಕ ರೈತ ಮುಖಂಡರು ಭಾಗವಹಿಸಿದ್ದರು.

## ಬೆಳವನೂರು ಬಸಪ್ಪ ಶಾಲೆಗೆ ಶೇ. 100

ದಾವಣಗೆರೆ, ಆ.18- ಬೆಳವನೂರಿನ ಶ್ರೀ ಮಾಗನೂರು ಬಸಪ್ಪ ಪ್ರೌಢಶಾಲೆಗೆ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 (ಎ ಗ್ರೇಡ್) ಫಲಿತಾಂಶ ಲಭಿಸಿದೆ ಎಂದು ಮುಖ್ಯ ಶಿಕ್ಷಕಿ ಡಬ್ಲ್ಯೂ. ಸ್ವಪ್ನ ತಿಳಿಸಿದ್ದಾರೆ.

## ಅನುತ್ತೀರ್ಣ : ಇಂಜಿನಿಯರಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ


ದಾವಣಗೆರೆ, ಆ.18 - ಪರೀಕ್ಷೆಯಲ್ಲಿ ಅನುತ್ತೀರ್ಣ ಹಿನ್ನೆಲೆಯಲ್ಲಿ ಮನನೊಂದ ಇಂಜಿನಿಯರಿಂಗ್ ವಿದ್ಯಾರ್ಥಿನಿ ಕೆರೆಯೊಂದರಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಂದು ಬೆಳಿಗ್ಗೆ ನಡೆದಿದೆ. ಸರಸ್ವತಿ ಬಡಾವಣೆಯ ಸೃಷ್ಠಿ (21) ಮೃತ ವಿದ್ಯಾರ್ಥಿನಿ. ಬಿಐಇಟಿ ಕಾಲೇಜಿನಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ಈ ವಿದ್ಯಾರ್ಥಿನಿಯು ತೃತೀಯ ಮತ್ತು ನಾಲ್ಕನೇ ಸೆಮಿಸ್ಟರ್‌ನಲ್ಲಿ ಅನುತ್ತೀರ್ಣರಾಗಿದ್ದು, ಪುನಃ ಪರೀಕ್ಷೆ ಬರೆದರೂ ಉತ್ತೀರ್ಣವಾಗದ ಕಾರಣ ಮನನೊಂದಿದ್ದಳು ಎನ್ನಲಾಗಿದೆ.

ಪ್ರತಿದಿನದಂತೆ ಇಂದು ಮುಂಜಾನೆ ತನ್ನ ದ್ವಿಚಕ್ರ ವಾಹನದಲ್ಲಿ ಮನೆಯಿಂದ ವಾಯುವಿಹಾರಕ್ಕೆಂದು ಕೆರೆಯತ್ತ ಬಂದು ನೀರಿಗೆ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಹೇಳಲಾಗಿದೆ.

## ಕಕ್ಕರಗೊಳ್ಳದಲ್ಲಿ ವಿಶೇಷ ಪೂಜೆ

ದಾವಣಗೆರೆ, ಆ.14- ಕಕ್ಕರ ಗೊಳ್ಳ ಕೆರೆಏರಿ ಶ್ರೀ ಭರಮದೇವರ ದೇವಸ್ಥಾನದಲ್ಲಿ ಇದೇ ದಿನಾಂಕ 25ರ ಶ್ರಾವಣದ ಪೂಜೆ ನಡೆಯ ಲಿದೆ. ಅಂದು ಬೆಳಿಗ್ಗೆ 6ಕ್ಕೆ ಅಭಿಷೇಕ ನೆರವೇರಲಿದೆ. ಬೆಳಿಗ್ಗೆ 11 ಗಂಟೆಗೆ ಪ್ರಸಾದ ಸೇವೆ ಹಮ್ಮಿಕೊಳ್ಳಲಾಗಿದೆ.

## ಹೊನ್ನಾಳಿ : ಸ್ವಾಮಿ ವಿವೇಕಾನಂದ ಆಂಗ್ಲಮಾಧ್ಯಮ ಪ್ರೌಢಶಾಲೆಗೆ ಶೇ.91.17



ಹೊನ್ನಾಳಿ, ಆ.18- ಪಟ್ಟಣದ ತುಮ್ಮಿನಕಟ್ಟೆ ರಸ್ತೆಯ ಅಗ್ರಹಾರದಲ್ಲಿರುವ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 91.17 ಫಲಿತಾಂಶ ಲಭಿಸಿದೆ ಎಂದು ಮುಖ್ಯಶಿಕ್ಷಕ ಕೊಟ್ರೇಶ್ ತಿಳಿಸಿದ್ದಾರೆ. ಡಿಸ್ಟಿಕ್ಷನ್ 11, ಪ್ರಥಮ 20, ಅಬೀದಾ ತಬಸೂಮ್ 604 (ಶೇ.96.64) ಅಂಕಗಳನ್ನು ಗಳಿಸಿದ್ದು, ಕನ್ನಡ 125, ಇಂಗ್ಲೀಷ್ 97, ಹಿಂದಿ 100, ಗಣಿತ 97, ವಿಜ್ಞಾನ 95, ಸಮಾಜ ವಿಜ್ಞಾನದಲ್ಲಿ 90 ಅಂಕಗಳನ್ನು ಗಳಿಸಿದ್ದಾರೆ.

## ಬನ್ನೀಕೊಡು ಸರಸ್ವತಿ ಗ್ರಾಮೀಣ ಶಾಲೆಗೆ ಶೇ.89 ಫಲಿತಾಂಶ

ಮಲೇಬೆನ್ನೂರು, ಆ. 11- ಯರಲ ಬನ್ನೀಕೊಡು ಗ್ರಾಮದ ಸರಸ್ವತಿ ಗ್ರಾಮೀಣ ಪ್ರೌಢಶಾಲೆಯ ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಒಟ್ಟು 28 ವಿದ್ಯಾರ್ಥಿಗಳಲ್ಲಿ 25 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 21 ಪ್ರಥಮ, 4 ವಿದ್ಯಾರ್ಥಿಗಳು ದ್ವಿತೀಯ ಸ್ಥಾನದಲ್ಲಿ ತೇರ್ಗಡೆಯಾಗಿದ್ದು, ಶೇ. 89 ರಷ್ಟು ಫಲಿತಾಂಶ ಬಂದಿದೆ. ವಿದ್ಯಾರ್ಥಿನಿ ಸಿ.ಹರ್ಷಿತಾ 531 ಅಂಕ ಪಡೆದಿ ದ್ದಾಳೆ ಎಂದು ಮುಖ್ಯ ಶಿಕ್ಷಕ ಕೆ.ಸಿ.ಬಸವರಾಜ್ ತಿಳಿದಿದ್ದಾರೆ.


### ಹಳೇಕುಂದುವಾಡದ ಮಲ್ಲಮ್ಮ ನಿಧನ



ದಾವಣಗೆರೆ ಸಮೀಪದ ಹಳೇ ಕುಂದುವಾಡ ಬೆಂಚಿಕಟ್ಟೆ ನಿವಾಸಿ ಮಿಟ್ಲಕಟ್ಟೆ ಚನ್ನಬಸಪ್ಪ ಇವರ ಧರ್ಮಪತ್ನಿ **ಶ್ರೀಮತಿ ಮಲ್ಲಮ್ಮ** ಅವರು ದಿನಾಂಕ 18.08.2020ರ ಮಂಗಳವಾರ ಸಂಜೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 55 ವರ್ಷ ವಯಸ್ಸಾಗಿತ್ತು. ಪತಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗವನ್ನು ಬಿಟ್ಟು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.08.2020ರ ಬುಧವಾರ ಮಧ್ಯಾಹ್ನ 12.30ಕ್ಕೆ ಹಳೇ ಕುಂದುವಾಡದ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತ ಕುಟುಂಬ ವರ್ಗ, ಮೊ. : 90082 75555**

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 13.08.2020ರಂದು ನಿಧನರಾದ

**ಶ್ರೀ ವಿಜಯಾನಂದ ಅಂಗಡಿ (ಪ್ರಭಣ್ಣ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ನಾಗರಾಜ ಡಿ.ಎಂ.
- ಕಿರಣ್ ಟಿ.ಕೆ.
- ಪ್ರವೀಣ ಫಾರ್ಮ
- ಕಿರಣ್ ಪಲ್ಲಾಗಟ್ಟೆ
- ಶೀತಲ್ ಬಿ.ಜಿ.
- ವಿಜಯಕುಮಾರ್
- ಆದರ್ಶ್ ಎಂ.ಜೆ.
- ದುಶ್ಯಂತ್ ಇಟಗಿ
- ಶರತ್ ಬಾತಿ
- ಹರೀಶ್ ಬೆಂಗಳೂರು
- ಶ್ರೀಕಾಂತ್ ಬಗರೆ
- ಶ್ರೀಧರ್ ಮಾಗನೂರು
- ಬಸವರಾಜ ಬಿ.ವಿ.
- ಸಿದ್ದರಾಜು
- ಕಾರ್ತಿಕ್ ಕಶೆಟ್ಟರ್
- ಸಂತೋಷ್ (UK)
- ಅನಿಲ್ ಭಾರಧ್ವಾಜ್ (USA)
- ಅಶೋಕ
- ಸುಪ್ರೀತ್ ಬಿ.ಜಿ.
- ಮೋಹನ್ ಎಂ.ಬಿ.
- ಗಿರೀಶ್

### ಪಿ.ಎಂ. ಮಂಜುನಾಥಯ್ಯ ನಿಧನ



ದಾವಣಗೆರೆ ನಗರದ ನಿಟ್ಟುವಳ್ಳಿ ವಾಸಿ ಆಟೋ ಡ್ರೈವರ್ ಪಿ.ಎಂ. ಮಂಜುನಾಥಯ್ಯ ತೌಡೂರು ಮಠ (58) ಇವರು ದಿನಾಂಕ 18.08.2020 ರ ಮಂಗಳವಾರ ಸಾಯಂಕಾಲ 4 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯಂದಿರು ಮೊಮ್ಮಕ್ಕಳು, ಸೋದರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 19.08.2020ರ ಬುಧವಾರ ಬೆಳ್ಳಿಗೆ 9 ಗಂಟೆಗೆ ಎಸ್. ಎಸ್. ಆಸ್ಪತ್ರೆ ಹಿಂಭಾಗದಲ್ಲಿರುವ ರಾಮನಗರ ರುದ್ರಭೂಮಿಯಲ್ಲಿ ನೆರವೇರಲಿದೆ.

### ಮಲೇಕುಂಬಳೂರಿನ ಕೆ. ಹಾಲಪ್ಪ ನಿಧನ



ಹೊನ್ನಾಳಿ ತಾ॥ ಮಲೇಕುಂಬಳೂರು ಗ್ರಾಮದ ವಾಸಿ ಹಾಗೂ ತಾ॥ ಕುರುಬ ಸಮಾಜದ ಅಧ್ಯಕ್ಷರೂ, ಪಿಎಸಿಎಸ್ ನಿವೃತ್ತ ಸಿಇಓ ಮತ್ತು ಸಂಘದ ಮಾಜಿ ಅಧ್ಯಕ್ಷರೂ, ಗ್ರಾ.ಪಂ. ಮಾಜಿ ಅಧ್ಯಕ್ಷರೂ ಆದ ಕೆ. ಹಾಲಪ್ಪ (71) ಅವರು ದಿನಾಂಕ 18.08.2020ರ ಮಂಗಳವಾರ ಸಾಯಂಕಾಲ 4.30 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 19.8.2020ರ ಬುಧವಾರ ಮಧ್ಯಾಹ್ನ 1 ಕ್ಕೆ ಮಲೇಕುಂಬಳೂರು ಗ್ರಾಮದಲ್ಲಿ ನೆರವೇರಲಿದೆ.

### ಟಿ.ಎಂ. ನವೀನ್ ನಿಧನ



ದಾವಣಗೆರೆ ಹಳೇ ಬಸ್‌ನಿಲ್ದಾಣದ ಹತ್ತಿರ, ಶಾಂತಿ ನಿವಾಸ ಕಾಂಪೌಂಡ್ ವಾಸಿ ಟಿ.ಎಂ. ನವೀನ್ (56) ಇವರು ದಿನಾಂಕ 17.08.2020ರ ಸೋಮವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.08.2020ರ ಸೋಮವಾರ ರಾತ್ರಿ ನೆರವೇರಿತು.

### ಸುನಂದಮ್ಮ ಕಾಸಲ್ ವಿಠಲ್ ನಿಧನ



ದಾವಣಗೆರೆ ಎವಿಕೆ ಕಾಲೇಜು ರಸ್ತೆ ವಾಸಿ ಶ್ರೀಮತಿ ಸುನಂದಮ್ಮ ಕಾಸಲ್ ವಿಠಲ್ (85) ಅವರು ದಿನಾಂಕ 18.8.2020ರ ಮಂಗಳವಾರ ರಾತ್ರಿ 11.30ಕ್ಕೆ ನಿಧನರಾದರು. ಸುನಂದಮ್ಮ, ಬಾಪೂಜಿ ವಿದ್ಯಾಸಂಸ್ಥೆ ಮಾಜಿ ಅಧ್ಯಕ್ಷರೂ, ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ಮಾಜಿ ಅಧ್ಯಕ್ಷರೂ ಆದ ದಿ. ಕಾಸಲ್ ಎಸ್. ವಿಠಲ್ ಅವರ ಪತ್ನಿ. ಮೃತರ ಅಂತ್ಯಕ್ರಿಯೆಯು ದಿನಾಂಕ 19.8.2020ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ.

### ಅಂದನೂರು ಶಿವಯೋಗಿ ನಿಧನ



ದಾವಣಗೆರೆ ಕಾಯಿಪೇಟೆಯ ಸ್ವಾಗೇರ ಪೇಟೆ ವಾಸಿ ಅಂದನೂರು ಶಿವಯೋಗಿ (61) ಅವರು ದಿನಾಂಕ 18.8. 2020ರ ಮಂಗಳವಾರ ತಡರಾತ್ರಿ 1 ಗಂಟೆಗೆ ನಿಧನರಾದರು. ಪತ್ನಿ, ಇಬ್ಬರು ಪುತ್ರರನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ 19.8.2020ರ ಬುಧವಾರ ಮಧ್ಯಾಹ್ನ 3ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ.

### ಸುಮಿತ್ರಮ್ಮ ಪೊರಾಳ್ ನಿಧನ



ದಾವಣಗೆರೆ ಆಂಜನೇಯ ಬಡಾವಣೆ 1ನೇ ಮೇನ್, ಮೆಡಿಕಲ್ ಹಾಸ್ಟೆಲ್ ಹಿಂಭಾಗದ ವಾಸಿ, ಡಾ. ಮಹೇಶ್‌ಬಾಬು ಅವರ ತಾಯಿ

**ಶ್ರೀಮತಿ ಸುಮಿತ್ರಮ್ಮ ಪೊರಾಳ್**

ಇವರು ದಿನಾಂಕ : 18.08.2020 ರಂದು ಮಂಗಳವಾರ ಮಧ್ಯಾಹ್ನ 2.37 ಕ್ಕೆ ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 90 ವರ್ಷ ವಯಸ್ಸಗಿತ್ತು. ನಾಲ್ವರು ಪುತ್ರರು, ಐವರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 19.08.2020 ರಂದು ಬುಧವಾರ, ಬೆಳ್ಳಿಗೆ 11 ಗಂಟೆಗೆ ನಗರದ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತರು

**ಡಾ. ಮಹೇಶ್‌ಬಾಬು. ಪಿ. ಮಾರ್ಕಂಡೇಯ ಪೊರಾಳ್. ಜನಾರ್ಧನ ಪೊರಾಳ್, ಶ್ರೀಧರ್ ಪೊರಾಳ್ ಮತ್ತು ಕುಟುಂಬ ವರ್ಗದವರು.**

**99162 52910**

### ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 18.08.2020ರಂದು ಮಂಗಳವಾರ ನಿಧನರಾದ **ಕುಂದುವಾಡದ ಮಲ್ಲಮ್ಮ** ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಚೌಟಿಕಿ ಕೆಂಚಪ್ಪ ಮತ್ತು ಸಹೋದರರು ಹಾಗೂ ಚೌಟಿಕಿ ವಂಶಸ್ಥರು, ಸಿಂಗರಿಹಳ್ಳಿ**

### ಕೆ.ಜಿ. ನಿಂಗಪ್ಪರೆಡ್ಡಿ ನಿಧನ



ಹರಿಹರ ತಾಲ್ಲೂಕು ಕಡ್ಲೆಗುಂದಿ ಗ್ರಾಮದ ವಾಸಿ, ದಿ॥ ಗೌಡ್ರಯಲ್ಲಪ್ಪ ರೆಡ್ಡಿಯವರ ಪುತ್ರ

**ಕೆ.ಜಿ. ನಿಂಗಪ್ಪರೆಡ್ಡಿ** (70)

ಇವರು ದಿನಾಂಕ : 18.08.2020 ರಂದು ಮಂಗಳವಾರ ಸಂಜೆ 5.30 ಕ್ಕೆ ನಿಧನರಾಗಿದ್ದಾರೆ. ಮೂವರು ಪುತ್ರರು, ಸಹೋದರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 19.08.2020 ರಂದು ಬುಧವಾರ, ಮಧ್ಯಾಹ್ನ 12 ಗಂಟೆಗೆ ಕಡ್ಲೆಗುಂದಿ ಗ್ರಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ

**ಕುಟುಂಬ ವರ್ಗದವರು.**

**63610 83114, 97310 69738**

## ಪ್ರತಿಭಟನಾ ನಿರತ ಬಿಸಿಯೂಟ ತಯಾರಕರ ಬಂಧನ : ಖಂಡನೆ



ದಾವಣಗೆರೆ, ಆ.18- ಪ್ರತಿಭಟನಾ ನಿರತ ಬಿಸಿಯೂಟ ತಯಾರಕರ ಬಂಧನಕ್ಕೆ ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಎಐಟಿಯುಸಿ ಫೆಡರೇಷನ್ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಆವರಗೆರೆ ಚಂದ್ರು ಖಂಡಿಸಿದ್ದಾರೆ.

ಕಳೆದ ನಾಲ್ಕು ತಿಂಗಳಿನಿಂದ ವೇತನ ಬಿಡುಗಡೆಗೊಳಿಸದೆ ಬಿಸಿಯೂಟ ತಯಾರಕರನ್ನು ಶೋಷಣೆ ಮಾಡುತ್ತಿರುವ ಸರ್ಕಾರಕ್ಕೆ ಒತ್ತಾಯಿಸಿ, ಬೆಂಗಳೂರಿನಲ್ಲಿರುವ ಶಿಕ್ಷಣ ಸಚಿವ ಸುರೇಶ್ ಕುಮಾರ್ ಅವರ ಮನೆಯ ಮುಂದೆ ಪ್ರತಿಭಟನೆ ನಡೆಸುತ್ತಿದ್ದ ಬಿಸಿಯೂಟ ತಯಾರಕರನ್ನು ದೌರ್ಜನ್ಯವೆಸಗಿ ಬಂಧನ ಮಾಡಿರುವ ಪೋಲಿಸರ ಕೃತ್ಯವನ್ನು ಸಂಘಟನೆ ಖಂಡಿಸಿದೆ ಹಾಗೂ ಬಂಧಿತರನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಅವರು ಒತ್ತಾಯಿಸಿದ್ದಾರೆ.

## ಜಗಳೂರು ತಾಲ್ಲೂಕಿನಲ್ಲಿ ಇಂದು ವಿದ್ಯುತ್ ನಲ್ಲಿ ವ್ಯತ್ಯಯ

ಮಾಳಮ್ಮನಹಳ್ಳಿ ರಸ್ತೆಮಾಚಿಕೆರೆ, ಬುಳ್ಳೇನಹಳ್ಳಿ, ಬಗ್ಗೇನಹಳ್ಳಿ, ಚಿಕ್ಕಅರಕೆರೆ, ಎಫ್ 12 ರಂಗಾಪುರ ಫೀಡರ್‌ನಲ್ಲಿ ಚಿಕ್ಕಮ್ಮನಹಟ್ಟಿ, ಕೆಳಗೋಟೆ, ಕೆಚ್ಚೇನಹಳ್ಳಿ, ಬೈರಾನಾಯಕನಹಳ್ಳಿ, ಎಫ್ 13 ರಸ್ತೆ ಮಾಕುಂಟೆ ಫೀಡರ್‌ನ ಲಿಂಗಣ್ಣನಹಳ್ಳಿ, ಗೋಪಗೊಂಡನಹಳ್ಳಿ, ಸಂತೇಮುದ್ದಾಪುರ, ಬಿಸ್ತುವಳ್ಳಿ, ಎಫ್ 14 ಅರಿಶಿನಗುಂಡಿ ಫೀಡರ್ ಮರೇನಹಳ್ಳಿ, ಬೊಮ್ಮಕ್ಕನಹಳ್ಳಿ, ಜಮ್ಮಾಪುರ, ತೋರಣಗಟ್ಟೆ, ಹೊನ್ನಮರಡಿ, ತಾಯಿಟೋಣಿ, ಎಫ್15 ಜ್ಯೋತಿಪುರ ಫೀಡರ್‌ನ ಜಗಳೂರು ಗೊಲ್ಲರಹಟ್ಟಿ, ಗೋಗುದ್ದು, ಕಸವ್ವನಹಳ್ಳಿ, ಹನುಮಂತಾಪುರ, ಅಣಬೂರು, ಗಾಂಧಿನಗರ, ಎಫ್ 3 ಜಗಳೂರು ಟೌನ್ ವ್ಯಾಪ್ತಿಯಲ್ಲಿ ಇಂದು ಬೆಳಗ್ಗೆ 10 ರಿಂದ ಸಂಜೆ 6ರ ತನಕ ವಿದ್ಯುತ್ ಸರಬರಾಜು ಇರುವುದಿಲ್ಲವೆಂದು ಬೆಸ್ಕಾಂ ಎಇಇ ಪ್ರವೀಣ್ ತಿಳಿಸಿದ್ದಾರೆ.

# ಸರಳ ಸಾರ್ವಜನಿಕ ಗಣಪತಿ

## ಸರ್ಕಾರದ ಅನುಮತಿ ನೀಡಿದ್ದರೂ ಮುಂದುವರಿದ ಗೊಂದಲ

ದಾವಣಗೆರೆ, ಆ. 18- ಕೋವಿಡ್ ನಿಯಮಗಳನ್ನು ಪಾಲನೆ ಜೊತೆ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಸರ್ಕಾರ ಹಸಿರು ನಿಶಾನೆ ತೋರಿಸುತ್ತಿದ್ದಂತೆ, ಗೊಂದಲಗಳ ನಡುವೆಯೂ ಸಂಘ ಸಂಸ್ಥೆಗಳ ಆಶ್ರಯದಲ್ಲಿ ಹಾಗೂ ಬೀದಿ ಬದಿಗಳಲ್ಲಿ ಗಣೇಶನ ಪ್ರತಿಷ್ಠಾಪನೆ ಕುರಿತ ಚಟುವಟಿಕೆಗಳು ಮತ್ತೆ ಗರಿಗೆದರಿವೆ.

ಕೊರೊನಾ ಹಿನ್ನೆಲೆಯಲ್ಲಿ ಸರ್ಕಾರ ಸಾರ್ವಜನಿಕ ಗಣೇಶೋತ್ಸವ ಆಚರಣೆ ನಿಷೇಧಿಸಿತ್ತು. ಈ ಹಿನ್ನೆಲೆಯಲ್ಲಿ ಹಿಂದೂಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು.

ಹಲವು ವರ್ಷಗಳಿಂದ ಗಣೇಶನನ್ನು ಪ್ರತಿಷ್ಠಾಪಿಸಿ ಸಂಪ್ರದಾಯ ಆಚರಿಸಿಕೊಂಡು ಬರಲಾಗುತ್ತಿದ್ದು, ಈ ವರ್ಷ ಉತ್ಸವಕ್ಕೆ ನಿಷೇಧ ಹೇರಿದ್ದರಿಂದ ಹಲವರಲ್ಲಿ ಬೇಸರವನ್ನುಂಟು ಮಾಡಿತ್ತು. ಆದರೆ, ಇದೀಗ ಮುಖ್ಯಮಂತ್ರಿಗಳು ಉತ್ಸವಕ್ಕೆ ಗ್ರೀನ್ ಸಿಗ್ನಲ್ ನೀಡಿದ್ದಾರೆ. ಆದರೆ ಗಣೇಶನ ವಿಗ್ರಹ ಪ್ರತಿಷ್ಠಾಪನೆಗೆ ಹಲವಾರು ಗೊಂದಲ, ಅಡೆತಡೆಗಳಿವೆ.



ಕೊರೊನಾ ನಡುವೆಯೂ ಎಚ್ಚರಿಕೆಯಿಂದ ಹಬ್ಬ ಆಚರಿಸಲು ನಗರದ ಕೆಲವು ಪ್ರಮುಖ ಸಂಘಟನೆಗಳು ಈ ತಿಂಗಳುಗಳ ಮೊದಲೇ ಮುಂಗಡ ನೀಡಿ ವಿಗ್ರಹ ನಿರ್ಮಾಣಕ್ಕೆ ಆರ್ಡರ್ ಕೊಟ್ಟಿದ್ದವು. ಆದರೆ ಸರ್ಕಾರ ನಿಷೇಧ ಹೇರುತ್ತಿದ್ದಂತೆ, ಈ ಕಾರ್ಯಕ್ಕೆ ತುಸು ಹಿನ್ನಡೆಯಾಗಿತ್ತು. ಆದರೆ ದೇವಸ್ಥಾನದಲ್ಲಾದರೂ ಕೂರಿಸಿ ಸರಳವಾಗಿ ಆಚರಿಸುವ ನಿರ್ಧಾರಕ್ಕೆ ಸಂಘಟನೆಗಳು ತೀರ್ಮಾನಿಸಿದ್ದವು.

ಈಗ ಸಾರ್ವಜನಿಕವಾಗಿ ಆಚರಿಸಲು ಅನುಮತಿ ಇದೆ. ಆದರೆ ದೊಡ್ಡ ವಿಗ್ರಹಗಳನ್ನು ಪ್ರತಿಷ್ಠಾಪಿಸಬಾರದು ಎಂದು ಅಧಿಕಾರಿಗಳು ಹೇಳುತ್ತಿರುವುದು ಗೊಂದಲಕ್ಕೆ ಕಾರಣವಾಗಿದೆ. ಈಗಾಗಲೇ ಮುಂಗಡ ಕೊಟ್ಟು ವಿಗ್ರಹ ತಯಾರಿಸಲು ಹೇಳಿದ್ದು, ವಿಗ್ರಹಗಳೂ ರೆಡಿ ಇವೆ. ಅದನ್ನು ಬಿಟ್ಟು ಬೇರೆ ಚಿಕ್ಕ ವಿಗ್ರಹಗಳನ್ನು ಕೊಳ್ಳಬೇಕೆಂದರೆ ಹೇಗೆ? ಎಂದು ಕೆಲ ಸಂಘಟನೆಗಳ ಪ್ರಶ್ನೆಯಾಗಿದೆ.

ಇನ್ನು ಬೀದಿ ಬದಿ ಗಣಪನ ಪ್ರತಿಷ್ಠಾಪನೆ ಬೇಡ ಎಂದು ಕುಳಿತಿದ್ದವರು, ಸರ್ಕಾರದ ಹೊರ ಆದೇಶದಿಂದಾಗಿ ಮತ್ತೆ ಹಬ್ಬದ ಸಂಭ್ರಮಕ್ಕೆ ಮುಂದಾಗಿದ್ದಾರೆ. ಆದರೆ ಪ್ರತಿಷ್ಠಾಪಿಸಲು ದೊಡ್ಡ ವಿಗ್ರಹಗಳು ಸಿಗುತ್ತಿಲ್ಲ. ಕಾರಣ ವಿಗ್ರಹ ತಯಾರಿಸುವವರು ಕೊರೊನಾ ಹಿನ್ನೆಲೆಯಲ್ಲಿ ಈ ವರ್ಷ ಅಷ್ಟಾಗಿ ದೊಡ್ಡಗಾತ್ರದ ವಿಗ್ರಹಗಳನ್ನು ತಯಾರಿಸಿಲ್ಲ. ಸರ್ಕಾರ ಹಬ್ಬಕ್ಕೆ ಮೂರು ದಿನಗಳು ಮಾತ್ರ ಬಾಕಿ ಇರುವಾಗ ಸಾರ್ವಜನಿಕ ಗಣೇಶೋತ್ಸವಕ್ಕೆ ಅನುಮತಿ ನೀಡಿರುವುದು ಈ ರೀತಿಯ ಗೊಂದಲಕ್ಕೆ ಕಾರಣವಾಗಿದೆ.

ಒಟ್ಟಿನಲ್ಲಿ ಈ ವರ್ಷದ ಗಣೇಶೋತ್ಸವ ಹಿಂದಿನ ವರ್ಷಗಳಂತೆ ಅದ್ದೂರಿಯಾಗಿ ನಡೆಯಲು ಕೊರೊನಾ ಅಡ್ಡಬಂದಿರುವುದಂತೂ ನಿಜ.

### ವಿನೋಬನಗರದಲ್ಲಿ 21 ಇಂಚಿನ ಮೂರ್ತಿ

ಪ್ರತಿ ವರ್ಷ ಗಣೇಶನೋತ್ಸವದಲ್ಲಿ ಇಡೀ ಜಿಲ್ಲೆಯ ಗಮನ ಸೆಳೆಯುವ, ವಿನೋಬನಗರದ 2ನೇ ಮುಖ್ಯ ರಸ್ತೆಯಲ್ಲಿ ಶ್ರೀ ವರಸಿದ್ಧಿ ವಿನಾಯಕ ಸೇವಾ ಸಮಿತಿ ವತಿಯಿಂದ ಈ ಬಾರಿ ಸರಳವಾಗಿ 21 ಇಂಚಿನ ವಿನಾಯಕ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗುತ್ತಿದೆ. ಕೊರೊನಾ ಹಿನ್ನೆಲೆಯಲ್ಲಿ ದೇವಸ್ಥಾನದಲ್ಲಿ ವಿಗ್ರಹ ಪ್ರತಿಷ್ಠಾಪಿಸಲಾಗುತ್ತಿದ್ದು, 9 ದಿನಕ್ಕೆ ಸರಳವಾಗಿ ಸಂಘಟನೆಯ ಪದಾಧಿಕಾರಿಗಳೇ ಸೇರಿ ವಿಸರ್ಜಿಸಲಾಗುವುದು ಎಂದು ಸಮಿತಿಯ ಪದಾಧಿಕಾರಿಗಳು ತಿಳಿಸಿದ್ದಾರೆ. ಕೊರೊನಾ ಹಿನ್ನೆಲೆಯಲ್ಲಿ ದೇವಸ್ಥಾನದೊಳಗೆ ಒಂದು ಬಾರಿಗೆ ಕೇವಲ 10 ಭಕ್ತರಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗುವುದು. ಅವರು ಹೊರ ಬಂದ ನಂತರ ಮತ್ತೆ 10 ಭಕ್ತರನ್ನು ಒಳ ಬಿಡಲಾಗುವುದು ಎಂದು ಹೇಳಿದರು.

### ನಿಯಮ ಪಾಲಿಸಲು ಸಿದ್ಧವಿದ್ದರೂ, ಅಧಿಕಾರಿಗಳು ಸ್ಪಷ್ಟವಾಗಿ ತಿಳಿಸುತ್ತಿಲ್ಲ

ರಾಜ್ಯ ಸರ್ಕಾರದ ಮಾರ್ಗಸೂಚಿ ಪ್ರಕಾರವೇ ವಿನಾಯಕ ಮೂರ್ತಿ ಪ್ರತಿಷ್ಠಾಪಿಸಲು ಸಿದ್ಧರಿದ್ದೇವೆ. ಆದರೆ ಜಿಲ್ಲಾಡಳಿತ ಸ್ಪಷ್ಟವಾಗಿ ತಿಳಿಸುತ್ತಿಲ್ಲ ಎಂದು ಹಿಂದೂ ಮಹಾ ಗಣಪತಿ ಟ್ರಸ್ಟ್ ಅಧ್ಯಕ್ಷ ಜೊಳ್ಳಿ ಗುರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯ ಸರ್ಕಾರ ಗಣೇಶೋತ್ಸವ ಆಚರಣೆಗೆ ಮಾರ್ಗ ಸೂಚಿ ಹೊರಡಿಸಿದೆ. ಆದರೆ ಇಲಾಖೆಯವರು ಒಂದು ದಿನದ ಮಟ್ಟಿಗಾದರೆ ಮಾತ್ರ ಸಾರ್ವಜನಿಕರ ಸ್ಥಳದಲ್ಲಿ ಪ್ರತಿಷ್ಠಾಪಿಸಿ, ಹೆಚ್ಚಿನ ದಿನಗಳಾದರೆ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿ ಎಂದು ಹೇಳುತ್ತಿದ್ದಾರೆ.

ಜಿಲ್ಲಾಡಳಿತಕ್ಕೆ ಸ್ಪಷ್ಟ ಮಾಹಿತಿ ಇಲ್ಲವಾಗಿದೆ. ಇಲ್ಲಸಲ್ಲದ ಕಾರಣಗಳು ಹೇಳುತ್ತಿದ್ದಾರೆ. ಸರ್ಕಾರದ ನಿಯಮ ಪಾಲಿಸಿ ಹಬ್ಬ ಆಚರಿಸಿ ಎಂದು ಹೇಳುವ ಬದಲು ಇವರು ತಿಳಿದಂತೆ ವರ್ತಿಸುತ್ತಿದ್ದಾರೆ ಎಂದು ಹೇಳಿದರು.

ಹೈಸ್ಕೂಲ್ ಮೈದಾನದಲ್ಲಿಯೇ ಚಿಕ್ಕದಾಗಿ ಮಂಟಪ ನಿರ್ಮಿಸಿ ಗಣೇಶನನ್ನು ಪ್ರತಿಷ್ಠಾಪಿಸುತ್ತೇವೆ.

ವಿಸರ್ಜನಾ ದಿನಾಂಕವನ್ನು ಕಮಿಟಿಯೊಂದಿಗೆ ಚರ್ಚಿಸಿ ನಿರ್ಧರಿಸಲಾಗುವುದು. ಟ್ರಸ್ಟ್ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾರಿಗೂ ಮೆರವಣಿಗೆ ಅವಕಾಶವಿಲ್ಲ. ಸರಳವಾಗಿಯೇ ವಿಸರ್ಜಿಸಲಾಗುವುದು ಎಂದರು.

ಈಗಾಗಲೇ ಹತ್ತು ಅಡಿ ವಿನಾಯಕನ ವಿಗ್ರಹಕ್ಕೆ ಆರ್ಡರ್ ಕೊಟ್ಟಿದ್ದೇವೆ. ಕೊಟ್ಟಿರುವ ವಿಗ್ರಹವನ್ನೇ ತಂದು ಪ್ರತಿಷ್ಠಾಪಿಸಬೇಕಿದೆ. ಈಗ ಹೊಸ ವಿಗ್ರಹ ತರಲು ಕಷ್ಟವಾಗುತ್ತದೆ.

ಮಾರುಕಟ್ಟೆಯಲ್ಲಿ ದೊಡ್ಡ ವಿಗ್ರಹಗಳು ಸಿಗುತ್ತಿಲ್ಲ ಎಂದರು. ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಕಳೆದ ವರ್ಷ ಶ್ರೀ ಕ್ಷೇತ್ರ ಧರ್ಮಸ್ಥಳ ಮಾದರಿ ಮಂಟಪ ನಿರ್ಮಿಸಿ ಗಮನ ಸೆಳೆದದ್ದನ್ನು ನೆನೆಯಬಹುದು.

# ಬೆಳೆ ಸಮೀಕ್ಷೆ ಆ್ಯಪ್‌ನ ಸದ್ಬಳಕೆ ಮಾಡಿಕೊಳ್ಳಲು ಕರೆ

## ಹೊನ್ನಾಳಿ ತಾಲ್ಲೂಕಿನ ಮಾಸಡಿ ಗ್ರಾಮದ ಕಾರ್ಯಕ್ರಮದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್

ಹೊನ್ನಾಳಿ, ಆ.18- ನಾಡಿನ ಎಲ್ಲಾ ರೈತರು ಬೆಳೆ ಸಮೀಕ್ಷೆ ಆ್ಯಪ್‌ನ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ಹೇಳಿದರು.

ತಾಲ್ಲೂಕಿನ ಮಾಸಡಿ ಗ್ರಾಮದ ಮದಾರಿ ಹನುಮಂತಪ್ಪ ಹಾಗೂ ಅನಿಲ್ ಅವರ ಮೆಕ್ಕೆಜೋಳದ ಹೊಲದಲ್ಲಿ ರೈತರಿಂದಲೇ ಬೆಳೆ ಸಮೀಕ್ಷೆ ಕಾರ್ಯವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬೆಳೆ ಸಮೀಕ್ಷೆ ಆ್ಯಪ್‌ನಲ್ಲಿ ರೈತರು ತಮ್ಮ ಜಮೀನುಗಳಲ್ಲಿನ ಬೆಳೆಗಳ ಸಮೀಕ್ಷೆಯ ಸಮಗ್ರ ವಿವರಗಳನ್ನು ನೀಡಿದರೆ ಮುಂದಿನ ದಿನಗಳಲ್ಲಿ ಸರಕಾರದ ಸವಲತ್ತುಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಈ ಅಲ್ಪ ಅವಧಿಯಲ್ಲೇ 1,52,951 ರೈತರು ತಮ್ಮ ಜಮೀನುಗಳ ಬೆಳೆ ವಿವರಗಳನ್ನು ಆ್ಯಪ್‌ನಲ್ಲಿ ದಾಖಲಿಸಿದ್ದಾರೆ. ರೈತರೂ ತಾಂತ್ರಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ ಎಂಬುದಕ್ಕೆ ಇದು ಸ್ಪಷ್ಟ ನಿದರ್ಶನ ಎಂದು ಹೇಳಿದರು.

ರಾಜ್ಯದ 2.10 ಲಕ್ಷ ರೈತರ ಪೈಕಿ ಕಳೆದ ಬಾರಿ 1.50 ಲಕ್ಷ ರೈತರು ಮಾತ್ರ ಬೆಳೆ ಸಮೀಕ್ಷೆ ವಿವರ ನೀಡಿದ್ದರು. ಇದಕ್ಕೆ ಮುಖ್ಯ ಕಾರಣ 60 ಲಕ್ಷ ರೈತರ ಜಮೀನುಗಳ ಪೋಡಿ ಕಾರ್ಯ ಆಗಿಲ್ಲದಿರುವುದು. ಆದ್ದರಿಂದ, ಪ್ರಸಕ್ತ ಸಾಲಿನಲ್ಲಿ ಈ ತೊಂದರೆ ಉದ್ಭವಿಸಬಾರದು ಎಂಬ ಉದ್ದೇಶದಿಂದ ರೈತರಿಂದಲೇ ಬೆಳೆ ಸಮೀಕ್ಷೆ ಕಾರ್ಯ ನಡೆಸಲು ಹಾಗೂ ವಿವರಗಳನ್ನು ಆ್ಯಪ್‌ಗೆ ಅಪ್‌ಲೋಡ್ ಮಾಡಿಸಲು ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.



ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲಾ ವರ್ಗಗಳ ಜನರಿಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ 1,610 ಕೋಟಿ ರೂ.ಗಳ ಬೃಹತ್ ಮೊತ್ತದ ಪ್ಯಾಕೇಜ್ ನೀಡಿದ್ದಾರೆ. ಪ್ರತಿಯೊಬ್ಬ ರೈತರಿಗೆ 5 ಸಾವಿರ ರೂ.ಗಳಂತೆ ಮೆಕ್ಕೆಜೋಳ ಬೆಳೆದ ರಾಜ್ಯದ 10 ಲಕ್ಷ ರೈತರಿಗೆ 500 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈಗಾಗಲೇ 8 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ಹಣ ಜಮಾ ಆಗಿದ್ದು, ಬಾಕಿ 2 ಲಕ್ಷ ರೈತರ ದಾಖಲೆಗಳನ್ನು ಪರಿಶೀಲಿಸಲಾಗುತ್ತಿದೆ.


ಕೊರೊನಾ ಸಂಕಷ್ಟದಲ್ಲಿ ನಷ್ಟ ಅನುಭವಿಸಿದ ಹೂವು-ಹಣ್ಣು ಬೆಳೆಗಾರರಿಗೆ ಪರಿಹಾರವಾಗಿ 136 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಕಿಸಾನ್ ಸಮ್ಮಾನ್ ಯೋಜನೆಯಡಿ ರಾಜ್ಯದ 50 ಲಕ್ಷ ರೈತರಿಗೆ ರಾಜ್ಯ ಸರಕಾರ ಆ. 16ರಂದು 1 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ಬಿ.ಎಸ್. ಯಡಿಯೂರಪ್ಪ ಅವರು ರೈತ ನಾಯಕ ಎಂಬುದನ್ನು ಈ ಎಲ್ಲಾ ಅಂಶಗಳು ಸ್ಪಷ್ಟವಾಗಿ ದೃಢೀಕರಿಸುತ್ತವೆ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ವಿವರಿಸಿದರು.

ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, ಜಿ.ಪಂ ಅಧ್ಯಕ್ಷೆ ದೀಪಾ ಜಗದೀಶ್, ಸದಸ್ಯರಾದ ಎಂ.ಆರ್. ಮಹೇಶ್, ಉಮಾ ರಮೇಶ್, ಸಿ. ಸುರೇಂದ್ರನಾಯ್ಕ, ತಾಪಂ ಪ್ರಭಾರ ಅಧ್ಯಕ್ಷ ಕೆ.ಎಲ್. ರಂಗನಾಥ್, ನ್ಯಾಮತಿ ತಾಪಂ ಅಧ್ಯಕ್ಷ ಎಸ್.ಪಿ. ರವಿಕುಮಾರ್, ಎಪಿಎಂಸಿ ಅಧ್ಯಕ್ಷ ಜಿ.ಎಸ್. ಸುರೇಶ್, ತಾಲ್ಲೂಕು ಬಿಜೆಪಿ ಅಧ್ಯಕ್ಷ ಜೆ.ಕೆ. ಸುರೇಶ್, ಜಿಲ್ಲಾ ಬಿಜೆಪಿ ಕಾರ್ಯದರ್ಶಿ ಅರಕೆರೆ ಎ.ಎಂ. ನಾಗರಾಜ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಹೊನ್ನಾಳಿ ವಿಭಾಗೀಯ ಕೃಷಿ ಕಚೇರಿಯ ಉಪ ಕೃಷಿ ನಿರ್ದೇಶಕಿ ಎಂ. ಆರ್. ಹಂಸವೇಣಿ, ಸಹಾಯಕ ಕೃಷಿ ನಿರ್ದೇಶಕ ಸಿ.ಟಿ. ಸುರೇಶ್, ರೈತರಿಂದ ಬೆಳೆ ಸಮೀಕ್ಷೆ ಕಾರ್ಯದ ಉಸ್ತುವಾರಿ ಪಬ್ಲಿಕ್ ರೆಸಿಡೆಂಟ್ ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

# ಮಲೇಬೆನ್ನೂರು ಹೋಬಳಿಯಲ್ಲಿ 21 ಜನರಿಗೆ ಕೊರೊನಾ ಸೋಂಕು

## ನಿಟ್ಟೂರಿನಲ್ಲಿ 69 ಜನರಿಗೆ ಟೆಸ್ಟ್ : ತಹಶೀಲ್ದಾರ್ ಭೇಟಿ

ಮಲೇಬೆನ್ನೂರು, ಆ.18- ಪಟ್ಟಣದಲ್ಲಿ ಮಂಗಳವಾರ 8 ಜನರಿಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿ 13 ಜನರಿಗೆ ಕೊರೊನಾ ಸೋಂಕು ತಗಲಿರುವುದು ದೃಢಪಟ್ಟಿದೆ.



ಪಟ್ಟಣದ 1ನೇ ವಾರ್ಡ್‌ನಲ್ಲಿ 35 ವರ್ಷದ ಮಹಿಳೆಗೆ, 5ನೇ ವಾರ್ಡ್‌ನಲ್ಲಿ 81 ವರ್ಷದ ವೃದ್ಧನಿಗೆ, 45 ವರ್ಷದ ಮಹಿಳೆಗೆ, 36 ವರ್ಷದ ವ್ಯಕ್ತಿಗೆ, 15 ವರ್ಷದ ಬಾಲಕಿಗೆ, 19ನೇ ವಾರ್ಡ್‌ನಲ್ಲಿ 16 ವರ್ಷದ ಬಾಲಕಿಗೆ, 22ನೇ ವಾರ್ಡಿನಲ್ಲಿ ಗಂಡ-ಹೆಂಡತಿಗೆ ಕೊರೊನಾ ಪಾಸಿಟಿವ್ ಬಂದಿದೆ.

ಹೊಳೆಸಿರಿಗೆರೆಯಲ್ಲಿ ಮೂವರಿಗೆ, ನಿಟ್ಟೂರು, ಹಳ್ಳಿಹಾಳ್, ಜಿಗಳಿಯಲ್ಲಿ ತಲಾ ಒಬ್ಬರಿಗೆ ಸೋಂಕು ಕಾಣಿಸಿಕೊಂಡಿದೆ. ಇವರೆಲ್ಲರನ್ನೂ ಗುತ್ತೂರಿನಲ್ಲಿರುವ ಕೋವಿಡ್ ಕೇರ್ ಸೆಂಟರ್‌ಗೆ ಶಿಫ್ಟ್ ಮಾಡಲಾಯಿತು.

ನಿಟ್ಟೂರಿನಲ್ಲಿ 69 ಟೆಸ್ಟ್ : ನಿಟ್ಟೂರು ಗ್ರಾಮದ ಕಂಟೈನ್ಮೆಂಟ್ ಏರಿಯಾದಲ್ಲಿ 29 ಜನರಿಗೆ ಮತ್ತು ಈಗಾಗಲೇ ಸೀಲ್‌ಡೌನ್ ಆಗಿರುವ ಮನೆಯೊಂದರಲ್ಲಿ 40 ಜನರಿಗೆ ಮಂಗಳವಾರ ರ್‍ಯಾಪಿಡ್ ಟೆಸ್ಟ್ ಮಾಡಲಾಯಿತು. ಈ ಪೈಕಿ ಒಂದೇ ಮನೆಯಲ್ಲಿ 7 ಜನರಿಗೆ ಕೊರೊನಾ ಪಾಸಿಟಿವ್ ಬಂದಿದೆ ಎಂದು ಹೇಳಲಾಗಿದೆ.

ಪರೀಕ್ಷಾ ಸ್ಥಳಕ್ಕೆ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ, ಟಿಹೆಚ್‌ಓ ಡಾ. ಚಂದ್ರಮೋಹನ್, ಉಪತಹಶೀಲ್ದಾರ್ ಆರ್. ರವಿ ಅವರು ಭೇಟಿ ನೀಡಿದ್ದರು. ಇದೇ ದಿನ ಭಾನುವಳ್ಳಿ ಯಲ್ಲೂ 82 ಜನರಿಗೆ ರ್‍ಯಾಪಿಡ್ ಟೆಸ್ಟ್ ಮಾಡಲಾಯಿತು.

ದೇವರಬೆಳಕೆರೆ ವೈದ್ಯಾಧಿಕಾರಿ ಡಾ. ದರ್ಶನ್, ಹಿರಿಯ ಆರೋಗ್ಯ ಸಹಾಯಕ ಪಿಡಿಓ ಚಂದ್ರಶೇಖರ್, ಗ್ರಾಮ ಲೆಕ್ಕಾಧಿಕಾರಿ ಶ್ರೀಧರ್, ಎಂ. ಉಮ್ಮಣ್ಣ, ಪ್ರಯೋಗ ಶಾಲಾ ತಂತ್ರಜ್ಞರಾದ ರಂಗನಾಥಸ್ವಾಮಿ, ರಮಾನಾಯ್ಕ ಹಾಗೂ ಆಶಾ ಕಾರ್ಯಕರ್ತೆಯರು ಈ ವೇಳೆ ಹಾಜರಿದ್ದರು.

## ಹಳೇಬಾತಿ ಗ್ರಾಮದಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ

ದಾವಣಗೆರೆ, ಆ.18- ಹಳೇಬಾತಿ ಗ್ರಾಮದಲ್ಲಿ ಡೆಂಗ್ಯೂ ವಿರೋಧಿ ಮಾಸಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಡೆಂಗ್ಯೂ ನಿಯಂತ್ರಣದಲ್ಲಿ ಸಮುದಾಯದ ಪಾತ್ರದ ಕುರಿತು ಅರಿವು ಮೂಡಿಸಲಾಯಿತು.

ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಪಿ.ಆರ್. ಅಶ್ವಿನಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಆರೋಗ್ಯ ಮೇಲ್ವಿಚಾರಕ ವಿಜಯಕುಮಾರ್ ಘಟ್ಟ ಉದ್ಘಾಟನೆ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಮಲೇರಿಯಾ ಅಧಿಕಾರಿಗಳ ಕಚೇರಿಯ ತಾಲ್ಲೂಕು ಮೇಲ್ವಿಚಾರಕರಾದ ಆರ್. ರಾಘವೇಂದ್ರ, ಬಿ.ಓ. ಸಂತೋಷ್, ಮೇಘಾ, ರೆಹಮಾನ್, ಗೌರಿಮೆಸ್ತಾ ಹಾಗೂ ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು ಭಾಗವಹಿಸಿದ್ದರು.

## ಹರಿಹರದಲ್ಲಿ 34 ಜನರಿಗೆ ಕೊರೊನಾ, ಓರ್ವನ ಸಾವು

ಹರಿಹರ, ಆ.18- ನಗರದ ಜೆ.ಸಿ. ಬಡಾವಣೆ, ವಿದ್ಯಾನಗರ ಎ ಬ್ಲಾಕ್, ಜಿಜಾಮಾತಾ ಕಾಲೋನಿ, ಜೆ.ಸಿ. ಬಡಾವಣೆ, ಕೆ.ಇ.ಬಿ. ಕಚೇರಿ, ಹಳೆ ಹರ್ಲಾಪುರ, ಬಹಾರ್ ಮಕಾನ್ ವಿಜಯ ನಗರ ಬಡಾವಣೆ ಸೇರಿದಂತೆ 13 ವ್ಯಕ್ತಿಗಳಿಗೆ ಮತ್ತು ಗ್ರಾಮೀಣ ಪ್ರದೇಶವಾದ ಕೆ.ಬೇವಿನಹಳ್ಳಿ 1, ನಿಟ್ಟೂರು 1, ಹಳಿಯಾಳ 1, ಹೊಳೆಸಿರಿಗೆರೆ 3, ಜಿಗಳಿ 1, ಬೆಳ್ಳೂಡಿ 4, ಮಲೆಬೆನ್ನೂರು ನಗರದಲ್ಲಿ 8 ಸೇರಿ ಒಟ್ಟು 34 ವ್ಯಕ್ತಿಗಳಿಗೆ ಕೊರೊನಾ ಸೋಂಕು ಹರಡಿಕೊಂಡಿದ್ದು. ಓರ್ವ ವ್ಯಕ್ತಿಯು ಮರಣ ಹೊಂದಿದ್ದಾರೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

ನಗರದಲ್ಲಿ 549 ಗ್ರಾಮೀಣ ಪ್ರದೇಶದಲ್ಲಿ 337 ಸೇರಿದಂತೆ ಒಟ್ಟು ತಾಲ್ಲೂಕಿನಲ್ಲಿ 886 ವ್ಯಕ್ತಿಗಳಿಗೆ ಕೊರೊನಾ ಸೋಂಕು ತಗುಲಿದ್ದು, 331 ವ್ಯಕ್ತಿಗಳು ಚಿಕಿತ್ಸೆ ಪಡೆದುಕೊಂಡು ಗುಣಮುಖರಾಗಿದ್ದಾರೆ. ಉಳಿದ 555 ವ್ಯಕ್ತಿಗಳು ಹೋಂ ಐಸೋಲೇಷನ್ 248, ದಾವಣಗೆರೆ ಸಿ.ಜೆ. ಆಸ್ಪತ್ರೆಯಲ್ಲಿ 142, ಕೋವಿಡ್ ಕೇರ್ ಸೆಂಟರ್‌ನಲ್ಲಿ 176, ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ 249 ವ್ಯಕ್ತಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ. ಗಂಟಲು ದ್ರವ ಪರೀಕ್ಷೆಯನ್ನು ಇಂದು 118 ವ್ಯಕ್ತಿಗಳಿಗೆ ಮಾಡಿದ್ದು, ಇಲ್ಲಿಯವರೆಗೆ 9,666 ವ್ಯಕ್ತಿಗಳಿಗೆ ಗಂಟಲು ದ್ರವ ಪರೀಕ್ಷೆ ಮಾಡಲಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು 292 ಕಂಟೋನ್ಮೆಂಟ್ ಝೋನ್ ಇವೆ ಎಂದು ಹೇಳಿದರು.

ನಗರಸಭೆ ಪೌರಾಯುಕ್ತರಾದ ಎಸ್. ಲಕ್ಷ್ಮಿ, ಆರೋಗ್ಯ ಅಧಿಕಾರಿ ಡಾ. ಚಂದ್ರಮೋಹನ್, ವಿಮಲ ನಾಯ್ಕ್, ನಗರಸಭೆ ಎಇಇ ಬಿರಾದಾರ ಇತರರು ಹಾಜರಿದ್ದರು.


### ಶ್ರೀ ಲಿಂಗೇಶ್ವರ ರಥೋತ್ಸವ ರದ್ದು



ದಿನಾಂಕ 20.08.2020ರ ಗುರುವಾರ ನಡೆಯಬೇಕಿದ್ದ ರಥೋತ್ಸವ ಮತ್ತು ಅನ್ನ ಸಂತರ್ಪಣೆಯನ್ನು ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಜಿಲ್ಲಾಡಳಿತದ ಆದೇಶದ ಮೇರೆಗೆ ರದ್ದುಪಡಿಸಲಾಗಿದೆ. ದೇವಸ್ಥಾನದಲ್ಲಿ ದೇವರ ದರ್ಶನ ಎಂದಿನಂತೆ ಇರುತ್ತದೆ.

ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘ
ದಾವಣಗೆರೆ.


# ಗಣೇಶೋತ್ಸವ ಮೌಲ್ಯ ಕಳೆದುಕೊಳ್ಳಬಾರದು

ವಿಶ್ವವೇ ಕೊರೊನಾ ಸಂಕಟದ ಸುಳಿಯಲ್ಲಿ ಸಿಲುಕಿ ಒದ್ದಾಡುತ್ತಿರುವ ವಿಷಮ ಪರಿಸ್ಥಿತಿಯಲ್ಲಿ, ಗಣೇಶ ಉತ್ಸವ ಆಚರಿಸುವ ಸಂಭ್ರಮದಲ್ಲಿರುವ ನಾವು ಗಣೇಶೋತ್ಸವದ ಅರ್ಥ ಹಾಗೂ ಮಹತ್ವ ಅರಿಯುವುದು ಅತ್ಯವಶ್ಯಕ. ಜನತೆಯು ಅವರವರ ಮನೆಯಲ್ಲಿ ಗಣೇಶೋತ್ಸವ ಆಚರಿಸುವಂತೆ ಸರ್ಕಾರ ತಿಳಿಸಿದೆ. ಆದರೆ, ಕೆಲವರು ಇದಕ್ಕೆ ವಿರೋಧ ವ್ಯಕ್ತಪಡಿಸಿ, ಸಾರ್ವಜನಿಕವಾಗಿ ಕೇರಿ ಕೇರಿಗೆ, ಊರು ಊರಿಗೆ, ಗಣೇಶೋತ್ಸವ ಆಚರಿಸಲು ಅನುಮತಿ ನೀಡಬೇಕೆಂದು ಕೇಳುತ್ತಿದ್ದಾರೆ. ಕೊರೊನಾ ಸಮಸ್ಯೆಯ ಸಂದರ್ಭದಲ್ಲಿ ನಾವು ಯಾವ ರೀತಿಯಾಗಿ ಗಣೇಶೋತ್ಸವ ಆಚರಿಸಿದರೆ, ಉತ್ತಮ ಎಂಬುದನ್ನು ಅರಿತು ನಾವು ಗಣೇಶೋತ್ಸವ ಆಚರಿಸೋಣ.

ಸುಮಾರು ವರ್ಷಗಳ ಹಿಂದೆ ಸಾಮಾಜಿಕ ಸಂಘಟನೆಯ ದೂರ ದೃಷ್ಟಿಯಲ್ಲಿರಿಸಿಕೊಂಡು ಸಾರ್ವಜನಿಕ ಗಣೇಶೋತ್ಸವವನ್ನು ಬಾಲಗಂಗಾಧರ ತಿಲಕ್ ಅವರು ಪುಣೆಯಲ್ಲಿ ಪ್ರಾರಂಭಿಸಿದರು. ಅವರ ಕನಸಿನಂತೆ ಈ ಸಾರ್ವಜನಿಕ ಗಣೇಶೋತ್ಸವ ಬಹಳ ಪರಿಣಾಮ ಬೀರಿತು.

ಹಳ್ಳಿ ಪಟ್ಟಣ ಪ್ರದೇಶಗಳಲ್ಲೆಲ್ಲ ಗಣೇಶೋತ್ಸವದ ಆಚರಣೆ ಪ್ರಾರಂಭವಾಯಿತು. ಉತ್ಸವದಲ್ಲಿ ಮಕ್ಕಳಿಗೆ ಆಟೋಟ ಸ್ಪರ್ಧೆಗಳು ತರುಣರಿಗೆ, ಹಿರಿಯರಿಗೆ, ಮಹಿಳೆಯರಿಗೆ, ಬೇರೆ ಬೇರೆ ಸ್ಪರ್ಧೆಗಳು ಹಮ್ಮಿಕೊಳ್ಳಲಾಗುತ್ತಿತ್ತು. ಯಕ್ಷಗಾನ, ಹರಿಕಥೆಗಳು, ಧಾರ್ಮಿಕ ಭಾಷಣಗಳು, ಬಹಳ ಚೊಕ್ಕವಾಗಿ ಆಚರಿಸಲ್ಪಡುತ್ತಿದ್ದವು. ಜನರು ಭಕ್ತಿ-ಗೌರವಗಳಿಂದ ಗಣೇಶ ವಿಗ್ರಹ ಸ್ಥಾಪಿಸಲ್ಪಟ್ಟ ಸ್ಥಳಕ್ಕೆ ದೇವಸ್ಥಾನದ ಸ್ಥಾನಮಾನ ನೀಡುತ್ತಿದ್ದರು. ತಮ್ಮ ಕೈಲಾದ ದೇಣಿಗೆ ಕೊಡುತ್ತಿದ್ದರು. ನಾವೆಲ್ಲರೂ ಒಂದೇ ಎಂಬ ಭಾವನೆ ಈ ಸಾರ್ವಜನಿಕ ಗಣೇಶೋತ್ಸವದಿಂದ ಮೂಡುತ್ತಿತ್ತು.

ಮುಂಬಯಿ ಮತ್ತು ಪೂರ್ಣ ಮಹಾನಗರಗಳಲ್ಲಿ ಗಣೇಶೋತ್ಸವ ಭರ್ಜರಿಯಿಂದ ಆಚರಿಸುತ್ತಾರೆ.



ಮುಂಬಾಯಿ ಮಹಾನಗರದಲ್ಲಿ ಗಣೇಶೋತ್ಸವ ಭರಾಟೆಯ ಅಂಗವಾಗಿ ಭಕ್ತನೊಬ್ಬ ತನ್ನ ತಲೆಯಲ್ಲಿ ತನ್ನ ಕೇಶ ವಿನ್ಯಾಸದಿಂದ ಗಣೇಶನನ್ನು ಚಿತ್ರ ಸಿಕೊಂಡಿದ್ದ. ಈ ಚಿತ್ರ ರೂಪಿಸಿದವರು ಅಂತರರಾಷ್ಟ್ರೀಯ ಪ್ರಶಸ್ತಿ ವಿಜೇತ ಕನ್ನಡಿಗ ಶಿವರಾಂ ಭಂಡಾರಿ.

ಗಣೇಶನನ್ನು ಮೋದಕ ಪ್ರಿಯ ಎಂದು ಕರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸುವ ಗಣೇಶೋತ್ಸವದಲ್ಲಂತೂ ಪ್ರತಿದಿನದ ಪೂಜೆಯ ಸಂದರ್ಭದಲ್ಲಿ ಬಿಸಿಬಿಸಿಯಾದ ಮೋದಕಗಳ ತಟ್ಟೆಯನ್ನು ಸಾಮಾನ್ಯವಾಗಿ ಕಾಣಬಹುದಾಗಿತ್ತು. ಆದರೆ, ಇಂದು ಎಲ್ಲೆಡೆ ಗಣೇಶೋತ್ಸವದ ಮೂಲ ಉದ್ದೇಶವನ್ನೇ ಜನರು ಮರೆಯುತ್ತಿದ್ದಾರೆ. ನಮ್ಮ ಯುವ ಪೀಳಿಗೆ ಉತ್ಸವದ ರೂಪವನ್ನೇ ಪೂರ್ತಿ ತಿರುಚುತಿದಾರೆ. ಒಂದು ಊರಿಗೆ ಒಂದು ಕೇರಿಗೆ ಒಂದು ಸಾರ್ವಜನಿಕ ಗಣಪತಿ ಉತ್ಸವ ಇಟ್ಟುಕೊಂಡರೆ, ಎಲ್ಲಾ ಕ್ಷೇಮವಾಗಿ ನಡೆಯಬಹುದು. ಆದರೆ, ಹಾಗಾಗುತ್ತಿಲ್ಲ ಸಾರ್ವಜನಿಕ ಅಂದಮೇಲೆ ಚಂದ ವಸೂಲು ಮಾಡುವುದು, ಸಾಮಾನ್ಯ ಹತ್ತು-ಹದಿನೈದು ಮಂದಿಗಳ ಒಳಗೊಂಡ ಗುಂಪೊಂದು ಯಾವುದೇ ಸೌಜನ್ಯ ತೋರಿಸದೆ, ಸಾರ್ವಜನಿಕರಲ್ಲಿ ಹಣ ವಸೂಲಿ ಮಾಡುತ್ತಾರೆ. ಕೀಳುಮಟ್ಟಕ್ಕೆ ಇಳಿಯುತ್ತಾರೆ. ದಿನವಿಡೀ ಹಣ ಸಂಗ್ರಹಣೆ ಮಾಡಿ ಸಂಜೆಯಾಗುತ್ತಿದ್ದಂತೆ ಶರಾಬಿನ ಮೊರೆ ಹೋಗುತ್ತಾರೆ. ವಿಸರ್ಜನೆಯ ದಿವಸವಂದು ಕೇಳುವುದೇ ಬೇಡ, ಪವಿತ್ರವಾದ ವಿಘ್ನ ವಿನಾಶಕ ಮೂರ್ತಿಯನ್ನು ಕಂಠ ಪೂರ್ತಿ ಕುಡಿದೆ ಮುಟ್ಟುತ್ತಾರೆ. ಅಸಹ್ಯವಾಗಿ ನರ್ತಿಸುತ್ತಾರೆ. ಪರಸ್ಪರ ಜಗಳ ಆಡುವುದು, ಚೂರಿಯಿಂದ ಇರಿಯುವುದು, ಮರಣ ಹೊಂದಿದ ಉದಾಹರಣೆಗಳು ಉಂಟು.

ಎಂತಹ ವಿಪರ್ಯಾಸ ! ತಿಲಕರ ಕನಸು ನುಚ್ಚುನೂರಾಗುವ ದಿನ ದೂರವಿಲ್ಲ ವೆನಿಸುತ್ತದೆ. ನಿಧಿ ಸಂಗ್ರಹಿಸುವಲ್ಲಿ ಒತ್ತಾಯ, ಧ್ವನಿ ಪ್ರದೂಷಣ, ಅತಿ ಕರ್ಚಿನ ಅಲಂಕಾರ, ಅಭಿರುಚಿ ಹೀನ ಹಾಡುಗಳು ಮತ್ತು ಕುಣಿತ ಹೀಗಾಗಬಾರದು, ಯಾವುದು ಪಾತ್ರ, ಯಾವುದು ಅಪಾತ್ರ ಎನ್ನುವ ವಿವೇಕ ನಮ್ಮಲ್ಲಿರಬೇಕು. ಭಕ್ತಿ ಶ್ರದ್ಧೆಯಿಂದ, ಸದುದ್ದೇಶದಿಂದ ಉತ್ಸವಗಳು ನಡೆದು, ಸಮಾಜ ಸಂಘಟನೆಗೆ ಒಳ್ಳೆಯ ಸಂದೇಶ ನೀಡುವಂತಾಗಬೇಕು. ಜನಸಾಮಾನ್ಯರಿಗೆ ಈ ಆಚರಣೆ ಪ್ರಿಯವಾಗುವಂತಾಗಬೇಕೇ ವಿನಃ ಅಸ್ತವ್ಯಸ್ತವಾದ ಕೂಡದು, ಗಣೇಶೋತ್ಸವ ತನ್ನ ಮೌಲ್ಯ ಕಳೆದುಕೊಳ್ಳಬಾರದಲ್ಲವೇ ?

**- ಜೆಂಬಿಗಿ ಮೃತ್ಯುಂಜಯ**
ಕನ್ನಡ ಉಪನ್ಯಾಸಕರು, ದಾವಣಗೆರೆ.

## ವಿವಿಧ ನಿಗಮಗಳ ಸಾಲ - ಸೌಲಭ್ಯಕ್ಕೆ ಅರ್ಜಿ

ದಾವಣಗೆರೆ, ಆ.18- ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಹಾಗೂ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿವಿಧ ಯೋಜನೆ ಗಳ ಸಾಲ-ಸೌಲಭ್ಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆಯಾ ನಿಗಮದ ವೆಬ್‌ಸೈಟ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ನಿಗಮದ ಜಿಲ್ಲಾ ಕಚೇರಿಗೆ ಅಥವಾ ಆನ್‌ಲೈನ್‌ನಲ್ಲಿ ಭರ್ತಿ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದು. ಇದೇ ದಿನಾಂಕ 31 ಕೊನೆಯ ದಿನವಾಗಿರುತ್ತದೆ.

ಹೆಚ್ಚಿನ ಮಾಹಿತಿಗೆ 08192-258648 ಹಾಗೂ ಆಯಾ ನಿಗಮದ ಜಿಲ್ಲಾ ಕಚೇರಿಯನ್ನು ಸಂಪರ್ಕಿಸಲು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.


**WANTED**

- Medical & Surgical Nursing Staff
- Ward Nursing Staff
- X-Ray and CT-Scan Technician
- House Keeping Staff
- Duty Doctor
- Staff nurse (GNM and B.Sc) trained in ICU and Medical and Surgical Dept.

**AARAIKE SUPER SPECIALITY HOSPITAL**

Aaraike Hospitals

# 1683/1, BETWEEN 16TH & 17TH CROSS, YAJAMAN MOTHI DODDAPPA LAYOUT, OPP TO STADIUM, HADADI ROAD, DAVANGERE-577002.

Ph. : 08192-233446, Mob. 9606084120



**ಪ್ರವೇಶ ಪ್ರಕಟಣೆ 2020-21**



**ಎಸ್.ಎಲ್. ಪದವಿ ಪೂರ್ವ ಕಾಲೇಜ್**

ಎಸ್. ನಿಜಲಿಂಗಪ್ಪ ಬಡಾವಣೆ, ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ದಾವಣಗೆರೆ-4.

2020-21ನೇ ಶೈಕ್ಷಣಿಕ ಸಾಲಿಗೆ ಎಸ್.ಎಸ್.ಎಲ್.ಸಿ. ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಈ ಕೆಳಕಂಡ ವಿಭಾಗಗಳಿಗೆ ಪ್ರವೇಶಾವಕಾಶವಿರುತ್ತದೆ.

ವಿಜ್ಞಾನ ವಿಭಾಗ -PCMB, ವಾಣಿಜ್ಯ ವಿಭಾಗ -ABES

ಕಲಾ ವಿಭಾಗ - HEPS, HEPG, HEKS

ದಾಖಲಾತಿಗಾಗಿ ಅರ್ಜಿ ಪಡೆಯಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :

Arts : 94802 25792, Commerce : 99640 05949
Science: 99167 27380, 08192 223757

ಸಹಿ/- ಕಾರ್ಯದರ್ಶಿ | ಸಹಿ/- ಪ್ರಾಂಶುಪಾಲರು

# ನಗರದ ವಿವಿಧೆಡೆಯಲ್ಲಿ ಸಂಭ್ರಮದ ಸ್ವಾತಂತ್ರ್ಯೋತ್ಸವ

**ಜಿಲ್ಲಾ ಬಿಜೆಪಿ ಕಚೇರಿ:** ಜಿಲ್ಲಾಧ್ಯಕ್ಷ ಹನಗವಾಡಿ ವೀರೇಶ್ ಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸುತ್ತಾ ಪಕ್ಷದ ಸಂದೇಶವನ್ನು ನೀಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖಂಡರುಗಳಾದ ಮಾಜಿ ಸಚೇತಕ ಡಾ.ಎ.ಹೆಚ್. ಶಿವಯೋಗಿ ಸ್ವಾಮಿ, ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, ಮೇಯರ್ ಅಜಯ್ ಕುಮಾರ್, ಉಪ ಮೇಯರ್ ಸೌಮ್ಯ ನರೇಂದ್ರ, ಯಶವಂತ್ ರಾವ್ ಜಾಧವ್, ಸಂಗನಗೌಡ್ರು, ದೇವೇಂದ್ರಪ್ಪ, ಲಿಂಗರಾಜ್ ಗೌಳಿ, ಗೋಪಾಲ್ ರಾವ್ ಮಾನೆ, ಎಲ್.ಡಿ. ಗೋಣಪ್ಪ, ಹೇಮಂತ್ ಕುಮಾರ್, ಜಿಲ್ಲಾ ಮಾಧ್ಯಮ ಪ್ರಮುಖ ಹೆಚ್.ಪಿ. ವಿಶ್ವಾಸ್, ಪಾಲಿಕೆ ಸದಸ್ಯರುಗಳಾದ ಸೋಗಿ ಶಾಂತ್ ಕುಮಾರ್, ಕೆ.ಎಂ. ವೀರೇಶ್ ಪೈಲ್ವಾನ್, ಎಸ್.ಟಿ. ವೀರೇಶ್, ಗಾಯತ್ರಿ ಬಾಯಿ, ಕಿಶೋರ್ ಕುಮಾರ್, ಮಂಜು ಚಿಕ್ಕಿ ಹಾಗೂ ಪಕ್ಷದ ಮುಖಂಡರುಗಳು ಭಾಗವಹಿಸಿದ್ದರು.

**ದುಗ್ಗಮ್ಮ ಪೇಟೆ ಸರ್ಕಾರಿ ಹಿ.ಪ್ರಾ. ಶಾಲೆ:** ಎಸ್‌ಡಿಎಂಸಿ ಅಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸಮನ್ವಯ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಿಂಗರಾಜು ಹಾವನೂರು ಧ್ವಜಾರೋಹಣ ನೆರವೇರಿಸಿದರು. ವಿದ್ಯಾಗಮ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತಂದಿರುವ ಎಲ್ಲ ಶಿಕ್ಷಕರನ್ನು ಶ್ಲಾಘಿಸಿದರು. ಶಿಕ್ಷಕರುಗಳಾದ ಕುಸುಮ, ಸಿದ್ದಮ್ಮ, ರತ್ನಮ್ಮ ಮತ್ತು ವಿರೂಪಾಕ್ಷಪ್ಪ ಹಾಗೂ ಎಸ್‌ಡಿಎಂಸಿ ಸದಸ್ಯರುಗಳಾದ ವೀರೇಶ್ ಮೌನೇಶಾಚಾರ್, ಶಶಿಧರ್ ಹಾಜರಿದ್ದರು. ಮುಖ್ಯ ಶಿಕ್ಷಕಿ ಕಲ್ಲಮ್ಮ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶಿಕ್ಷಕಿ ವಜ್ರೇಶ್ವರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

**ಸಿದ್ಧಗಂಗಾ ವಿದ್ಯಾಸಂಸ್ಥೆ:** ಸ್ವಾತಂತ್ರ್ಯ ದಿನಾಚರಣೆಯನ್ನು ಸಿದ್ದಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಆಚರಿಸಲಾಯಿತು. ದಿ. ಎಂ.ಎಸ್. ಶಿವಣ್ಣನವರಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿರುವ ಡಿ.ಎಸ್. ಪ್ರಶಾಂತ್ ಧ್ವಜಾರೋಹಣ ನೆರವೇರಿಸಿದರು. ಕನ್ನಡ ಉಪನ್ಯಾಸಕ ಸದಾಶಿವ ಹೊಳ್ಳ ಸ್ವಾತಂತ್ರ್ಯ ದಿನದ ಮಹತ್ವವನ್ನು ತಿಳಿಸಿದರು. ಸಂಸ್ಥೆ ಮುಖ್ಯಸ್ಥೆ ಜಸ್ಟಿನ್ ಡಿಸೌಜ, ಕಾರ್ಯದರ್ಶಿ ಡಿ.ಎಸ್. ಹೇಮಂತ್, ನಿರ್ದೇಶಕರಾದ ಡಾ. ಜಯಂತ್, ಪ್ರಾಚಾರ್ಯೆ ಗಾಯಿತ್ರಿ, ಮುಖ್ಯ ಶಿಕ್ಷಕಿ ಕೆ.ಎಸ್. ರೇಖಾರಾಣಿ, ಎಂ.ಪಿ. ಶಾಂತಿ ಶುಭ ಕೋರಿದರು. ದೈಹಿಕ ಶಿಕ್ಷಕರು ಧ್ವಜಾರೋಹಣ ಕಾರ್ಯಕ್ರಮ ನಿರ್ವಹಿಸಿದರು.

**ಬಾಪೂಜಿ ಇಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯ:** ನಿವೃತ್ತ ಡಿವೈಎಸ್‌ಪಿ ಪಿ.ಎಸ್. ಶಾಹು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕಾಲೇಜು ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಕಾಲೇಜು ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಅಧ್ಯಕ್ಷತೆ ವಹಿಸಿದ್ದರು. ಕಾಲೇಜು ಅಧ್ಯಾಪಕ ಮತ್ತು ಅಧ್ಯಾಪಕೇತರ ವೃಂದದವರು ಪಾಲ್ಗೊಂಡಿದ್ದರು. ಡಾ. ವೀಣಾ ನಾಡಿಗ್ ಪ್ರಾರ್ಥಿಸಿದರು. ಡಾ. ತಿಪ್ಪೇಸ್ವಾಮಿ ಏಕಬೋಟೆ ಸ್ವಾಗತಿಸಿದರು. ಡಾ. ಕೆ.ಸಿ. ದೇವೇಂದ್ರಪ್ಪ ವಂದಿಸಿದರು. ಡಾ. ಜಿ.ಪಿ. ದೇಸಾಯಿ ಕಾರ್ಯಕ್ರಮ ನಿರೂಪಿಸಿದರು.

**ಸ.ಪ್ರ.ದ. ಕಾಲೇಜು:** ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಪ್ರಾಂಶುಪಾಲ ತೂ.ಕ. ಶಂಕರಯ್ಯ ಧ್ವಜಾರೋಹಣ ನೇರವೇರಿಸಿದರು. ಕಾಲೇಜು ಅಧ್ಯಾಪಕರುಗಳಾದ ಪ್ರೊ. ಭೀಮಣ್ಣ ಸುಣಗಾರ, ತಿಪ್ಪಾರೆಡ್ಡಿ, ಶಂಕರ್ ಶೀಲಿ, ಗುರುಮೂರ್ತಿ, ಅಂಜಿನಪ್ಪ, ದಾದಾ ಪೀರ್ ನವಿಲೇಹಾಳ್, ಜಯಣ್ಣ, ಕೊಟ್ರಪ್ಪ, ಗಿರಿಸ್ವಾಮಿ, ವೀರೇಶ್, ಸದಾಶಿವ, ಲಕ್ಷ್ಮಣ್, ಆನಂದಕಂದ, ಸುರೇಶ್, ಮರುಳಸಿದ್ದಪ್ಪ, ಜೆ.ಎಂ. ಮಂಜುನಾಥ್, ಶಿವಕುಮಾರ್, ಪ್ರಕಾಶ್ ಕೊರಮರ, ನಂದಿಹಳ್ಳಿ ಮಂಜಣ್ಣ, ದಿನೇಶ್, ನಾರಾಯಣಸ್ವಾಮಿ, ನರೇಶ್, ಪ್ರೊ. ಜಿ.ಟಿ. ಶಶಿಕಲಾ, ಲತಾ, ಗೌರಮ್ಮ, ತ್ರಿವೇಣಿ, ರಂಗಸ್ವಾಮಿ, ಶಾಂತಕುಮಾರಿ ಇನ್ನಿತರರಿದ್ದರು.

**ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ (ಸಿಬಿಎಸ್‌ಇ) ಶಾಲೆ:** ಕಾರ್ಯಕ್ರಮದಲ್ಲಿ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಸತಿಯುತ ಸಿಬಿಎಸ್‌ಇ ಶಾಲೆ, ಐಜಿಸಿಎಸ್‌ಇ ಶಾಲೆ, ಪಿಯು ಕಾಲೇಜು, ಡಾ. ಶಾಮನೂರು ಶಿವಶಂಕರಪ್ಪ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಮತ್ತು ಬಾಪೂಜಿ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ (ಸಿಬಿಎಸ್‌ಇ) ಶಾಲೆಯ ಮುಖ್ಯಸ್ಥರಾದ ಮಂಜುನಾಥ್ ರಂಗರಾಜು ಧ್ವಜಾರೋಹಣ ನೆರವೇರಿಸಿ, ಸ್ವಾತಂತ್ರ್ಯ ದಿನದ ಮಹತ್ವ ಹಾಗೂ ಸಂಗೊಳ್ಳಿ ರಾಯಣ್ಣನವರ ಜನ್ಮದಿನದ ಕುರಿತು ತಿಳಿಸಿದರು. ಸಹ ಶಿಕ್ಷಕ ಪಿ.ವಿ. ಪ್ರಭು ಮುಖ್ಯಅತಿಥಿಗಳ ಪರಿಚಯ ಮಾಡಿಕೊಟ್ಟರು. ಪ್ರಾಂಶುಪಾಲ ಸಮರೇಂದ್ರ ಪಾಣಿಗ್ರಹಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶೈಕ್ಷಣಿಕ ಸಲಹೆಗಾರ ಮಂಜಪ್ಪ ಮಾತನಾಡಿದರು. ಆನ್‌ಲೈನ್ ಮೂಲಕ ವಿದ್ಯಾರ್ಥಿಗಳಾದ ಎಂ.ಎಸ್. ಯುಕ್ತಿ ಭರತನಾಟ್ಯ ಪ್ರದರ್ಶಿಸಿದರು. ಕೆ.ಟಿ. ವಿಕಾಸ್ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಶ್ರೀಲಕ್ಷ್ಮೀ ವಾದ್ಯದ ಮೂಲಕ ದೇಶ ಭಕ್ತಿಗೀತೆ ನುಡಿಸಿದರು. ಸ್ಲೈಡ್ ಶೋ ಮೂಲಕ ಕೊರೊನಾ ವಾರಿಯರ್ಸ್‌ಗಳನ್ನು ಗೌರವಿಸಲಾಯಿತು. ನರ್ಸರಿ ಮತ್ತು ಪ್ರಾಥಮಿಕ ವಿಭಾಗದ ಮುಖ್ಯಸ್ಥರು, ಶಾಲೆಯ ಬೋಧಕ ಹಾಗೂ ಬೋಧಕೇತರ ವರ್ಗದವರು ಉಪಸ್ಥಿತರಿದ್ದರು. ಪ್ರಾಥಮಿಕ ಶಾಲಾ ಸಹಶಿಕ್ಷಕಿ ವೀರಾಂಬಿಕಾ ಹಾಗೂ ವಿದ್ಯಾ ನಿರೂಪಿಸಿದರು. ಪ್ರಾಥಮಿಕ ವಿಭಾಗದ ಮುಖ್ಯಸ್ಥೆ ಎಲ್ಸಿ ಲೂಯಿಸ್ ಸ್ವಾಗತಿಸಿದರು. ಸಹಶಿಕ್ಷಕ ಕೆ. ಬಸವರಾಜ್ ವಂದಿಸಿದರು.

**ದಾವಣಗೆರೆ ದಕ್ಷಿಣ ರೋಟರಿ:** ರೋಟರಿ ಬಾಲಭವನದಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ರೋಟರಿ ಸಹ ರಾಜ್ಯಪಾಲ ಚಂದ್ರಚಾರ್, ರೋಟರಿ ಅಧ್ಯಕ್ಷ ಹೆಚ್.ಜಿ. ಬಸವರಾಜ, ಗಜಾನನ, ಉಮೇಶ್ ಶೆಟ್ಟಿ, ಶಂಕರ್ ಪಾಟೀಲ, ಮಲ್ಲಸಾ ಕಾಟ್ವೆ, ಅಶೋಕ ರಾಯಭಾಗಿ, ಅಮೀರ ಮೇಡಂ, ರೋಟರಾಕ್ಟ್ ಅಧ್ಯಕ್ಷ ಸದಾನಂದ, ಚೇತನ, ಮಾನಸ, ಶ್ರೀಧರ್ ಇನ್ನಿತರರಿದ್ದರು.

**ಬೀಡಿ ಕಾರ್ಮಿಕರ ಕಲ್ಯಾಣ ಸಂಘ:** ಸಂಘದ ಕಚೇರಿಯಲ್ಲಿ ಬೀಡಿ ಕಾರ್ಮಿಕರ ಸಂಘದ ಅಧ್ಯಕ್ಷ ಎಂ. ರಾಜಾಸಾಬ್ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ರಾಜ್ಯ ಸರ್ಕಾರ ಕಾರ್ಮಿಕರಿಗೆ ವಿಶೇಷ ಪ್ಯಾಕೇಜ್ ಅನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಮುಬೀನಾ ಬಾನು ಪ್ರಾರ್ಥಿಸಿದರು. ರೋಮನ್ ಬಾನು ಸ್ವಾಗತಿಸಿದರು. ಸಿಮ್ರಾನ್ ಬಾನು ವಂದಿಸಿದರು. ಕೊನೆಯಲ್ಲಿ ಸಿಹಿ ವಿತರಿಸಲಾಯಿತು.



**ವಿದ್ಯಾ ವಿಕಾಸ್ ಕಾನ್ವೆಂಟ್ ಶಾಲೆ:** ವಿದ್ಯಾಸಂಸ್ಥೆ ಅಧ್ಯಕ್ಷ ಡಿ.ವಿ. ಚಿಕ್ಕವೀರಯ್ಯ ನೇತೃತ್ವದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಸಲಾಯಿತು. ಸಂಸ್ಥೆ ಕಾರ್ಯದರ್ಶಿ ಡಿ.ಸಿ. ಸುರೇಶ್, ಮುಖ್ಯ ಶಿಕ್ಷಕಿ ವರಲಕ್ಷ್ಮೀ ಹಾಗೂ ಸಹ ಶಿಕ್ಷಕಿ ಗೀತಾ ಉಪಸ್ಥಿತರಿದ್ದರು.

**ಕಾವೇರಿ ಸಾಂಸ್ಕೃತಿಕ ವೇದಿಕೆ:** ಮಹಾಲಕ್ಷ್ಮೀ ಬಡಾವಣೆಯ ಕಾವೇರಿ ಅಪಾರ್ಟ್‌ಮೆಂಟ್‌ನ ಕಾವೇರಿ ಸಾಂಸ್ಕೃತಿಕ ವೇದಿಕೆ ಆಶ್ರಯದಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಕಾವೇರಿ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆ ವಹಿಸಿದ್ದರು. ವೇದಿಕೆ ಗೌರವಾಧ್ಯಕ್ಷ ಗುರುಮೂರ್ತಿ, ಸದಸ್ಯ ಪ್ರಕಾಶ್ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಶಿಕ್ಷಕಿ ಅನುರಾಧ ಸ್ವಾತಂತ್ರ್ಯೋತ್ಸವ ಕುರಿತು ಮಾತನಾಡಿದರು. ಚಂದ್ರಪ್ಪ, ಕೀರ್ತಿ ನಾರಾಯಣ ಶಾಸ್ತ್ರೀ, ಅನಿತಾ ಸುನೀಲ್, ತಾರಾ ಶರ್ಮ, ಜ್ಯೋತಿ ಗಣೇಶ್ ಶೆಣೈ, ನಿರ್ಮಲಮ್ಮ ಚಂದ್ರಪ್ಪ ಇನ್ನಿತರರಿದ್ದರು. ಶೋಭಾ ಮತ್ತು ಡಾ. ಅಶ್ವಿನಿ ನಾಡಗೀತೆ ಹಾಡಿದರು. ವೇದಿಕೆ ಪ್ರಧಾನ ಕಾರ್ಯದರ್ಶಿ ದಿನೇಶ್ ಸ್ವಾಗತಿಸಿದರು.

**ನಿಂಚನ ಪಬ್ಲಿಕ್ ಸ್ಕೂಲ್:** ಶಾಲಾ ಆವರಣದಲ್ಲಿ ಸ್ವಾತಂತ್ರ್ಯ ದಿನ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 223ನೇ ಜನ್ಮದಿನವನ್ನು ಆಚರಿಸಲಾಯಿತು. ಸಂಸ್ಥೆ ಕಾರ್ಯದರ್ಶಿ ಚಂದ್ರಕಲಾ ಎಸ್. ನಿಂಗಪ್ಪ ಧ್ವಜಾರೋಹಣ ನೆರವೇರಿಸಿದರು. ಸಂಸ್ಥೆ ಸಂಸ್ಥಾಪಕ ಅಧ್ಯಕ್ಷ ಎಸ್. ನಿಂಗಪ್ಪ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಪ್ರಾಂಶುಪಾಲೆ ಶೃತಿ ಇನಾಂದಾರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ/ಬೀರಲಿಂಗೇಶ್ವರ ಪ.ಪೂ. ಕಾಲೇಜು:** ಸಂಯುಕ್ತಾಶ್ರಯದಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 223ನೇ ಜನ್ಮದಿನವನ್ನು ಆಚರಿಸಲಾಯಿತು. ಸಂಘದ ಉಪಾಧ್ಯಕ್ಷ ಹಾಲೇಕಲ್ ಎಸ್.ಟಿ. ಅರವಿಂದ್ ಧ್ವಜಾರೋಹಣ ನೆರವೇರಿಸಿದರು. ಕಾರ್ಯದರ್ಶಿ ಎಸ್.ಹೆಚ್. ಪ್ರಕಾಶ್, ಪ್ರಾಂಶುಪಾಲ ರಾಜಶೇಖರ್ ಮತ್ತು ನಿರ್ದೇಶಕರುಗಳಾದ ಬಿ. ಲಿಂಗರಾಜ್, ಸಿದ್ದಪ್ಪ ಅಡಾಣಿ, ಹೆಚ್.ವೈ. ಶಶಿಧರ್, ಎಸ್.ಬಿ. ಗಿರೀಶ್ ಮತ್ತಿತರರು ಹಾಜರಿದ್ದರು.

**ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯ:** ಕಾಲೇಜು ಪ್ರಾಂಶುಪಾಲ ಡಾ. ವೈ. ವಿಜಯ ಕುಮಾರ್ ಧ್ವಜಾರೋಹಣ ನೆರವೇರಿಸಿದರು. ಕಾಲೇಜು ಆಡಳಿತ ಮಂಡಳಿ ಪ್ರತಿನಿಧಿ ವೈ.ಯು. ಸುಭಾಶ್ ಚಂದ್ರ, ಕಾರ್ಯಕ್ರಮ ಸಂಯೋಜಕ ಹೆಚ್.ಎಸ್. ಓಂಕಾರಪ್ಪ, ದೈಹಿಕ ಶಿಕ್ಷಕ ಜಿ.ಬಿ. ಅಜ್ಜಯ್ಯ, ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳು, ಪ್ರಾಧ್ಯಾಪಕ ವರ್ಗದವರು ಮತ್ತು ಸಿಬ್ಬಂದಿವರ್ಗದವರು ಹಾಜರಿದ್ದರು. ಭೌತಶಾಸ್ತ್ರ ವಿಭಾಗದ ಅಧ್ಯಾಪಕಿ ನಾಗಲಕ್ಷ್ಮೀ ವಂದೇ ಮಾತರಂ ಹಾಡು ಪ್ರಸ್ತುತ ಪಡಿಸಿದರು. ಎಲೆಕ್ಟ್ರಾನಿಕ್ಸ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿನಿ ಬಿಂದು ಸ್ವಾಗತಿಸಿದರು.

**ಸೋಮೇಶ್ವರ ವಿದ್ಯಾಲಯ:** ದೇಶದ 74ನೇ ಸ್ವಾತಂತ್ರ್ಯ ದಿನವನ್ನು ಆಚರಿಸಲಾಯಿತು. ಸಂಸ್ಥೆ ಗೌರವ ಕಾರ್ಯದರ್ಶಿ ಕೆ.ಎಂ. ಸುರೇಶ್ ಮಾತನಾಡಿದರು.

**ದಾರುಲ್ ಉಲೂಮ್ ರಜಾವಲ್ ಮುಸ್ತಫಾ ವ ದಾರುಲ್ ಯತಾಮಾ ಅನಾಥಾಶ್ರಮ:** ಸಂಸ್ಥೆ ಸದಸ್ಯ ಹಫೀಜ್ ಅಮೀನ್ ಧ್ವಜಾರೋಹಣ ನೆರವೇರಿಸಿದರು. ಮೌಲಾನಾ ಅಬ್ದುಲ್ ಮುನಾಫ್, ಮೌಲಾನಾ ಮೊಹಮ್ಮದ್ ರಜಾ ಖಾದ್ರಿ, ಮೌಲಾನಾ ಅಲಿ ರಜಾ, ಮೌಲಾನಾ ಅಲೇ ರಜಾ, ಮೌಲನಾ ರಿಯಾಜ್ ಖಾದರ್ ಬಾಷಾ, ಅಬ್ದುಲ್ ಮುನಾಫ್ ಇನ್ನಿತರರಿದ್ದರು.

**ಜ್ಞಾನದೀಪ ಪಬ್ಲಿಕ್ ಸ್ಕೂಲ್:** ಸಂಸ್ಥೆ ಕಾರ್ಯದರ್ಶಿ ಕೆ. ಬಸವರಾಜಪ್ಪ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿರ್ದೇಶಕರುಗಳಾದ ಬಿ.ಎಸ್. ಗಿರಿಯಾಚಾರ್. ಕೆ. ಪ್ರಭು ಆಗಮಿಸಿದ್ದರು. ನಿವೃತ್ತ ಕನ್ನಡ ಶಿಕ್ಷಕರು, ತಾಲ್ಲೂಕು ಕಸಾಪ ಮಾಜಿ ಅಧ್ಯಕ್ಷರೂ ಆದ ಕೆ.ಎನ್. ಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಅಧ್ಯಕ್ಷತೆಯನ್ನು ಕೆ. ಬಸವರಾಜಪ್ಪ ವಹಿಸಿ ಮಾತನಾಡಿದರು. ಬಿ.ಎಸ್. ಗಿರಿಯಾಚಾರ್ ಸ್ವಾಗತಿಸಿದರು. ಮುಖ್ಯ ಶಿಕ್ಷಕಿ ವಿಶಾಲಾಕ್ಷಿ ವಂದಿಸಿದರು. ಶಿಕ್ಷಕಿಯರಾದ ಎಂ. ಕವಿತ, ಗಿರಿಜಾ ಕಬ್ಬೂರು, ದಿವ್ಯ, ಉಮಾ, ನಿರ್ಮಲಾ ಇನ್ನಿತರರು ಸಹಕಾರ ನೀಡಿದರು.

**ಕನ್ನಡ ಸಮರ ಸೇನೆ:** ಸಂಘಟನೆಯ ರಾಜ್ಯಾಧ್ಯಕ್ಷೆ ದ್ರಾಕ್ಷಾಯಮ್ಮ ಮಲ್ಲಿಕಾರ್ಜುನಯ್ಯ ಮತ್ತು ಹೆಚ್.ಆರ್. ಜಯಲಕ್ಷ್ಮೀ ಅತ್ತಿಗೆರೆ ಮಂಜುನಾಥ್ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ರಾಜ್ಯ ಮಹಿಳಾ ಅಧ್ಯಕ್ಷರುಗಳಾದ ರಾಜೇಶ್ವರಿ ಉಮೇಶ್, ದೀಪ ಜೀವರಾಜಯ್ಯ, ಮೇಘಾ ಶಾಂತಯ್ಯ, ರಂಜಿತ ಟಿ.ಎಂ. ಶಿವಯ್ಯ, ಸುಧಾ ಶಾಂತರಾಜ್, ಅಂಬಿಕಾ ದೇವೇಂದ್ರಚಾರ್, ಕಾವ್ಯ ವಿಜಯಕುಮಾರ್, ಸಾವಿತ್ರಿ ಬಾಯಿ, ಸುವರ್ಣಮ್ಮ, ಇಂದ್ರಮ್ಮ ರುದ್ರಪ್ಪ, ಕಮಲಾಕ್ಷಿ ಪ್ರಭು, ಕೆ. ಕವಿತಾ, ಸುಮಾ ಸಾಯಿನಾಥ್, ಶಿವಲಿಂಗಮ್ಮ, ರೇಣುಕಮ್ಮ, ಬಿ. ರಹಜಾನ್, ಬಿ. ರಜಾಯಿದ್, ಸಾವಿತ್ರಮ್ಮ, ನೇಹಾ ಕೌಸರ್, ಬಿ. ಶಂಷದ್, ರೂಪಾ, ಲತಾ ಕಲ್ಲೇಶ್, ಶಾಂತ, ನಾಗಮ್ಮ, ದುರ್ಗಾಶ್ರೀ, ಸೋಮಶೇಖರಯ್ಯ, ಜಿ.ಎಸ್. ಅಮೂಲ್ಯ, ಜಿ.ವಿ. ಸಿಂಚನ ಇನ್ನಿತರರು ಇದ್ದರು.

**ಹೊಂಡದ ಸರ್ಕಲ್ ಗೆಳೆಯರ ಬಳಗ:** ಪಾಲಿಕೆ ಸದಸ್ಯ ವಿನಾಯಕ ನೇತೃತ್ವದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು. ಸೋಮಶೇಖರ್, ಶಿವಣ್ಣ, ಸಂಗಮೇಶಿ, ಮಲ್ಲೇಶ್, ಬಸವರಾಜ್ ಇನ್ನಿತರರು ಹಾಜರಿದ್ದರು.

**ಡಾ. ಬಿ.ಎಂ.ಟಿ. ಪದವಿ ಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗ:** ಆದಿ ಕರ್ನಾಟಕ ವಿದ್ಯಾಭಿವೃದ್ಧಿ ಸಂಸ್ಥೆ ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ಧ್ವಜಾರೋಹಣ ನೆರವೇರಿಸಿದರು. ಜಂಟಿ ಕಾರ್ಯದರ್ಶಿ ಡಿ. ಗಂಗಾಧರಪ್ಪ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಉಪಾಧ್ಯಕ್ಷ ಬಿ.ಎಂ. ಈಶ್ವರ್, ನಿರ್ದೇಶಕರುಗಳಾದ ಎ.ಕೆ. ನಾಗಪ್ಪ ಹಾಗೂ ಉಚ್ಚೆಂಗಪ್ಪನವರು ಭಾಗವಹಿಸಿದ್ದರು. ಪ್ರೌಢಶಾಲಾ ಮುಖ್ಯ ಶಿಕ್ಷಕ ಜಿ.ಬಿ. ಪರಮೇಶ್ವರಪ್ಪ ಸ್ವಾಗತಿಸಿದರು. ಹಿ.ಪ್ರಾ. ಶಾಲೆ ಸಹ ಶಿಕ್ಷಕ ಎನ್.ಎಸ್. ಆನಂದಯ್ಯ ವಂದಿಸಿದರು. ಪ್ರೌಢಶಾಲಾ ಚಿತ್ರಕಲಾ ಶಿಕ್ಷಕ ಎಂ.ಎಸ್. ಅಗಡಿ ನಿರೂಪಿಸಿದರು.

**ಪೊದಾರ್ ಇಂಟರ್‌ನ್ಯಾಷನಲ್ ಸ್ಕೂಲ್:** ಪೊದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಆವರಣದಲ್ಲಿ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲ ರಮೇಶ್ ಚಂದ್ರ ಪಾಂಡ ಅವರು ಧ್ವಜಾರೋಹಣ ನಡೆಸಿದರು. ಸ್ವಾತಂತ್ರ್ಯೋತ್ಸವ ಅಂಗವಾಗಿ ಮಕ್ಕಳಿಗೆ ವೇಷಭೂಷಣ ಹಾಗೂ ಭಾಷಣ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ಪ್ರಾಥಮಿಕ ವಿಭಾಗದ ಪ್ರಾಂಶುಪಾಲರಾದ ಮೊನಾಲಿಸಾ ಸಿಂಗ್ ದೇಶಭಕ್ತಿ ಗೀತೆ ಹಾಡಿದರು.

**ಶಿರಮಗೊಂಡನಹಳ್ಳಿ**

**ಅನ್‌ಮೋಲ್ ವಿದ್ಯಾಸಂಸ್ಥೆ:** ಅನ್‌ಮೋಲ್ ವಿಜ್ಞಾನ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಎಂ. ಉಮೇಶ್ ಧ್ವಜಾರೋಹಣ ನೆರವೇರಿಸಿದರು. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ತರಗತಿವಾರು ಸ್ವಾತಂತ್ರ್ಯ ದಿನ ಆಚರಿಸಿದ್ದು, ವಿಶೇಷವಾಗಿತ್ತು. ಅನ್‌ಮೋಲ್ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ಯು. ಕೊಟ್ರೇಶ್, ಆಡಳಿತಾಧಿಕಾರಿ ವಿಜಯ್, ಅಕೌಂಟೆಂಟ್ ದತ್ತಾತ್ರೇಯ, ದೈಹಿಕ ಶಿಕ್ಷಕ ಎಂ. ಸಂಗಪ್ಪ, ಕಂಪ್ಯೂಟರ್ ಕಿರಣ್ ಹಾಜರಿದ್ದರು.

**ಆವರಗೆರೆ**

**ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಸಂಸ್ಥೆ:** ಸಂಸ್ಥೆ ಗೌರವ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿ ಸ್ವಾಮಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಎಂತಹ ಪರಿಸ್ಥಿತಿಯಲ್ಲೂ ನಮ್ಮ ದೇಶದ ಘನತೆಯನ್ನು ಕಾಪಾಡೋಣ ಎಂದು ತಿಳಿಸಿದರು. ಸಂಸ್ಥೆ ನಿರ್ದೇಶಕಿ ಸುಗ್ಗಲಾದೇವಿ ಮತ್ತಿತರರು ಉಪಸ್ಥಿತರಿದ್ದರು.

## ಕುಂಬಳೂರಿನಲ್ಲಿ ವನಮಹೋತ್ಸವ



ಮಲೇಬೆನ್ನೂರು, ಆ.18- ಕುಂಬಳೂರು ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ವತಿಯಿಂದ ಹಮ್ಮಿಕೊಂಡಿದ್ದ ವನಮಹೋತ್ಸವ ಕಾರ್ಯಕ್ರಮದಲ್ಲಿ ತಾ.ಪಂ. ಸದಸ್ಯ ಆದಾಪುರ ವೀರಭದ್ರಪ್ಪ ಅವರು ಸಸಿ ನೆಡುವ ಮೂಲಕ ಚಾಲನೆ ನೀಡಿದರು. ಸಾಲಿ ಹನುಮಂತಪ್ಪ, ನಾಗೋಳ್ ಆಂಜನೇಯ, ಎಂ. ವಾಸುದೇವ ಮೂರ್ತಿ, ಗ್ರಾ.ಪಂ. ಕಾರ್ಯದರ್ಶಿ ಸೋಮಶೇಖರ್ ಉಪಸ್ಥಿತರಿದ್ದರು.

## ಪತ್ರಿಕೆ ಬದಲು : ತನಿಖೆಗೆ ಆದೇಶ

**(1ನೇ ಪುಟದಿಂದ)** ಬದಲಾವಣೆಗೆ ಸಂಬಂಧಿಸಿ ದಂತೆ ಪರಿಶೀಲನೆ ನಡೆಸಿ, ವರದಿ ನೀಡುವಂತೆ ಇಲಾಖೆಯ ಆಯುಕ್ತರಿಗೆ ಸೂಚಿಸಿದ್ದಾರೆ.

ಇದೊಂದು ಅತ್ಯಂತ ಗಂಭೀರ ವಿಷಯ. ಇದಕ್ಕೆ ಕಾರಣರಾದವರ ವಿರುದ್ಧ ತನಿಖೆ ಮಾಡಿ, ಕಾನೂನು ರೀತಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ತರಗತಿಯಲ್ಲಿ ಪ್ರತಿಭಾವಂತೆ ಎನಿಸಿಕೊಂಡಿದ್ದ ಈ ವಿದ್ಯಾರ್ಥಿನಿಗೆ ತೀರಾ ಕಡಿಮೆ ಅಂಕಗಳು ಬಂದಿದ್ದರಿಂದ ಅನುಮಾನಗೊಂಡು ಉತ್ತರ ಪತ್ರಿಕೆಗಳ ನಕಲು ಪ್ರತಿಗೆ ಅರ್ಜಿ ಹಾಕಿ, ತರಿಸಿ ನೋಡಿದಾಗ ಉತ್ತರ ಪತ್ರಿಕೆಯ ಬಹುತೇಕ ಹಾಳೆಗಳು ಬದಲಾಗಿರುವುದು ತಿಳಿದು ಬಂದಿತ್ತು.

ಕನ್ನಡ ಮತ್ತು ಸಮಾಜ ವಿಜ್ಞಾನ ವಿಷಯಗಳ ಉತ್ತರ ಪತ್ರಿಕೆಗಳ ಮೊದಲ ಪುಟ ಹೊರತುಪಡಿಸಿ ಉಳಿದ ಪುಟಗಳನ್ನು ಬದಲಿಸಲಾಗಿದೆ. ಹಿಂದಿ ಪತ್ರಿಕೆಯ ಕೆಲವು ಪುಟಗಳು ಬದಲಾಗಿವೆ. ಅಶ್ವಿನಿ ಅವರ ಉತ್ತರ ಪತ್ರಿಕೆಗಳ ಹಾಳೆಗಳನ್ನು ತೆಗೆದು ಬೇರೆಯವರ ಉತ್ತರ ಪತ್ರಿಕೆಯ ಹಾಳೆಗಳನ್ನು ಸೇರಿಸಲಾಗಿದೆ ಎಂದು ಮುಖ್ಯಶಿಕ್ಷಕ ನಂಜೇಗೌಡ ಆರೋಪಿಸಿದ್ದರು.

## 180 ಅಡಿ ತಲುಪಿದ ಭದ್ರಾ ಜಲಾಶಯ

**(1ನೇ ಪುಟದಿಂದ)** ಸಾವಿರ ಕ್ಯೂಸೆಕ್ಸ್ ಒಳ ಹರಿವು ಇದ್ದು, ಮಲೆನಾಡಿನಲ್ಲಿ ಮಳೆ ಪ್ರಮಾಣ ಕಡಿಮೆಯಾಗಿರುವುದರಿಂದ ಒಳ ಹರಿವು ಸಹ ಏರಿಳಿಕೆ ಕಂಡಿದೆ.

| ಭದ್ರಾ ಜಲಾಶಯ | |
|---|---|
| ಇಂದಿನ ಮಟ್ಟ | 179 ಅಡಿ 5 ಇಂಚು |
| ಒಳ ಹರಿವು | 15082 ಕ್ಯೂಸೆಕ್ಸ್ |
| ಹೊರ ಹರಿವು | 2593 ಕ್ಯೂಸೆಕ್ಸ್ |
| ಹಿಂದಿನ ವರ್ಷದ್ದು | 185.0 ಅಡಿ |

## 332 ಪಾಸಿಟಿವ್, 45 ಮಂದಿ ಗುಣಮುಖ

**(1ನೇ ಪುಟದಿಂದ)** ನಿಗದಿತ ಕೋವಿಡ್ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ 5,785 ಒಟ್ಟು ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 3787 ಮಂದಿ ಸಂಪೂರ್ಣ ಗುಣಮುಖರಾಗಿದ್ದಾರೆ, 130 ಸಾವು ಸಂಭವಿಸಿದ್ದು ಪ್ರಸ್ತುತ 1868 ಸಕ್ರಿಯ ಪ್ರಕರಣಗಳು ಇವೆ.

## ಆ್ಯಪ್‌ನಿಂದ ರೈತರಿಗೆ ಸ್ವಾತಂತ್ರ್ಯ

**(1ನೇ ಪುಟದಿಂದ)** ರೈತರು ತಾವು ಬೆಳೆದ ಬೆಳೆಯಲ್ಲಿ ಎಷ್ಟು ಇಳುವರಿ ಬಂದಿದೆ. ಯಾವ ಬೆಳೆ ಬೆಳೆದಿದ್ದಾರೆ ಎಂಬುದರ ನಿಖರ ಮಾಹಿತಿ ತಿಳಿಯಲು ಆ್ಯಪ್ ತುಂಬಾ ಸಹಕಾರಿ. ಈ ಹಿಂದಿನ ಬೆಳೆ ಸಮೀಕ್ಷೆಯಲ್ಲಿನ ನ್ಯೂನತೆಯನ್ನು ಬಗೆಹರಿ ಸಲು ರಾಜ್ಯವು ಮೊದಲ ಬಾರಿಗೆ ರೈತರ ಬೆಳೆ ಸಮೀಕ್ಷೆ ಮೊಬೈಲ್ ಆ್ಯಪ್ ಬಳಕೆ ಜಾರಿಗೆ ತಂದಿದ್ದು, ಇದರಿಂದ ಪಾರದರ್ಶಕತೆ ಕಾಪಾಡಿಕೊಳ್ಳಬಹುದು ಎಂದರು.

**ತಮಗೆ ತಾವೇ ಸರ್ಟಿಫಿಕೇಟ್ :** ನನ್ನ ಬೆಳೆ ನನ್ನ ಹಕ್ಕು, ನನ್ನ ಬೆಳೆ ನನ್ನ ಸ್ವಾತಂತ್ರ್ಯ, ನನ್ನ ಬೆಳೆ ನನ್ನ ಸಮೀಕ್ಷೆ ಎಂದು ರೈತರು ತಾವು ಬೆಳೆದ ಬೆಳೆಗಳ ಫೋಟೋವನ್ನು ಅವರೇ ನಮೂದಿಸಿ ತಮಗೆ ತಾವೇ ಸರ್ಟಿಫಿಕೇಟ್ ಕೊಟ್ಟುಕೊಳ್ಳಬಹುದು.

ತಮ್ಮ ಜಮೀನಿನಲ್ಲಿ ತಾವೇ ನಿಂತುಕೊಂಡು ಮೊಬೈಲ್‌ನಲ್ಲಿ ಆ್ಯಪ್ ಡೌನ್ಲೋಡ್ ಮಾಡಿಕೊಂಡು ಬೆಳೆ ಸಮೀಕ್ಷೆ ಫೋಟೋ ಅಪ್ ಲೋಡ್ ಮಾಡುವುದರಿಂದ ರಾಜ್ಯದಲ್ಲಿ ರಾಗಿ, ಜೋಳ, ಭತ್ತ ಸೇರಿದಂತೆ ಬೆಳೆಗಳು ಎಷ್ಟು ಬೆಳೆದಿದ್ದಾರೆ ಎಂದು ಮಾಹಿತಿ ಲಭಿಸುತ್ತದೆ. ಇದರಿಂದ ಬೆಳೆಗಳ ಬೇಡಿಕೆ ಎಷ್ಟಿದೆ ಎಂಬುದರ ಕುರಿತು ಸಂಪೂರ್ಣ ಮಾಹಿತಿ ಸಿಗುತ್ತದೆ ಎಂದು ತಿಳಿಸಿದರು.

ಸಿಎಂ ಯಡಿಯೂರಪ್ಪನವರು ಕೊರೊನಾ ಸಂಕಷ್ಟದ ಹಿನ್ನೆಲೆಯಲ್ಲಿ ಮೆಕ್ಕೆಜೋಳ ಬೆಳೆದ ಸುಮಾರು 10 ಲಕ್ಷ ರೈತರಿಗೆ ರೂ. 500 ಕೋಟಿ ಪರಿಹಾರ ಘೋಷಿಸಿದ್ದು ಕಳೆದ ವರ್ಷದ ಬೆಳೆ ಸಮೀಕ್ಷೆ ಆಧಾರದ ಮೇಲೆಯೇ. ಈಗಾಗಲೇ 8 ಲಕ್ಷ ರೈತರಿಗೆ ಹಣವನ್ನು ಅವರ ಖಾತೆಗೆ ಜಮೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

**ಯೂರಿಯ ಬಳಕೆ ಕಡಿಮೆ ಮಾಡಿ:** ಯೂರಿಯ ಗೊಬ್ಬರ ಕೊರತೆ ಕಂಡುಬಂದಿದೆ ಎಂದು ಹೇಳಲಾಗುತ್ತಿದೆ. ಬೇಡಿಕೆಗನುಗುಣವಾಗಿ ಯೂರಿಯಾ ಸರಬರಾಜಾಗುತ್ತಿದ್ದು ಸದ್ಯ ರಾಜ್ಯಕ್ಕೆ 27 ಸಾವಿರ ಟನ್ ಬಂದಿದೆ. ಬೇಡಿಕೆಯ ಗೊಬ್ಬರವನ್ನು ಮಲೆನಾಡು ಪ್ರದೇಶಗಳಲ್ಲಿ ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಲಾಗುವುದು. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಲ್ಲಿ ಈಗಾಗಲೇ ನಾವು 67 ಸಾವಿರ ಮೆಟ್ರಿಕ್ ಟನ್ ಹೆಚ್ಚು ಗೊಬ್ಬರ ನೀಡಿದ್ದೇವೆ. ರೈತರು ಎಷ್ಟು ಗೊಬ್ಬರ ಬೇಕೋ ಅಷ್ಟೇ ಬಳಕೆ ಮಾಡಬೇಕು. ಬೆಳೆಗಾಗಿ ಹೆಚ್ಚು ಗೊಬ್ಬರ ಬಳಕೆ ಮಾಡುವುದುನ್ನು ನಿಲ್ಲಿಸಬೇಕು. ಹೆಚ್ಚು ಬಳಕೆ ಮಾಡಿದಷ್ಟು ಭೂ ತಾಯಿಗೆ ವಿಷ ಉಣಿಸಿದಂತಾಗುತ್ತದೆ ಎಂದರು.

ಮಾಯಕೊಂಡ ಶಾಸಕ ಪ್ರೊ.ಲಿಂಗಣ್ಣ ಮಾತನಾಡಿ, ರೈತರಿಗೆ ಸಾಕಷ್ಟು ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಅನೇಕ ಯೋಜನೆಗಳನ್ನು ಜಾರಿ ತರುತ್ತಿದೆ. ಇದರ ಸದುಪಯೋಗವನ್ನು ಪ್ರತಿಯೊಬ್ಬ ರೈತರು ಪಡೆದುಕೊಳ್ಳುವುದರ ಜೊತೆಗೆ ಕೃಷಿ ಪದ್ಧತಿಯಲ್ಲಿ ವೈಜ್ಞಾನಿಕತೆಯನ್ನು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಬೆಳೆ ಸಮೀಕ್ಷೆಯ ಪ್ರಕಟಣಾ ಪತ್ರವನ್ನು ಸಚಿವರು ಬಿಡುಗಡೆಗೊಳಿಸಿದರು. ಈ ವೇಳೆ ಶಾಸಕ ಪ್ರೊ.ಲಿಂಗಣ್ಣ ನೇತೃತ್ವದಲ್ಲಿ ಈ ಭಾಗದಲ್ಲಿ ಕೃಷಿ ಕಾಲೇಜು ನಿರ್ಮಿಸಬೇಕೆಂದು ಒತ್ತಾಯಿಸಿ ಸಚಿವರಿಗೆ ಮನವಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷೆ ದೀಪಾ ಜಗದೀಶ್, ಉಪಾಧ್ಯಕ್ಷೆ ಸಾಕಮ್ಮ, ಜಿಲ್ಲಾ ಪಂಚಾಯತ್ ಸದಸ್ಯರಾದ ತೇಜಸ್ವಿ ಪಟೇಲ್ ಸೇರಿದಂತೆ ಕೃಷಿ ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಮಾಜ ದ್ರೋಹಿ ಸಂಘಟನೆಗಳನ್ನು ನಿಷೇಧಿಸಲಿ : ಸಚಿವ ಬಿ.ಸಿ. ಪಾಟೀಲ್

**(1ನೇ ಪುಟದಿಂದ)** ಮನೆ ಮೇಲೆ ದಾಳಿ ಮಾಡಿದವರನ್ನು ಅಮಾಯಕರು, ಪೊಲೀಸ್ ಠಾಣೆಗೆ ಬೆಂಕಿ ಹಚ್ಚಿ, ಸಾರ್ವಜನಿಕ ಆಸ್ತಿಗೆ ನಷ್ಟವನ್ನುಂಟು ಮಾಡಿದ ರವನ್ನು ಅಮಾಯಕರು ಎಂದು ಹೇಳುತ್ತಿದ್ದಾರೆ.

ಮುಂದಿನ ಓಟ್ ಬ್ಯಾಂಕ್‌ಗಾಗಿ ತಮ್ಮದೇ ಶಾಸಕರನ್ನು ರಕ್ಷಿಸಿಕೊಳ್ಳಲು ಕಾಂಗ್ರೆಸ್ ನಾಯಕರಿಗೆ ಸಾಧ್ಯವಾಗಿಲ್ಲ. ಗಲಭೆಯ ಆರೋಪಿಗಳನ್ನು ಬಂಧಿಸಿ ಎಂದು ಹೇಳಬಹುದಾಗಿತ್ತು. ಆದರೆ ಇಲ್ಲಿವರೆಗೆ ಒಬ್ಬರೂ ಈ ಬಗ್ಗೆ ಮಾತನಾಡಿಲ್ಲವೆಂದರೆ ಇದು ರಾಜಕೀಯ ಪಿತೂರಿ ಎಂಬುದು ಸ್ಪಷ್ಟ ಎಂದು ಹೇಳಿದರು. ಪ್ರಸ್ತುತ ಬಿಜೆಪಿ ಸರ್ಕಾರ ಸುಭದ್ರವಾಗಿದೆ. ಉತ್ತಮ ಆಡಳಿತ ನಡೆಸುವ ಶಕ್ತಿ ಮುಖ್ಯಮಂತ್ರಿಗಿದೆ. ಕೊರೊನಾ, ಅತಿವೃಷ್ಠಿ, ಅನಾವೃಷ್ಠಿ ಎದುರಿಸಿ ಸಮರ್ಥ ಆಡಳಿತ ನಡೆಸುತ್ತಿದ್ದಾರೆ ಎಂದು ಪಾಟೀಲ್ ಸಮರ್ಥಿಸಿಕೊಂಡರು.


**ಸೈಟುಗಳು ಮಾರಾಟಕ್ಕಿವೆ**
ಜಿಎಂಐಟಿ ಕಾಲೇಜು ಹತ್ತಿರ, ರಶ್ಮಿ ಸ್ಕೂಲ್ ಎದುರಿಗೆ 29x47 East & West, 30x50 East & West, 34x60 East, 30x60 West, 41x54 NE Corner, 30x41 North. 40 ಅಡಿ ರಸ್ತೆ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
ಮೊ. 91135-66879

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ನಿವೇಶನ ಮಾರಾಟಕ್ಕಿದೆ**
ಪಿ.ಬಿ. ರಸ್ತೆ ಹತ್ತಿರ ಉತ್ತಮ್ ಬಡಾವಣೆಯಲ್ಲಿ 30X55 ಅಡಿ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಕಾರ್ನರ್ ನಿವೇಶನ. Good location & Ready for construction
ಸಂಪರ್ಕಿಸಿ: ಜಗದೀಶ್
93439 70512

**ಮನೆ ಲೀಸ್‌ಗೆ ಇದೆ**
ನಗರದ ಕುಂದುವಾಡ ರೋಡ್ ಜೈನ್ ಲೇಔಟ್‌ನಲ್ಲಿ ಸುಸಜ್ಜಿತವಾದ ವಾಸ್ತುವುಳ್ಳ ಡಬ್ಬಲ್ ಬೆಡ್ ರೂಂ, ಮುನಿಸಿಪಲ್, ಬೋರ್‌ವೆಲ್ ನೀರಿನ ಸೌಕರ್ಯವಿರುವ ಮನೆ Ist floor ನಲ್ಲಿ ಲೀಸ್‌ಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
86602-01465, 89042-88094

**WANTED / ಬೇಕಾಗಿದ್ದಾರೆ**
ಮನೆಯ ಹೊರಗಿನ ಕೆಲಸಕ್ಕೆ 18 ರಿಂದ 35 ವರ್ಷದ ಹುಡುಗರು/ ಗಂಡಸರು ಬೇಕಾಗಿದ್ದಾರೆ. ಮಧ್ಯಾಹ್ನ 12 ಗಂಟೆಯ ನಂತರ ಸಂಪರ್ಕಿಸಿ :
ಮೊ. 88678 70617

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ನುರಿತ ಕೆಲಸಗಾರರು ಬೇಕಾಗಿದ್ದಾರೆ. ಸಂಬಳ: ರೂ.8000 ದಿಂದ 10,000 ರೂವರೆಗೆ, ಊಟ + ವಸತಿ ಉಚಿತ.
ಸಂಪರ್ಕಿಸಿ: 99163 53339, 80739 86139

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಶರ್ಮಾ:
74112 50447

**ಖಾಲಿ ಸೈಟ್ ಮಾರಾಟಕ್ಕಿದೆ**
ಹರಿಹರ ನಗರದ ಹರಪನಹಳ್ಳಿ, ರಸ್ತೆಯ ಇಂಡಸ್ಟ್ರಿಯಲ್ ಎಸ್ಟೇಟ್‌ನ ಎನ್.ಟಿ.ಭೂತೆ ಲೇಔಟ್ ನಲ್ಲಿರುವ ಉತ್ತರ ಮುಖವಾಗಿರುವ 40x75 ಅಳತೆವುಳ್ಳ ಸೈಟ್ ನಂಬರ್ 27 ಇರುವ ಖಾಲಿ ನಿವೇಶನ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿರಿ : 99868 82386, 99019 92315

**ಶ್ರೀ ಅಂಜನಿಪುತ್ರ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳಿಸುತ್ತೇವೆ. ಬಾಣಂತಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಕಳುಹಿಸುತ್ತೇವೆ. ಸೆಕ್ಯೂರಿಟಿ ಸರ್ವೀಸ್. ಈ ಎಲ್ಲಾ ಸೇವೆಗಳು ಬೇಕಾಗಿದ್ದಲ್ಲಿ ಸಂಪರ್ಕಿಸಿ.
9902464522, 9686455820
ಯುವಕ-ಯುವತಿಯರು ಬೇಕಾಗಿದ್ದಾರೆ.

**ಅಭಿಷೇಕ್ ಟಿಂಬರ್ ಅಂಡ್ ಸಾಮಿಲ್**
ಬಂಬೂಬಜಾರ್, ವಿನಾಯಕ ಟಾಕೀಸ್ ರಸ್ತೆ, ದಾವಣಗೆರೆ-577001. ನಮಗೆ ಡಿಗ್ರಿ ಮುಗಿಸಿರುವ, ಕಂಪ್ಯೂಟರ್ ಟ್ಯಾಲಿ ಆಗಿರುವ, ಅಕೌಂಟ್ಸ್ ಬಗ್ಗೆ ಸಂಪೂರ್ಣ ಮಾಹಿತಿ ಇರುವ 23 ರಿಂದ 30 ವರ್ಷ ವಯಸ್ಸಿನ ಹುಡುಗರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ
6364446777, 9972974818

**ಮನೆ ಬಾಡಿಗೆಗೆ/ಲೀಜ್‌ಗೆ**
1 BHK, 2 BHK, 3 BHK
ರುದ್ರೇಶ್, ಏಜೆಂಟರು
87226 08529

**ಹೊಸ ಮನೆ ಮಾರಾಟಕ್ಕಿದೆ**
30x 35, ದಕ್ಷಿಣ ದಿಕ್ಕು ಎಸ್.ಎಸ್. ಆಸ್ಪತ್ರೆ ಹಿಂಭಾಗ, ಗಣಪತಿ ನಗರ. ಸಂಪರ್ಕಿಸಿರಿ:
ಜಿ. ಭಾಸ್ಕರ್ ರೆಡ್ಡಿ
94489 23785, 95359 67499

**2BHK ಮನೆ ಬಾಡಿಗೆಗೆ ಇದೆ**
ಎಸ್.ಎಸ್ ಲೇಔಟ್ 'ಬಿ' ಬ್ಲಾಕ್, 4ನೇ ಮೇನ್, 12ನೇ ಕ್ರಾಸ್‌ನಲ್ಲಿ ನಂ 3425/4 "ಪ್ರಭಾ ವೆಂಕಟೇಶ್ ಮ್ಯಾನ್ಷನ್" ಮೊದಲನೇ ಅಂತಸ್ತಿನಲ್ಲಿ ಉತ್ತರ ದಿಕ್ಕಿನ, ಕಾರ್ಪೊರೇಷನ್/ ಬೋರ್ ನೀರಿನ ಸೌಕರ್ಯ, ಪಾರ್ಕಿಂಗ್ ಸೌಲಭ್ಯವಿದೆ.
90363 51267

**ಜಾಗ ಮಾರಾಟಕ್ಕಿದೆ**
ದಾವಣಗೆರೆ ಮುದ್ದಳ್ಳಿ ತೋಟ, ಪೊಲೀಸ್ ಪೆರೇಡ್ ಗ್ರೌಂಡ್ ಎದುರು 6.4 ಗುಂಟೆ ಜಾಗ ಮಾರಾಟಕ್ಕಿದೆ. ಸಂಪರ್ಕಿಸಿ:
87109 64433

**ಸೈಟಿನ ದಾಖಲಾತಿಗಳು ಕಳೆದಿರುತ್ತವೆ**
ಜಗಳೂರು ಪಟ್ಟಣದ 30x40 ಸೈಟಿನ DOC No.485/89-90 27.11.1989 DOC No.1354/14-15 13.10.2014 ಈ ಎರಡು ದಾಖಲಾತಿಗಳು ಕಳೆದಿರುತ್ತವೆ. ಸಿಕ್ಕವರು ಈ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.
ಪೊಲೀಸ್ ಸ್ಟೇಷನ್ ನಂ. 08156 256270
ದಿನೇಶ್ : 99029 73538, ಅಜ್ಜಯ್ಯ :95352 22103

**KHB ಹರಿಹರ ಸೈಟು ಮಾರಾಟಕ್ಕಿದೆ**
30/50, ಪೂರ್ವ
@ Rs 1700/Sqft
74112 50447

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೊಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ಜಮೀನು ಮಾರಾಟಕ್ಕಿದೆ**
ಅಣಬೇರು ಗ್ರಾಮದ ಹೈಸ್ಕೂಲ್ ಕಾಂಪೌಂಡ್ ಪಕ್ಕ, ಬಾಡಾ ರಸ್ತೆಯಲ್ಲಿ ಸೈಟ್‌ಗಳನ್ನು ಮಾಡಲು ಯೋಗ್ಯವಾದ 11 ಗುಂಟೆ (ಸರ್ವೆ ನಂ 79/2) ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ:
97405 74676, 87620 02225

**ಜಾಗ ಬೇಕಾಗಿದೆ**
ವಾಟರ್ ಸರ್ವಿಸ್ ಸ್ಟೇಷನ್ ಮಾಡುವುದಕ್ಕೆ ಯಾವುದಾದರೂ ಜಾಗ ಇದ್ದರೆ ನಮಗೆ ತಿಳಿಸಿ.
ಮೊ.98446 00866

**ಬೇಕಾಗಿದ್ದಾರೆ**
ದಾವಣಗೆರೆ ಹದಡಿ ರಸ್ತೆಯಲ್ಲಿನ ಸೂಪರ್ ಬಜಾರ್‌ನಲ್ಲಿ ಕ್ಯಾಶ್ ಕೌಂಟರ್‌ನಲ್ಲಿ ಬಿಲ್ಲಿಂಗ್ ಮಾಡುವವರು ಬೇಕಾಗಿದ್ದಾರೆ.
ಸಂಪರ್ಕಿಸಿ : 91082 03467

**ಬೇಕಾಗಿದ್ದಾರೆ**
ದಾವಣಗೆರೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠಧಾಮಕ್ಕೆ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ. ಮತ್ತು ಶವಗಳನ್ನು ದಹನ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 98440 63507

**WANTED NETWORKERS**
Highly result oriented health product formulated by allopathy Doctor with highest payout plan. Company approved by Ministry of Consumer Affairs (MCA).
Call :- 93414 24456
Time :- 10AM - 7PM

**ಅರ್ಚಕರು ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಅರ್ಚಕರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ
ಮೊ. 98863 20025

**WANTED**
ಕೆಲಸಗಾರರು ಬೇಕಾಗಿದ್ದಾರೆ
ವಾಟರ್ ಸರ್ವಿಸ್ ಸ್ಟೇಷನ್
ಫೋ. : 98868 44501

**FOR RENT**
Commercial 2000 Sqft building for Rent Near court circle 24x7 water, Toilet, Parking with all Amenities.
87468 12999, 87468 13999

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಬೇಕಾಗಿದ್ದಾರೆ**
ಬೇಕರಿ ಕೌಂಟರ್‌ನಲ್ಲಿ ಕೆಲಸ ಮಾಡಲು ಮೂವರು ಯುವಕರು ಹಾಗೂ ಇಬ್ಬರು ಸಹಾಯಕರ ಕೆಲಸಕ್ಕಾಗಿ ಬೇಕಾಗಿದ್ದಾರೆ.
96323 40021, 80883 45070

**3BHK ಮನೆ ಬಾಡಿಗೆಗೆ ಇದೆ**
ತುಳಸಿ ಆಯುರ್ವೇದಿಕ ಆಸ್ಪತ್ರೆ ಹತ್ತಿರ # 1691/53 'ಸೈನಿಕ ಸದನ' ಗ್ರೌಂಡ್ ಫ್ಲೋರ್‌ನಲ್ಲಿ 3 ಬೆಡ್‌ರೂಂ ಮನೆ, ಬೋರ್/ಮುನ್ಸಿಪಲ್ ಹಾಗೂ ಸೋಲಾರ್ ವಾಟರ್ + ಯು.ಪಿ.ಎಸ್. ಎಲ್ಲಾ ಅನುಕೂಲವಿರುವ ಮನೆ ಬಾಡಿಗೆಗೆ ಇದೆ.
94483 39238, 72590 25983

**ಸಸಿಗಳು ದೊರೆಯತ್ತವೆ**
ನಮ್ಮಲ್ಲಿ ಉತ್ತಮ ತಳಿಯ ತೆಂಗು, ಅಡಿಕೆ, ಮಾವು, ಸಪೋಟ, ಪಪ್ಪಾಯಿ, ಬೆಟ್ಟದ ನೆಲ್ಲಿ, ತೇಗ, ಸಿಲ್ವರ್, ಹೆಬ್ಬೇವು, ಶ್ರೀಗಂಧ, ರಕ್ತಚಂದನ, ಗುಲಾಬಿ ಹಾಗೂ ಇತರೆ ಸಸಿಗಳು ದೊರೆಯುತ್ತವೆ ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ.
ವಿಳಾಸ: ಸುಬ್ರಮಣ್ಯ ಅಗ್ರೋ ಟೆಕ್ ಶಕ್ತಿನಗರ, ನಿಟುವಳ್ಳಿ, ದಾವಣಗೆರೆ.
ಮೊ. 94484 39639, 63665 96479

**ಸಾಯಿ ತುಳಜಾಭವನಿ ಜ್ಯೋತಿಷ್ಯಾಲಯ**
ಪಂಡಿತ್: ಗುರುಪ್ರಸಾದ್
Mob: 96631-99107
ಸಮಸ್ಯೆ : ವಿದ್ಯೆ-ಉದ್ಯೋಗ ಮನಶ್ಯಾಂತಿ ಸಾಲದ ಬಾಧೆ, ಸ್ತ್ರೀ ಪುರುಷ ವಶೀಕರಣ, ದಾಂಪತ್ಯ ಸಮಸ್ಯೆ ಕೇವಲ 3 ದಿನಗಳಲ್ಲಿ 100ಕ್ಕೆ 100% ಪರಿಹಾರ ಶತಸಿದ್ಧ. ದೂರವಾಣಿ ಮೂಲಕ ನಿಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಿ.

**WORK FROM HOME**
ಆಸಕ್ತಿಯುಳ್ಳವರಿಗೆ ಸದಾವಕಾಶ
74118 89988

**WANTED**
PUC, Any Degree with Basic computer Knowledge is Must and Tele caller, For Male & Female, Service Engineers - 4
SAMSUNG SERVICE CENTER
# 2137/1, 4th Main, 3rd cross MCC 'A' Block, Davanagere.
98865 15100

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು ದಿ. 19-08-2020ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಬೇಕಾಗಿದ್ದಾರೆ**
ಬೆಂಗಳೂರಿನ ಪ್ರತಿಷ್ಠಿತ ಕಂಪನಿಗೆ ದಾವಣಗೆರೆ ಜಿಲ್ಲೆಯಾದ್ಯಂತ ಮಹಿಳೆಯರು ಬೇಕಾಗಿದ್ದಾರೆ, ಬಂಡವಾಳವಿಲ್ಲದೆ ತಿಂಗಳಿಗೆ 10 ರಿಂದ 30 ಸಾವಿರದವರೆಗೆ ದುಡಿಯುವ ಅವಕಾಶ.
99867 53343

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ಪ್ರಜಾಪ್ರಭುತ್ವದ ಕಟಕಟೆಯಲ್ಲಿ ದೈತ್ಯ ಜಾಲತಾಣ

## ಸಾಮಾಜಿಕ ಜಾಲತಾಣಗಳು ಪಕ್ಷಪಾತಿಯಾದರೆ ಅಪಾಯ ತಪ್ಪಿದ್ದಲ್ಲ

**ಎಸ್.ಎ. ಶ್ರೀನಿವಾಸ್**

ಆನ್‌ಲೈನ್ ದೈತ್ಯ ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್ ಇನ್ನೊಮ್ಮೆ ಪ್ರಜಾಪ್ರಭುತ್ವದ ಕಟಕಟೆಯ ಎದುರು ಆರೋಪಿಯಾಗಿ ನಿಂತಿದೆ. ಆಡಳಿತಾರೂಢ ಬಿಜೆಪಿ ಪರ ನಾಯಕರು ಪ್ರಚೋದನಕಾರಿ ಹೇಳಿಕೆಗಳನ್ನು ದಾಖಲಿಸಿದರೂ ಸಹ, ಆಡಳಿತಾರೂಢರ ಅವಕೃಪೆಗೆ ಪಾತ್ರವಾಗಬಾರದು ಎಂಬ ಕಾರಣಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂಬ ಆರೋಪಗಳು ಈಗ ರಾಜಕೀಯ ವಲಯದಲ್ಲಿ ಬಿಸಿಯೇರಲು ಕಾರಣವಾಗಿದೆ.

ದಶಕಗಳ ಹಿಂದೆ ಅಂಬೆಗಾಲಿಡುತ್ತಿದ್ದ ಸಾಮಾಜಿಕ ಜಾಲತಾಣಗಳು ಈಗ ಪ್ರಪಂಚದ ಪ್ರಜಾಪ್ರಭುತ್ವದ ಅಡಿಪಾಯದ ಬೇರಿಗೇ ಕೈ ಹಾಕುವ ಅಪಾಯ ಎದುರಾಗುತ್ತಿದೆ. ಕೇವಲ ಭಾರತವಷ್ಟೇ ಅಲ್ಲ, ಚೀನಾದಿಂದ ಹಿಡಿದು ಅಮೆರಿಕದವರೆಗೆ ಹಲವಾರು ದೇಶಗಳು ಫೇಸ್‌ಬುಕ್ ವಿಷಯದಲ್ಲಿ ಸಮಸ್ಯೆಗಳನ್ನು ಎದುರಿಸಿವೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗೆಲುವಿನ ಹಿಂದೆ ಫೇಸ್‌ಬುಕ್ ಹಾಗೂ ಕೇಂಬ್ರಿಡ್ಜ್ ಅನಲಿಟಿಕಾ ಡಾಟಾ ಬಳಸಿಕೊಂಡ ವಿಷಯ 2018ರಿಂದಲೂ ಚರ್ಚೆಯಲ್ಲಿದೆ.

ಭಾರತದಲ್ಲೂ ಸಹ ಕೇಂಬ್ರಿಡ್ಜ್ ಅನಲಿಟಿಕಾ ಡಾಟಾ ಅನ್ನು ರಾಜಕೀಯ ಪಕ್ಷಗಳು ಬಳಸಿಕೊಂಡ ವಿಷಯ ಚರ್ಚೆಗೆ ಬಂದಿತ್ತು. ಆದರೆ, ಆನಂತರದಲ್ಲಿ ಆ ವಿಷಯ ಹೆಚ್ಚೇನೂ ಪ್ರಗತಿ ಕಾಣಲಿಲ್ಲ.

ಮ್ಯಾನ್ಮಾರ್‌ನಲ್ಲಿ ರೋಹಿಂಗ್ಯಾ ಮುಸ್ಲಿಮರ ಹತ್ಯಾಕಾಂಡಕ್ಕೆ ಫೇಸ್‌ಬುಕ್ ಬಳಕೆ ವ್ಯಾಪಕವಾಗಿತ್ತು. ಇದನ್ನು ತಡೆಯಲು ಫೇಸ್‌ಬುಕ್ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಇಷ್ಟು ಸಾಲದು ಎಂಬಂತೆ ರೋಹಿಂಗ್ಯಾ ಹತ್ಯಾಕಾಂಡದ ತನಿಖೆಗೆ ಫೇಸ್‌ಬುಕ್ ಅಡ್ಡಿಪಡಿಸುತ್ತಿದೆ ಎಂಬ ಆರೋಪಗಳೂ ಕೇಳಿ ಬರುತ್ತಿವೆ.

ಫೇಸ್‌ಬುಕ್ ಸೇರಿದಂತೆ ಹಲವು ಸಾಮಾಜಿಕ ಜಾಲತಾಣಗಳು ಮಾಹಿತಿ ಹಂಚಿಕೊಳ್ಳುವ ವೇದಿಕೆಗಳಾಗಿವೆ. ಇಲ್ಲಿ ಮುಕ್ತವಾಗಿ ಮಾಹಿತಿ ಹಂಚಿಕೊಳ್ಳಬಹುದು. ಈ ರೀತಿಯ ಮುಕ್ತತೆ ಹಿಂದೆಂದೂ ಇರಲಿಲ್ಲ. ಅದರಲ್ಲೂ ಸ್ಮಾರ್ಟ್‌ಫೋನ್ ಹಾಗೂ ಇಂಟರ್ನೆಟ್ ಬಳಕೆ ವ್ಯಾಪಕವಾದಂತೆ ಪ್ರತಿಯೊಬ್ಬರೂ ಮಾಹಿತಿಯ ಕಣಜವಾಗಿದ್ದಾರೆ. ಇದೇ ವೇಳೆ, ತಪ್ಪು ದಾರಿಗೆಳೆಯುವ ಮಾಹಿತಿ, ಹಿಂಸೆಗೆ ಪ್ರಚೋದಿಸುವ, ವೈಯಕ್ತಿಕವಾಗಿ ನಿಂದಿಸುವ ಪ್ರಕರಣಗಳೂ ವಿಪರೀತವಾಗುತ್ತಿವೆ.

ಇದನ್ನು ನಿಯಂತ್ರಿಸುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರ ಅಷ್ಟು ಸುಲಭವಿಲ್ಲ. ಚೀನಾದಂತಹ ಕೆಲ ಸರ್ವಾಧಿಕಾರಿ ದೇಶಗಳು ಅಂತರ್ಜಾಲವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿಟ್ಟುಕೊಂಡಿವೆ. ಇಲ್ಲಿ ಜಾಲತಾಣಗಳಿಂದ ಸರ್ಕಾರಗಳೇ ತಮ್ಮ ತುತ್ತೂರಿಯನ್ನು ಬಾರಿಸಿಕೊಳ್ಳುತ್ತವೆ. ವಿರೋಧಕ್ಕೆ ಎಳ್ಳಷ್ಟೂ ಅವಕಾಶವಿಲ್ಲ.

ಇನ್ನೊಂದೆಡೆ ಭಾರತದಂತಹ ಹೆಚ್ಚು ಮುಕ್ತವಾಗಿರುವ ದೇಶದಲ್ಲಿ ಜಾಲ ತಾಣಗಳ ದುರ್ಬಳಕೆ ಮಾಡಿಕೊಂಡು ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಂತಹ ಹಿಂಸಾಚಾರದ ಘಟನೆಗಳಿಗೆ ಕುಮ್ಮಕ್ಕು ನೀಡಲಾಗುತ್ತಿದೆ. ಮಕ್ಕಳ ಕಳ್ಳರಿದ್ದಾರೆ ಎಂಬ ಗಾಳಿ ಸುದ್ದಿ ಹರಡಿ ಗುಂಪು ಹತ್ಯೆಗೆ ಪ್ರಚೋದನೆ ನೀಡಲು ವಾಟ್ಸ್‌ಆಪ್ ಅನ್ನು ಬಳಸಿಕೊಂಡ ಹಲವಾರು ಘಟನೆಗಳು 2018ರಲ್ಲಿ ಹಲವು ಬಾರಿ ನಡೆದಿದ್ದವು.

ಸರ್ಕಾರಗಳೂ ಸಹ ಸಂಘಟಿತ ರೀತಿಯಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ಜನರನ್ನು ಬೆದರಿಸುವ ಹಾಗೂ ದಿಕ್ಕು ತಪ್ಪಿಸುವುದು ವಿಶ್ವದಾದ್ಯಂತ ವ್ಯಾಪಕವಾಗಿದೆ. ಹಾಂಕಾಂಗ್ ಪ್ರತಿಭಟನೆಗಳು ನಡೆಯುವಾಗ ಚೀನಾ ಟ್ವಿಟ್ಟರ್ ಮೂಲಕ ವ್ಯಾಪಕ ಅಪಪ್ರಚಾರ ನಡೆಸಿತ್ತು. ನಂತರ ಟ್ವಿಟ್ಟರ್ ಚೀನಾ ಸರ್ಕಾರದ ಪರ ಅಪ ಪ್ರಚಾರ ನಡೆಸುತ್ತಿದ್ದ 1.70 ಲಕ್ಷದಷ್ಟು ಖಾತೆಗಳನ್ನು ಕಿತ್ತು ಹಾಕಿರುವುದಾಗಿ ತಿಳಿಸಿತ್ತು. ಇರಾನ್, ಇಂಡೋನೇಷಿಯಾ, ಇರಾಕ್, ಮ್ಯಾನ್ಮಾರ್, ಉತ್ತರ ಕೊರಿಯಾ, ಪಾಕಿಸ್ತಾನ, ವಿಯಟ್ನಾಂ ಸೇರಿದಂತೆ ಹಲವು ದೇಶಗಳು ಸಾಮಾಜಿಕ ಜಾಲತಾಣಗಳಲ್ಲಿ ಟ್ರೋಲ್ ಸೈನ್ಯ ಹೊಂದಿವೆ.

ಸರ್ಕಾರಗಳ ಈ ರೀತಿಯ ದಮನಕಾರಿ ಚಟುವಟಿಕೆಗಳಿಗೆ ನೆರವಾಗದೇ ಇದ್ದಾಗ, ಸರ್ವಾಧಿಕಾರಿ ದೇಶಗಳು ಅವುಗಳ ಮೇಲೆ ನಿಷೇಧ ಹೇರುವುದೂ ನಡೆದಿದೆ. ಚೀನಾದಲ್ಲಿ ಗೂಗಲ್, ಯೂಟ್ಯೂಬ್, ಫೇಸ್‌ಬುಕ್, ವಿಕಿಪೀಡಿಯಾ ಸೇರಿದಂತೆ ಹಲವಾರು ಜನಪ್ರಿಯ ವೆಬ್ ತಾಣಗಳು ನಿಷೇಧಿಸಲ್ಪಟ್ಟಿವೆ.

ಹೀಗಾಗಿ ಸರ್ಕಾರಗಳನ್ನು ಎದುರು ಹಾಕಿಕೊಳ್ಳುವ ಜಾಲತಾಣಗಳು ನಾನಾ ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಫೇಸ್‌ಬುಕ್ ಆಡಳಿತಾರೂಢರನ್ನು ಎದುರು ಹಾಕಿಕೊಳ್ಳಲು ಹಿಂಜರಿಯುವ ಮೂಲಕ ತನ್ನ ವೇದಿಕೆಯನ್ನು ಪಕ್ಷಪಾತಿ ಮಾಡಿದೆ ಎಂದು ಈಗ ಆರೋಪಿಸಲಾಗುತ್ತಿದೆ. ಅಮೆರಿಕದ ವಾಲ್‌ಸ್ಟ್ರೀಟ್ ಜರ್ನಲ್ ಪ್ರಕಟಿಸಿರುವ ವರದಿ ಫೇಸ್‌ಬುಕ್ ಕಾರ್ಯ ನಿರ್ವಹಣೆಯ ಕುರಿತು ಹಲವಾರು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ಸಾಮಾಜಿಕ ಜಾಲತಾಣಗಳು ಈಗ ಸಮಾಜದ ಅನಿವಾರ್ಯ ಭಾಗದಂತಾಗಿವೆ. ಇವುಗಳಲ್ಲಿನ ಮಾಹಿತಿಗಳು ಜನರ ನಿರ್ಧಾರಗಳ ಮೇಲೆ ಅಪಾರ ಪರಿಣಾಮ ಬೀರುತ್ತವೆ ಎಂಬುದು ಇತ್ತೀಚಿನ ದಶಕದಲ್ಲಿ ಹತ್ತು ಹಲವು ಬಾರಿ ಸಾಬೀತಾಗಿದೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳ ನಿಷ್ಪಕ್ಷಪಾತ ವರ್ತನೆ ಪ್ರಜಾಪ್ರಭುತ್ವಕ್ಕೆ ಅಗತ್ಯವಷ್ಟೇ ಅಲ್ಲದೇ ಅನಿವಾರ್ಯ ಸಹ ಆಗಿದೆ.

# ಸಹಕಾರ ಸಂಘಗಳ ಅಭಿವೃದ್ಧಿಗೆ ಪ್ರಯತ್ನ



## ಜಗಳೂರು ಶಾಸಕ ಎಸ್. ವಿ.ರಾಮಚಂದ್ರ ಭರವಸೆ

ಜಗಳೂರು, ಆ.18- ಸಹಕಾರ ಬ್ಯಾಂಕ್‌ಗಳ ಸರ್ವತೋಮುಖ ಅಭಿವೃದ್ಧಿಗೆ ಸದಾ ಪ್ರಯತ್ನಿಸುತ್ತೇನೆ ಎಂದು ಶಾಸಕ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರೂ ಆದ ಎಸ್.ವಿ. ರಾಮಚಂದ್ರ ಭರವಸೆ ನೀಡಿದರು.

ಪಟ್ಟಣದ ಪಿಎಲ್ ಡಿ ಬ್ಯಾಂಕ್‌ನಲ್ಲಿ ನಿರ್ದೇಶಕರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಕೊರೊನ ಸಂಕಷ್ಟಕ್ಕೆ ಸಿಲುಕಿ ರಾಜ್ಯ ಸರ್ಕಾರಕ್ಕೆ ಆರ್ಥಿಕ ಬಿಕ್ಕಟ್ಟು ಎದುರಾಗಿದೆ. ತಾವು ಬೇಡಿಕೆ ಇಟ್ಟಿರುವ 40 ಲಕ್ಷ ರೂಪಾಯಿ ಸಾಲ ಮನ್ನಾ ಅಸಾಧ್ಯವಾಗಿದ್ದು, ಅಲ್ಪ ಮಟ್ಟಿಗೆ ಮನ್ನಾ ಮಾಡಲು ಚರ್ಚಿಸುತ್ತೇನೆ ಎಂದ ಅವರು, ಬ್ಯಾಂಕ್‌ಗಳು ಸಾಲ ಮರುಪಾವತಿ ಮಾಡಿಕೊಂಡು ಲಾಭ ಗಳಿಸಿ ಸ್ವತಃ ಅಭಿವೃದ್ಧಿ ಹೊಂದಬೇಕು. ರೈತರಿಗೂ ನೆರವಾಗಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ಸನ್ಮಾನ ಸ್ವೀಕರಿಸಿದ ಜಾನಪದ ಕಲಾವಿದ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿಳಿಚೋಡು ಪರಮೇಶ್ವರಪ್ಪ ಮಾತನಾಡಿ, ವಾಲ್ಮೀಕಿ ಜೀವನ ಚರಿತ್ರೆ ಸೇರಿದಂತೆ ಮೂರರಿಂದ ನಾಲ್ಕು ಸ್ವರಚಿತ ಪದ್ಯಗಳನ್ನು ಹಾಡಿದ್ದೇನೆ ಎಂದು ಹೇಳಿದರು.

ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷೆ ಚೌಡಮ್ಮ, ಡಿಸಿಸಿ ಬ್ಯಾಂಕ್ ನಾಮನಿರ್ದೇಶಿತ ಸದಸ್ಯ ಸೂರಡ್ಡಿಹಳ್ಳಿ ಶರಣಪ್ಪ, ವಿಎಸ್ ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಎಂ.ವಿ. ರಾಜು, ಸಿದ್ದೇಶ್, ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಪಿ.ಎಸ್. ಅರವಿಂದನ್ ಇನ್ನಿತರರು ಇದ್ದರು.

# ಹರಪನಹಳ್ಳಿ : ಉಜ್ಜಯಿನಿ ಪೀಠದಲ್ಲಿ ಎಂ.ಪಿ.ಲತಾ ಅವರಿಗೆ 'ಪ್ರಜಾ ಸಿರಿ' ಪ್ರಶಸ್ತಿ



ಹರಪನಹಳ್ಳಿ, ಆ.18- ನಮ್ಮ ತಾತ, ನಮ್ಮ ತಂದೆ ಎಂ.ಪಿ.ಪ್ರಕಾಶ್, ಸಹೋದರ ಎಂ.ಪಿ.ರವೀಂದ್ರ ಎಲ್ಲರೂ ಜನ ಸೇವೆಯಲ್ಲಿಯೇ ಖುಷಿ ಕಂಡಿದ್ದಾರೆ. ಶ್ರೀಗಳು ನಮ್ಮ ಸಮಾಜಮುಖಿ ಕೆಲಸಗಳನ್ನು ಗುರುತಿಸಿ ಪ್ರಶಸ್ತಿ ನೀಡುವುದು ನನಗೆ ಹರ್ಷ ತಂದಿದೆ ಎಂದು ಕೆ.ಪಿ.ಸಿ.ಸಿ. ಮಹಿಳಾ ಘಟಕದ ರಾಜ್ಯ ಕಾರ್ಯದರ್ಶಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಉಜ್ಜಯಿನಿ ಶ್ರೀಪೀಠದಲ್ಲಿ ಶ್ರಾವಣಮಾಸದ ಕಡೆ ಸೋಮವಾರದಂದು ಉಜ್ಜಯಿನಿ ಸದ್ಧರ್ಮ ಪೀಠಾಧ್ಯಕ್ಷರಾದ ಸಿದ್ದಲಿಂಗರಾಜ ದೇಶೀಕೇಂದ್ರ ಶಿವಾಚಾರ್ಯ ಶ್ರೀಗಳ ಸಾನ್ನಿಧ್ಯದಲ್ಲಿ ಶ್ರೀಮದ್ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಶಾಖಾ ಮಾನಿಹಳ್ಳಿ ಪುರವರ್ಗ ಮಠದವತಿಯಿಂದ ಕೊಡಲ್ಪಡುವ 'ಪ್ರಜಾ ಸಿರಿ' ಪ್ರಶಸ್ತಿ ಸ್ವಿಕರಿಸಿದ ನಂತರ ಮಾತನಾಡಿದರು.

ಪ್ರಶಸ್ತಿಯನ್ನು ಶ್ರಾವಣ ಮಾಸದಲ್ಲಿ ಉಜ್ಜಯಿನಿ ಪೀಠದಲ್ಲಿ ನೀಡಿ ನನಗೆ ಗೌರವಿಸಿರುವುದು ನನ್ನ ಜವಾಬ್ದಾರಿಯನ್ನು ಹೆಚ್ಚು ಮಾಡಿದೆ. ಇನ್ನೂ ಹೆಚ್ಚಿನ ಸೇವೆ ಮಾಡಲು ಸ್ಫೂರ್ತಿ ಮತ್ತು ಹುಮ್ಮಸ್ಸು ನೀಡಿದೆ. ಮುಂದಿನ ದಿನಗಳಲ್ಲಿ ಶ್ರೀಗಳ ಮಾರ್ಗದರ್ಶನದಲ್ಲಿ ಇನ್ನೂ ಹೆಚ್ಚು ಜನಪರ ಕೆಲಸ ಮಾಡುವುದಾಗಿ ಅವರು ತಿಳಿಸಿದರು.

ಮಾನಿಹಳ್ಳಿ ಪುರವರ್ಗ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ.ಮಳೆಯೋಗೀಶ್ವರ ಶಿವಾಚಾರ್ಯ ಸ್ವಾಮೀಜಿ, ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ, ಚಳಗೆರೆ ಹಿರೇಮಠದ ಶ್ರೀ ವೀರಸಂಗಮೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೂಡ್ಲಿಗಿ ಹಿರೇಮಠದ ಶ್ರೀ ಪ್ರಶಾಂತ ಸಾಗರ ಶಿವಾಚಾರ್ಯ ಸ್ವಾಮೀಜಿ, ಹೆಚ್.ಎಂ.ಮಲ್ಲಿಕಾರ್ಜುನ್, ಗೌತಮ್ ಇತರರಿದ್ದರು.

# ಐಬಿಪಿಎಸ್: ಆನ್‌ಲೈನ್ ತರಬೇತಿ

ದಾವಣಗೆರೆ, ಆ.18- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್‌ನವರು ಮುಂದಿನ ದಿನಗಳಲ್ಲಿ ಒಂಬತ್ತು ಸಾವಿರ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲು ಆಯೋಜಿಸಿದೆ.

ಆಸಕ್ತರು ಇದೇ ದಿನಾಂಕ 25 ರ ರೊಳಗಾಗಿ ಹೆಸರು ನೊಂದಾಯಿಸಲು 0821-2515944 ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವರಾದ ಪ್ರೊ. ಲಿಂಗರಾಜಗಾಂಧಿ ತಿಳಿಸಿದ್ದಾರೆ.

# ಗಣೇಶೋತ್ಸವಕ್ಕೆ ರಾಜ್ಯ ಸರ್ಕಾರದ ಅನುಮತಿ

**(1ನೇ ಪುಟದಿಂದ)** ಪರಿಷ್ಕೃತ ಮಾರ್ಗಸೂಚಿ ಅನ್ವಯ ಗಣೇಶೋತ್ಸವ ಆಚರಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ನೂತನ ಮಾರ್ಗಸೂಚಿ ಅನ್ವಯ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ನಾಲ್ಕು ಅಡಿ ಎತ್ತರ ಮೀರದಂತೆ ಹಾಗೂ ಮನೆಯೊಳಗೆ ಎರಡು ಅಡಿ ಮೀರದಂತೆ ಪ್ರತಿಷ್ಠಾಪಿಸಬೇಕಿದೆ. ಮೂರ್ತಿಗಳನ್ನು ತರುವಾಗ ಹಾಗೂ ವಿಸರ್ಜಿಸುವಾಗ ಯಾವುದೇ ಕಾರಣಕ್ಕಾಗಲಿ, ಮೆರವಣಿಗೆ ಮಾಡುವಂತಿಲ್ಲ. ಅದನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ.

ಹಬ್ಬವನ್ನು ಸರಳ ರೀತಿಯಲ್ಲಿ ದೇವಸ್ಥಾನದ ಒಳಗೆ, ಮನೆಗಳಲ್ಲಿ ಅಥವಾ ಸರ್ಕಾರಿ ಖಾಸಗಿ ಸಾರ್ವಜನಿಕ ಬಯಲು ಪ್ರದೇಶಗಳಲ್ಲಿ ಕನಿಷ್ಠ ಸಂಖ್ಯೆಯೊಂದಿಗೆ ಆಚರಿಸಬೇಕಿದೆ.

ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಲು ಸ್ಥಳೀಯ ಸಂಸ್ಥೆಗಳ ಅನುಮತಿ ಪಡೆಯಬೇಕು, ಒಂದು ಗ್ರಾಮಕ್ಕೆ ಒಂದೇ ಮೂರ್ತಿ ಕೂಳ್ಳಿರಿಸಬೇಕು. 20ಕ್ಕಿಂತ ಹೆಚ್ಚು ಜನ ಸೇರಬಾರದು ಮತ್ತು ಮನೋರಂಜನಾ ಕಾರ್ಯಕ್ರಮ ಆಯೋಜಿಸಲು ಅವಕಾಶವಿರುವುದಿಲ್ಲ.

ಮನೆಯಲ್ಲಿ ವಿಗ್ರಹಗಳನ್ನು ಪೂಜಿಸುವವರು ಅವುಗಳನ್ನು ಮನೆಯಲ್ಲೇ ವಿಸರ್ಜಿಸುವಂತೆ ಪರಿಷ್ಕೃತ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

## ಮನರಂಜನೆ ಇಲ್ಲ

**(1ನೇ ಪುಟದಿಂದ)** ಮನರಂಜನಾ ಕಾರ್ಯಕ್ರಮಗಳಿಗೆ ಅನುಮತಿ ಇರುವುದಿಲ್ಲ. ತರುವಾಗ ಇಲ್ಲವೇ ವಿಸರ್ಜಿಸುವಾಗ ಮೆರವಣಿಗೆ ಮಾಡಬಾರದು, ಸಾಮಾಜಿಕ ಅಂತರ ಕಾಯ್ದುಕೊಳ್ಳಬಾರದು ಎಂಬುದೂ ಸೇರಿದಂತೆ ಹಲವಾರು ನಿರ್ಬಂಧಗಳನ್ನು ಹೇರಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

# ಮಲೇಬೆನ್ನೂರು ಹೋಬಳಿಯಲ್ಲಿ ಸಂಭ್ರಮದ ಸ್ವಾತಂತ್ರ್ಯೋತ್ಸವ



**ಪುರಸಭೆ ಕಚೇರಿ ಮುಂಭಾಗ :** ಪುರಸಭೆ ಮುಖ್ಯಾಧಿಕಾರಿ ಧರಣೇಂದ್ರ ಕುಮಾರ್ ಧ್ವಜಾರೋಹಣ ನೆರವೇರಿಸಿ ಮಾತ ನಾಡಿದರು. ಪುರಸಭೆ ಸದಸ್ಯರಾದ ಬಿ. ಸುರೇಶ್, ಎ. ಆರೀಫ್ ಅಲಿ, ಮಾಸಣಗಿ ಶೇಖರಪ್ಪ, ಮಹಾಂತೇಶ್ ಸ್ವಾಮಿ, ಶಶಿ ಕಲಾ ಕೇಶವಾಚಾರಿ, ಸಾಕಮ್ಮ ರವಿಕುಮಾರ್, ಜಿಯವುಲ್ಲಾ, ಕೆ.ಜಿ. ಲೋಕೇಶ್, ಫಕ್ರುದ್ದೀನ್, ಭೋವಿಕುಮಾರ್, ಎಂ.ಬಿ. ಫೈಜು, ಆದಾಪುರ ವಿಜಯಕುಮಾರ್, ಪುರಸಭೆ ಅಧಿಕಾರಿಗಳಾದ ಗುರುಪ್ರಸಾದ್, ಉಮೇಶ್ ನವೀನ್, ಇಮ್ರಾನ್, ಇಂಜಿನಿಯರ್ ನೌಷಾದ್ ಮತ್ತಿತರರು ಭಾಗವಹಿಸಿದ್ದರು.

**ನಾಡ ಕಚೇರಿ:** ಉಪ ತಹಶೀಲ್ದಾರ್ ಆರ್. ರವಿ ಧ್ವಜಾರೋಹಣ ನೆರವೇರಿಸಿದರು. ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್, ಸುಭಾನಿ, ರಾಮಕೃಷ್ಣ ಇನ್ನಿತರರು ಹಾಜರಿದ್ದರು.

**ಸಮುದಾಯ ಆರೋಗ್ಯ ಕೇಂದ್ರ:** ವೈದ್ಯಾಧಿಕಾರಿ ಡಾ. ಲಕ್ಷ್ಮೀದೇವಿ, ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ವೀರಬಸಪ್ಪ, ರೈತ ಸಂಪರ್ಕ ಕೇಂದ್ರದಲ್ಲಿ ಕೃಷಿ ಅಧಿಕಾರಿ ನಟರಾಜ್, ಬೀರಲಿಂಗೇಶ್ವರ ವಿದ್ಯಾಸಂಸ್ಥೆಯಲ್ಲಿ ಅಧ್ಯಕ್ಷ ಪೂಜಾರ್ ಬಸಪ್ಪ ಧ್ವಜಾರೋಹಣ ನೆರವೇರಿಸಿದರು.

**ಲಯನ್ಸ್ ಕ್ಲಬ್ :** ಕೆ.ಎನ್. ಹನುಮಂತಪ್ಪ ಧ್ವಜಾರೋಹಣ ನೆರವೇರಿಸಿದರು. ಡಾ. ಟಿ. ಬಸವರಾಜ್, ಓ.ಜಿ. ರುದ್ರಗೌಡ್ರು, ಹೆಚ್.ಜಿ. ಚಂದ್ರಶೇಖರ್, ಪಾಲ್ಗೊಂಡಿದ್ದರು. ಲಯನ್ಸ್ ಶಾಲೆ ಮುಖ್ಯ ಶಿಕ್ಷಕ ಚಂದ್ರಶೇಖರ್ ಹಾಗೂ ಶಿಕ್ಷಕರು ಹಾಜರಿದ್ದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಂಘದ ಅಧ್ಯಕ್ಷ ಅಬ್ದುಲ್ ಹಾದಿ ಧ್ವಜಾರೋಹಣ ನೆರವೇರಿಸಿದರು.

**ಕುಂಬಳೂರು ಪ್ರಾಥಮಿಕ ಕೃಷಿ ಪತ್ತಿನ ಸಂಘ:** ಸಂಘದ ಅಧ್ಯಕ್ಷ ಡಿ.ಕೆ. ಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಸಂಘದ ಉಪಾಧ್ಯಕ್ಷ ಕೆ. ತಿಪ್ಪೇಸ್ವಾಮಿ, ನಿರ್ದೇಶಕರಾದ ಹಳೇಮನೆ ಆಂಜನೇಯ, ಎಂ. ವಾಸುದೇವಮೂರ್ತಿ, ಸಿಇಓ ಯಶೋಧ ಹಾಜರಿದ್ದರು.

**ಬೆಳ್ಳೂಡಿ ಶಾಖಾ ಮಠ/ ಚಂದ್ರಗುಪ್ತ ಮೌರ್ಯ ಪಬ್ಲಿಕ್ ಸ್ಕೂಲ್:** ಸಂಯುಕ್ತಾಶ್ರಯದಲ್ಲಿ ದೇಶದ 74ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 223ನೇ ಜಯಂತಿ ಆಚರಿಸಲಾಯಿತು. ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸ್ಕೂಲ್ ಕಾರ್ಯದರ್ಶಿ ನಿಂಗಪ್ಪ, ಪ್ರಿನ್ಸಿಪಾಲ್ ಶೃತಿ ಇನಾಂದಾರ್, ಉಪನ್ಯಾಸಕ ಬೀರಪ್ಪ, ಉದ್ಯಮಿ ನಂದಿಗಾವಿ ಶ್ರೀನಿವಾಸ್, ಚೂರಿ ಜಗದೀಶ್ ಇನ್ನಿತರರಿದ್ದರು.

# ಪರೀಕ್ಷಾ ಗಡುವು ಆದೇಶವಲ್ಲ

**(1ನೇ ಪುಟದಿಂದ)** ವಿಶ್ವವಿದ್ಯಾನಿಲಯಗಳು ಸ್ನಾತಕೋತ್ತಕ್ಕೆ ಪ್ರವೇಶ ಕಲ್ಪಿಸಬೇಕಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ನೆರವಾಗಲು ಪರೀಕ್ಷೆಗೆ ಸೂಚಿಸಲಾಗಿತ್ತು ಎಂದಿದ್ದಾರೆ.

ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠದ ಎದುರು ವಾದ ಮಂಡಿಸಿರುವ ಮೆಹ್ತಾ, ಯು.ಜಿ.ಸಿ. ಮಾರ್ಗಸೂಚಿಯನ್ನು ರಾಜ್ಯ ಅಧಿಕಾರಿಗಳು ಉಲ್ಲಂಘಿಸಲಾಗದು ಎಂದಿದ್ದಾರೆ. ಪೀಠದಲ್ಲಿ ನ್ಯಾಯ ಮೂರ್ತಿಗಳಾದ ಆರ್.ಎಸ್. ರೆಡ್ಡಿ ಹಾಗೂ ಎಂ.ಆರ್. ಷಾ ಅವರಿದ್ದಾರೆ.

ರಾಜ್ಯದಲ್ಲಿ ಪರೀಕ್ಷೆ ನಡೆಸಲು ಪರಿಸ್ಥಿತಿ ಸೂಕ್ತವಾಗಿಲ್ಲ ಎಂದು ರಾಜ್ಯ ವಿಕೋಪ ನಿರ್ವಹಣಾ ಪ್ರಾಧಿಕಾರ ನಿರ್ಧರಿಸಿದ್ದರೆ ಯು.ಜಿ.ಸಿ. ನಿರ್ದೇಶನವನ್ನು ಮೀರಬಹುದಾಗಿದೆಯೇ? ಎಂಬುದು ತಮ್ಮ ಮುಂದಿರುವ ಪ್ರಶ್ನೆ ಎಂದು ಪೀಠ ಹೇಳಿದೆ.

ಜುಲೈ 6ರಂದು ಯು.ಜಿ.ಸಿ. ಹೊರಡಿಸಿರುವ ನಿರ್ದೇಶನವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಲಾಗಿತ್ತು.

ವಿಡಿಯೋ ಕಾನ್ಫರೆನ್ಸ್ ಮೂಲಕ ನಡೆದ ವಿಚಾರಣೆಯಲ್ಲಿ ವಾದ ಮಂಡಿಸಿದ ಮೆಹ್ತಾ, ರಾಜ್ಯಗಳು ಗಡುವು ವಿಸ್ತರಿಸಲು ಅನುಮತಿ ಕೇಳಬಹುದು. ಆದರೆ, ಪರೀಕ್ಷೆ ನಡೆಸದೇ ಪದವಿ ನೀಡುವ ನಿರ್ಧಾರ ತೆಗೆದುಕೊಳ್ಳುವಂತಿಲ್ಲ ಎಂದಿದ್ದಾರೆ.

# ಈ ದೇಶದಲ್ಲಿ ಹೆಣ್ಣಾಗಿ ಹುಟ್ಟಿರುವುದೇ ನಮ್ಮ ಭಾಗ್ಯ : ಡಾ. ಪುಷ್ಪಲತಾ

ದಾವಣಗೆರೆ, ಆ. 18- ಭಾರತ ದೇಶದ ಸಂಸ್ಕೃತಿ, ಆಚಾರ, ವಿಚಾರ, ಸಂಪ್ರದಾಯ ನಿಜಕ್ಕೂ ಎಲ್ಲೂ ಸಿಗಲ್ಲ, ಅದರಲ್ಲೂ ಈ ಮಣ್ಣಿನಲ್ಲಿ ಹೆಣ್ಣಿಗೆ ಸಿಗುವ ಗೌರವ ನಮಗೆ ಹೆಮ್ಮೆಯ ವಿಷಯ ಎಂದು ಕರ್ನಾಟಕ ಮಹಿಳಾ ಮತ್ತು ಮಕ್ಕಳ ಸಾಧನ ಅಭಿವೃದ್ಧಿ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಡಾ. ಪುಷ್ಪಲತಾ ಪವಿತ್ರರಾಜ್ ತಿಳಿಸಿದರು.

ತುರ್ಚಘಟ್ಟದ ಬಳಿಯ ಸಾಧನಾ ಅನಾಥಾಶ್ರಮ ಹಾಗೂ ವೃದ್ಧಾಶ್ರಮದಲ್ಲಿ 74ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ವಾತಂತ್ರ್ಯ ಎಂಬುವುದು ಪ್ರತಿಯೊಬ್ಬರ ಜೀವನದಲ್ಲಿ ಬಹುಮುಖ್ಯವಾದ ಅಂಶ. ಇದನ್ನು ಕಿತ್ತುಕೊಳ್ಳುವ ಹಕ್ಕು ಯಾರಿಗೂ ಇಲ್ಲ. ಈ ದೇಶಕ್ಕೆ ಸ್ವಾತಂತ್ರ್ಯ ತಂದುಕೊಡುವಲ್ಲಿ ನೂರಾರು ದೇಶ ಭಕ್ತರ ಹೋರಾಟದ ಶ್ರಮವಿದೆ ಎಂದರು. ಮಹಾನ್ ವ್ಯಕ್ತಿಗಳು ಹುತಾತ್ಮರಾಗಿದ್ದಾರೆ. ಅವರನ್ನು ಸ್ಮರಿಸುತ್ತಾ, ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕೆಂದು ಪುಷ್ಪಲತಾ ತಿಳಿಸಿದರು.

# ಗಣೇಶೋತ್ಸವ, ಮೊಹರಂ ಹಬ್ಬಗಳ ಆಚರಣೆ ಸರಳವಾಗಿರಲಿ



## ಮಲೇಬೆನ್ನೂರಿನ ಸಭೆಯಲ್ಲಿ ಡಿವೈಎಸ್ಪಿ ತಾಮ್ರಧ್ವಜ

ಮಲೇಬೆನ್ನೂರು, ಆ.18- ಗಣೇಶೋತ್ಸವ ಹಾಗೂ ಮೊಹರಂ ಹಬ್ಬವನ್ನು ಸರ್ಕಾರದ ಮಾರ್ಗಸೂಚಿಯಂತೆ ಸರಳ ಹಾಗೂ ಶಾಂತಿಯುತವಾಗಿ ಆಚರಿಸಿ ಎಂದು ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ಮನವಿ ಮಾಡಿದರು. ಇಲ್ಲಿನ ವಿವಿಧ ಮಸೀದಿಗಳಿಗೆ ಮತ್ತು ಗಣೇಶನನ್ನು ಪ್ರತಿಷ್ಠಾಪಿಸುವ ಸ್ಥಳಗಳಿಗೆ ಭೇಟಿ ನೀಡಿ, ಕೊರೊನಾ ವೈರಸ್ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಹಬ್ಬಗಳ ಆಚರಣೆಗೆ ಸರ್ಕಾರ ವಿಧಿಸಿರುವ ನಿಬಂಧನೆಗಳ ಕುರಿತಂತೆ ಇಂದಿಲ್ಲಿ ತಿಳಿಸಿದರು.

20 ಕ್ಕೆ ಹೆಚ್ಚು ಜನ ಸೇರದಂತೆ ಹಬ್ಬವನ್ನು ಸರಳವಾಗಿ ಆಚರಿಸಿ, ಪಿಓಪಿ ಗಣೇಶ ಸ್ಥಾಪನೆಗೆ ಮತ್ತು ಮೆರವಣಿಗೆ, ಡಿಜೆಗೆ ಅವಕಾಶ ಇಲ್ಲ ಎಂದು ನರಸಿಂಹ ತಾಮ್ರಧ್ವಜ ಸ್ಪಷ್ಟಪಡಿಸಿದರು.

ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಪಟ್ಟಣದಲ್ಲಿ ಸಾರ್ವಜನಿಕ ಮೊಹರಂ ಆಚರಣೆ ಇರುವುದಿಲ್ಲ ಎಂದು ಗಫಾರ್‌ಖಾನ್, ಆಶಿಕ್ ಅಲಿ, ಶೌಕತ್ ಅಲಿ, ಸೈಯದ್ ಅಕ್ರಂ, ಜಿಯಾವುಲ್ಲಾ, ಮಹಮ್ಮದ್ ಹುಸೇನ್ ಹೇಳಿದರು.

ಪಿಎಸ್‌ಐ ವೀರಬಸಪ್ಪ ಪಾಳೇಗಾರ್ ನಾಗರಾಜ್, ಸುನೀಲ್ ಮಣಿ, ಅಶೋಕ್, ಬಸವರಾಜ್, ಕಾರ್ತಿಕ್ ಮತ್ತಿತರರು ಈ ವೇಳೆ ಹಾಜರಿದ್ದರು.

# ಪಿಎಂ ಕೇರ್ಸ್ ಅನ್ನು ಎನ್.ಡಿ.ಆರ್.ಎಫ್.ಗೆ ವರ್ಗಾಯಿಸಲು ಸುಪ್ರೀಂ ನಕಾರ

ನವದೆಹಲಿ, ಆ. 18 – ಕೊರೊನಾ ವಿರುದ್ದದ ಹೋರಾಟಕ್ಕಾಗಿ ಪಿಎಂ ಕೇರ್ಸ್ ನಿಧಿಗೆ ನೀಡಲಾಗಿರುವ ಹಣವನ್ನು ರಾಷ್ಟ್ರೀಯ ವಿಕೋಪ ಸ್ಪಂದನಾ ನಿಧಿ (ಎನ್.ಡಿ.ಆರ್.ಎಫ್.)ಗೆ ವರ್ಗಾಯಿಸಬೇಕು ಎಂದು ದಾಖಲಾಗಿದ್ದ ಮನವಿಯನ್ನು ತಳ್ಳಿ ಹಾಕಿರುವ ಸುಪ್ರೀಂ ಕೋರ್ಟ್, ಎರಡೂ ನಿಧಿಗಳ ಉದ್ದೇಶ ಬೇರೆ ಬೇರೆಯಾಗಿದೆ ಎಂದು ಹೇಳಿದೆ.

ನ್ಯಾಯಮೂರ್ತಿ ಅಶೋಕ್ ಭೂಷಣ್ ಅವರ ನೇತೃತ್ವದ ಪೀಠ ಈ ಬಗ್ಗೆ ಆದೇಶ ಹೊರಡಿಸಿದ್ದು, ಕೊರೊನಾ ವಿರುದ್ಧದ ಹೋರಾಟಕ್ಕೆ ನೆರವು ನೀಡುವ ಸಲುವಾಗಿ ಸರ್ಕಾರ ನಿಯಮಗಳ ಅನುಸಾರ ಎನ್.ಡಿ.ಆರ್.ಎಫ್. ನಿಧಿ ಬಳಸಿಕೊಳ್ಳಲೂ ಸಹ ಯಾವುದೇ ಅಡ್ಡಿ ಇಲ್ಲ ಎಂದು ಹೇಳಿದೆ.

ತುರ್ತು ಪರಿಸ್ಥಿತಿಯನ್ನು ಎದುರಿಸಲು ಸಾರ್ವಜನಿಕ ಟ್ರಸ್ಟ್ ಆದ ಪಿಎಂ ಕೇರ್ಸ್ ನಿಧಿಯ ಬಳಕೆಗೆ ಯಾವುದೇ ಆಕ್ಷೇಪ ಮಾಡುವ ಸಂದರ್ಭ ಇದಲ್ಲ ಎಂದೂ ಸಹ ನ್ಯಾಯಾಲಯ ಹೇಳಿದೆ. ಸರ್ಕಾರೇತರ ಸಂಘಟನೆಯಾದ ಸೆಂಟರ್ ಫಾರ್ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್, ಸುಪ್ರೀಂ ಕೋರ್ಟ್‌ನಲ್ಲಿ ಪಿಎಂ ಕೇರ್ಸ್ ಪ್ರಶ್ನಿಸಿ ಅರ್ಜಿ ದಾಖಲಿಸಿತ್ತು.

ಪಿಎಂ ಕೇರ್ಸ್ ಸಾರ್ವಜನಿಕ ಚಾರಿಟಬಲ್ ಟ್ರಸ್ಟ್ ಆಗಿದೆ. ಇದರ ಹಣವನ್ನು ಎನ್.ಡಿ.ಆರ್.ಎಫ್.ಗೆ ವರ್ಗಾಯಿಸಲು ನಿರ್ದೇಶನ ನೀಡಲಾಗುವುದು ಎಂದು ನ್ಯಾಯಾಲಯ ಹೇಳಿದೆ.

ಪಿಎಂ ಕೇರ್ಸ್ ನಿಧಿಗೆ ಬಂದ ಎಲ್ಲಾ ಹಣವನ್ನು ಎನ್.ಡಿ.ಆರ್.ಎಫ್.ಗೆ ವರ್ಗಾಯಿಸಬೇಕೆಂದು ಅರ್ಜಿದಾರರು ಮಾಡಿಕೊಂಡ ಮನವಿಯನ್ನು ತಳ್ಳಿ ಹಾಕಿರುವುದಾಗಿ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಆರ್.ಎಸ್. ರೆಡ್ಡಿ ಹಾಗೂ ಎಂ.ಆರ್. ಷಾ ಅವರಿದ್ದರು.

ಕೇಂದ್ರ ಸರ್ಕಾರ ಕೊರೊನಾ ನಿಯಂತ್ರಿಸುವ ಸಲುವಾಗಿ ರಾಜ್ಯಗಳಿಗೆ ಹಣಕಾಸು ನೆರವು ನೀಡುತ್ತಿದೆ. ಕೇಂದ್ರ ಸರ್ಕಾರ ಈ ನಿಧಿಯಿಂದ ಹಣ ನೀಡಬೇಕು, ಆ ನಿಧಿಯಿಂದ ಹಣ ನೀಡಬೇಕು ಎಂದು ಪ್ರಶ್ನಿಸುವುದು ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರನಿಗೆ ಸಂಬಂಧಿಸಿದ್ದಲ್ಲ ಎಂದು ನ್ಯಾಯಾಲಯ ಹೇಳಿದೆ

ವಿಕೋಪ ನಿರ್ವಹಣೆ ಕಾಯ್ದೆ 2005ರ ಅನ್ವಯ ಯಾವುದೇ ವ್ಯಕ್ತಿ ಇಲ್ಲವೇ ಸಂಸ್ಥೆ ಎನ್.ಡಿ.ಆರ್.ಎಫ್.ಗೆ ದೇಣಿಗೆ ನೀಡಲು ಯಾವುದೇ ನಿಷೇಧವೂ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಪಿಎಂ ಕೇರ್ಸ್‌ಗೆ ಯಾವುದೇ ಸಂಸ್ಥೆ ಇಲ್ಲವೇ ವ್ಯಕ್ತಿ ನೀಡುವ ದೇಣಿಗೆ ಸ್ವಯಂ ಪ್ರೇರಿತವಾಗಿರಬೇಕು. ಈ ಬಗ್ಗೆ ದೇಣಿಗೆ ನೀಡುವುದು ಆ ವ್ಯಕ್ತಿ ಇಲ್ಲವೇ ಸಂಸ್ಥೆಗೆ ಬಿಟ್ಟ ವಿಷಯ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

# ಲಯನ್ಸ್ ನಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ದಾವಣಗೆರೆ, ಆ.18- ನಗರದ ಲಯನ್ಸ್ ಕ್ಲಬ್ ವತಿಯಿಂದ ನಡೆಯುತ್ತಿರುವ ಲಯನ್ಸ್ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ಹಾಗೂ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಲಯನ್ಸ್ ಶಾಲೆಯಲ್ಲಿ ಆಚರಿಸಲಾಯಿತು.

ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಎ.ಜೆ.ತೇಜಸ್ವಿನಿ, ವೈ.ನವೀನ್ ಹಾಗೂ ನೇತ್ರಾ ಗೌಡ ಅವರುಗಳನ್ನು ಲಯನ್ಸ್ ಕ್ಲಬ್ಬಿನ ಅಧ್ಯಕ್ಷ ವಿಜಯ್ ಕುಮಾರ್ ಅವರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿ ಕೋರಿ ಶಿವಕುಮಾರ್, ಖಜಾಂಚಿ ಸಂಪತ್ ಬಿ.ಹಳ್ಳಿಕೆರೆ, ಲಯನ್ಸ್ ಮಾಜಿ ರಾಜ್ಯಪಾಲ ಜಿ.ನಾಗನೂರು ಜಿಲ್ಲಾ ಲಯನ್ಸ್ ಛೇರ್ಮನ್ ಬೆಳ್ಳೂಡಿ, ಶಿವಕುಮಾರ್, ಲಯನ್ಸ್ ಟ್ರಸ್ಟ್ ಕಾರ್ಯದರ್ಶಿ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಲಯನ್ಸ್ ಕ್ಲಬ್ ನಿರ್ದೇಶಕರಾದ ಕಣಕುಪ್ಪಿ ಮುರುಗೇಶಪ್ಪ, ಎನ್.ಸಿ. ಬಸವರಾಜು, ಕೆ.ಮಲ್ಲಿಕಾರ್ಜುನ್, ಲಯನ್ಸ್ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಜಿಲ್ಲಾ ಬಿಜೆಪಿಯಿಂದ ಮಾಜಿ ಪ್ರಧಾನಿ ವಾಜಪೇಯಿ ಪುಣ್ಯಸ್ಮರಣೆ



ದಾವಣಗೆರೆ, ಆ.18- ಮಾಜಿ ಪ್ರಧಾನಮಂತ್ರಿ ಭಾರತ ರತ್ನ ದಿ. ಅಟಲ್ ಬಿಹಾರಿ ವಾಜಪೇಯಿ ಅವರ ಪುಣ್ಯ ಸ್ಮರಣೆಯನ್ನು ಭಾರತೀಯ ಜನತಾ ಪಾರ್ಟಿ ಜಿಲ್ಲಾ ಘಟಕದಿಂದ ಹಮ್ಮಿಕೊಳ್ಳಲಾಗಿತ್ತು. ಶಾಸಕ ಎಸ್.ಎ. ರವೀಂದ್ರನಾಥ್, ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ, ಜಿಲ್ಲಾ ಅಧ್ಯಕ್ಷ ಹನಗವಾಡಿ ವೀರೇಶ್, ಯಶವಂತರಾವ್ ಜಾಧವ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್, ಮಂಜಾ ನಾಯಕ್, ಜಿಲ್ಲಾ ಕಾರ್ಯದರ್ಶಿ ಲಿಂಗರಾಜು ಗೌಳಿ, ಮಾಧ್ಯಮ ಪ್ರಮುಖ್ ಹೆಚ್.ಪಿ. ವಿಶ್ವಾಸ್, ಉತ್ತರ ಅಧ್ಯಕ್ಷ ಸಂಗನಗೌಡ್ರು, ಮಾಯಕೊಂಡ ಅಧ್ಯಕ್ಷ ದೇವೀಂದ್ರಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಾಧನೆಗೆ ಬಡತನ ಅಡ್ಡಿಯಾಗುವುದಿಲ್ಲ : ಶಾಸಕ ರಾಮಚಂದ್ರ

## ಜಗಳೂರಿನಲ್ಲಿ ನೂತನ ತಹಶೀಲ್ದಾರ್ ನಾಗವೇಣಿ ಅವರಿಗೆ ಸ್ವಾಗತ, ಹುಲ್ಲುಮನೆ ತಿಮ್ಮಣ್ಣ ಅವರಿಗೆ ಬೀಳ್ಕೊಡುಗೆ

ಜಗಳೂರು, ಆ.18- ಸಾಧನೆಗೆ ಬಡತನ ಎಂದೂ ಅಡ್ಡಿಯಾಗುವುದಿಲ್ಲ ಎಂಬುದನ್ನು ಎಸಿ ಹುಲ್ಲುಮನಿ ತಿಮ್ಮಣ್ಣ ಸಾಧಿಸಿ ತೋರಿಸಿದ್ದಾರೆ ಎಂದು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರೂ, ಶಾಸಕ ಎಸ್ .ವಿ.ರಾಮಚಂದ್ರ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕಂದಾಯ ಇಲಾಖೆ, ತಾಲ್ಲೂಕು ಸರಕಾರಿ ನೌಕರರ ಸಂಘ ಮತ್ತು ವಿವಿಧ ಸಂಘ ಸಂಸ್ಥೆಗಳಿಂದ ಹುಲ್ಲುಮನಿ ತಿಮ್ಮಣ್ಣ ಅವರಿಗೆ ಬೀಳ್ಕೊಡುಗೆ ಮತ್ತು ನೂತನ ತಹಶೀಲ್ದಾರ್ ನಾಗವೇಣಿ ಅವರಿಗೆ ಸ್ವಾಗತ ಕೋರುವ ಸಮಾರಂಭ ಉದ್ದೇಶಿಸಿ ಅವರು ಮಾತನಾಡಿದರು.

ತಿಮ್ಮಣ್ಣ ಅವರ ಸಾಧನೆ ತೋರಿಸಿದ್ದಾರೆ. ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ. ಕಷ್ಟಪಟ್ಟು ಅಭ್ಯಾಸ ಮಾಡಿದರೆ ಉನ್ನತ ಸ್ಥಾನ ದೊರೆತೇ ದೊರೆಯುತ್ತದೆ ಎಂಬುದಕ್ಕೆ ತಿಮ್ಮಣ್ಣ ಉಪವಿಭಾಗಾಧಿಕಾರಿಯಾಗಿ ಆಯ್ಕೆಯಾಗಿರುವುದು ಸಾಕ್ಷಿಯಾಗಿದೆ ಎಂದರು.



ಲಾಕ್‌ಡೌನ್ ಸಮಯದಲ್ಲಿ ತಿಮ್ಮಣ್ಣ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಿದ್ದರಿಂದ ಕೊರೊನಾ ಹಾವಳಿ ಕಡಿಮೆ ಇದೆ ಎಂದ ಅವರು, ತಾಲ್ಲೂಕಿನ ಜನತೆ ಮುಗ್ದರಾಗಿದ್ದು ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಸಹಕಾರ ನೀಡುತ್ತಾರೆ ಎಂದರು.

ಸಿಪಿಐ ದುರುಗಪ್ಪ ಮಾತನಾಡಿ, ಜನಾನುರಾಗಿಯಾಗಿ ಕೆಲಸ ಮಾಡುವುದರ ಮೂಲಕ ತಹಶೀಲ್ದಾರ್ ಹುದ್ದೆಗೆ ನ್ಯಾಯ ಒದಗಿಸಿದ್ದಾರೆ. ಸಾರ್ವಜನಿಕರ ಸೇವೆಯನ್ನು ಮಾಡಿದ್ದಾರೆ ಎಂದು ಶ್ಲಾಘಿಸಿದರು.

ಇ.ಓ. ಮಲ್ಲಾನಾಯ್ಕ ಮಾತನಾಡಿ, ಕೊರೊನಾ ಪ್ರಾರಂಭದ ಹಂತದಲ್ಲಿರುವಾಗ ತಿಮ್ಮಣ್ಣ ಅವರು ಹಗಲು-ರಾತ್ರಿ ಕೆಲಸ ಮಾಡಿದ್ದಲ್ಲದೆ ಇತರೆ ಅಧಿಕಾರಿಗಳಿಂದ ಕೆಲಸವನ್ನು ತೆಗೆದುಕೊಂಡರು ಎಂದರು.

ಉಪವಿಭಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಮಾತನಾಡಿ, ಬಡವರ ಕಣ್ಣೀರೊರೆಸುವ ಹುದ್ದೆ ಎಂದರೆ ಜಿಲ್ಲಾಧಿಕಾರಿ ಮತ್ತು ತಹಶೀಲ್ದಾರ್ ಹುದ್ದೆಯಾಗಿದೆ. ಈ ಹುದ್ದೆ ನಿಭಾಯಿಸಲು ಕ್ಷೇತ್ರದ ಆಧುನಿಕ ಭಗೀರತ ಎಂದು ಕರೆಯುವ ಕ್ಷೇತ್ರದ ಶಾಸಕರ ಸಹಕಾರದಿಂದ ಉತ್ತಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಯಿತು ಎಂದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ನಾಗವೇಣಿ, ಜಿ.ಪಂ ಸದಸ್ಯ ಮಂಜುನಾಥ್, ತಾ.ಪಂ ಸದಸ್ಯ ಸಿದ್ದೇಶ್, ತಾಲ್ಲೂಕು ಸರಕಾರಿ ನೌಕರರ ಸಂಘದ ಅಧ್ಯಕ್ಷ ಅಜ್ಜಯ್ಯ, ರೈತ ಸಂಘದ ಮುಖಂಡರು, ನೌಕರರ ಸಂಘದ ಪಧಾದಿಕಾರಿಗಳು ಹಾಜರಿದ್ದರು.

# ರೈತರಿಗೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ಪ್ರತಿಭಟನೆ

ಹರಪನಹಳ್ಳಿ, ಆ.18- ರೈತರಿಗೆ, ಕೃಷಿ ಕಾರ್ಮಿಕರಿಗೆ ಸೂಕ್ತ ಬೆಳೆ ಪರಿಹಾರ ನೀಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಹಿತ ರಕ್ಷಣಾ ವೇದಿಕೆ ತಾಲೂಕು ಘಟಕದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ ಸಹಾಯಕ ಕೃಷಿ ನಿರ್ದೇಶಕರಿಗೆ ಮನವಿ ಪತ್ರ ಸಲ್ಲಿಸಿದರು.

ವೇದಿಕೆಯ ತಾಲ್ಲೂಕು ಅಧ್ಯಕ್ಷ ಪಿ.ಶಿವಕುಮಾರನಾಯ್ಕ ಮಾತನಾಡಿ, ತಾಲ್ಲೂಕಿನ ಬಹುಭಾಗಗಳಲ್ಲಿ ರೈತರು ಈರುಳ್ಳಿ ಬೆಳೆಯನ್ನು ಬೆಳೆಯುತ್ತಿದ್ದು, ಈ ಬೆಳೆಗಳ ಮೇಲೆ ಕುಟುಂಬಗಳು ಅವಲಂಬಿತರಾಗಿರುತ್ತಾರೆ. ಇತ್ತೀಚಿನ ದಿನಗಳಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಈರುಳ್ಳಿ ಬೆಳೆಗೆ ಹಲವು ರೋಗ ಬಂದು ರೈತರು ಅತಿವೃಷ್ಟಿ ಮತ್ತು ಅನಾವೃಷ್ಟಿಗೆ ಒಳಗಾಗಿದ್ದಾರೆ. ಸಮೀಕ್ಷೆ ಸರಿಯಾಗಿ ಆಗುತ್ತಿಲ್ಲ. ಅರ್ಹ ಫಲಾನುಭವಿಗಳು




ಪರಿಹಾರ ಪಡೆಯುವಲ್ಲಿ ವಂಚಿತರಾಗುತ್ತಿದ್ದು, ರೈತರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಅವರು ದೂರಿದರು.

ಪ್ರಧಾನ ಕಾರ್ಯದರ್ಶಿ ನಾಗರಾಜ ವಾಲ್ಮೀಕಿ ಮಾತನಾಡಿ ರೈತರು ಬೆಳೆದ ಬೆಳೆಗಳ ಕುರಿತು ಸರಿಯಾಗಿ ಸಮೀಕ್ಷೆ ಮಾಡದೇ ರೈತರಿಗೆ ಸರಿಯಾದ ಮಾರ್ಗವಿಲ್ಲದೆ ರೈತರಿಗೆ ನೀವೇ ಸಮೀಕ್ಷೆ ಮಾಡಿಕೊಳ್ಳಿರಿ ಎಂದು ಅಧಿಕಾರಿಗಳು ಹೇಳುತ್ತಿರುವುದು ವಿಪರ್ಯಾಸವಾಗಿದೆ. ತಾಂತ್ರಿಕ ತಿಳಿವಳಿಕೆಯಲ್ಲಿ ರೈತರು ಹಿಂದುಳಿದಿದ್ದು, ಬೆಳೆ ನಷ್ಟ ವಾದರೆ ಆರ್ಥಿಕ ಸಂಕಷ್ಟಕ್ಕೆಗುರಿಯಾಗುತ್ತಾರೆ. ಅನಿವಾರ್ಯವಾಗಿ ಸಾಲ ತೀರಿಸಲಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಇಂತಹ ದುರ್ಘಟನೆಗಳು ನಡೆಯದಂತೆ ತಡೆ ಹಿಡಿಯಬೇಕಾದರೆ ಸರ್ಕಾರದಿಂದ ಸಕಾಲಕ್ಕೆ ಸಿಗುವಂತಹ ಸೌಲಭ್ಯಗಳು ನೇರವಾಗಿ ಮತ್ತು ಜರೂರಾಗಿ ರೈತರಿಗೆ ಸೇರಬೇಕು. ಕೃಷಿ ಇಲಾಖೆಯಿಂದ ರೈತರು ಬೆಳೆದ ಬೆಳೆಗಳ ಕುರಿತು ಸಮೀಕ್ಷೆ ನಡೆಸಿ ರೈತರಿಗೆ ಸಿಗುವಂತಹ ಎಲ್ಲಾ ಸೌಲಭ್ಯಗಳು ಮತ್ತು ಪರಿಹಾರಗಳನ್ನು ಕೂಡಲೇ ರೈತರಿಗೆ ನೀಡಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸಂಘಟನಾ ಕಾರ್ಯದರ್ಶಿ ಮಜ್ಜಿಗೇರಿ ಮಲ್ಲಿಕಾರ್ಜುನ ಸೇರಿದಂತೆ ಅನೇಕ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

## ಗುಜರಾತ್‌ನ ಐದು ನಗರಗಳಲ್ಲಿ ಗಗನಚುಂಬಿ ಕಟ್ಟಡಗಳಿಗೆ ಅನುಮತಿ



ಅಹಮದಾಬಾದ್, ಆ. 18 – ಗುಜರಾತ್‌ನ ಐದು ಪ್ರಮುಖ ನಗರಗಳಲ್ಲಿ 70 ಅಂತಸ್ತುಗಳ ಗಗನಚುಂಬಿ ಕಟ್ಟಡಗಳನ್ನು ನಿರ್ಮಿಸಲು ಮುಖ್ಯಮಂತ್ರಿ ವಿಜಯ್ ರುಪಾನಿ ಅನುಮತಿ ನೀಡಿದ್ದಾರೆ. ಈಗಿರುವ ನಿಯಮಗಳ ಪ್ರಕಾರ ರಾಜ್ಯದ ಕಟ್ಟಡಗಳ ಎತ್ತರ 23 ಅಂತಸ್ತು ದಾಟುವಂತಿಲ್ಲ.

ಈಗ ರಾಜ್ಯ ಸರ್ಕಾರ ನಿಯಮಗಳಿಗೆ ತಿದ್ದುಪಡಿ ತಂದಿದ್ದು 70 ಹಾಗೂ ಅದಕ್ಕೂ ಹೆಚ್ಚಿನ ಎತ್ತರದ ಕಟ್ಟಡಗಳನ್ನು ನಿರ್ಮಿಸಲು ಅಹಮದಾಬಾದ್, ವಡೋದರ, ಸೂರತ್, ರಾಜಕೋಟ್ ಹಾಗೂ ಗಾಂಧಿನಗರಗಳಲ್ಲಿ ಅನುಮತಿ ನೀಡಲಾಗುವುದು ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ರೀತಿಯ ಯೋಜನೆಗಳಿಗೆ ಅನನುಮತಿ ನೀಡಲು ವಿಶೇಷ ಪರಿಣಿತರ ಸಮಿತಿ ರಚಿಸಲಾಗುವುದು.

# ಹೊನ್ನಾಳಿ : ಹಿರೇಕಲ್ಮಠದ ಶ್ರೀ ಚನ್ನಪ್ಪಸ್ವಾಮಿ ರಥೋತ್ಸವ ಸಾಂಕೇತಿಕ - ಸರಳ ಆಚರಣೆ

ಹೊನ್ನಾಳಿ, ಆ.18- ಹಿರೇಕಲ್ಮಠದ ರಥೋತ್ಸವ ಮೈಸೂರು ದಸರದ ರಾಜವೈಭವದ ಮೆರವಣಿಗೆಯಂತೆ ನಡೆಯುತ್ತಿತ್ತು. ಆದರೆ, ಈ ವರ್ಷ ಕೊರೊನಾ ತಾಂಡವ ವಾಡುತ್ತಿದ್ದ ಹಿನ್ನೆಲೆಯಲ್ಲಿ ಶ್ರೀ ಚನ್ನಪ್ಪಸ್ವಾಮಿ ರಥೋತ್ಸವ ಸಾಂಖ್ಯೇತಿಕದಿಂದ ಸರಳವಾಗಿ ಇಂದು ನಡೆಯಿತು.

ಇಂದು ಬೆಳಗಿನಜಾವ ಪದ್ಧತಿಯಂತೆ ಶ್ರೀಮಠದ ಕರ್ತೃ ಗದ್ದುಗೆಗಳಿಗೆ ವಿಶೇಷ ಪೂಜಾ ಕೈಂಕರ್ಯ ನಡೆದು ರಥದ ಗಾಲಿಗಳಿಗೆ ಬಲಿ ಅನ್ನ ನೈವೇದ್ಯದಂತೆ ಮಠದ ಮುಂಭಾಗದಲ್ಲಿ ಶ್ರೀ ವೀರಭದ್ರೇಶ್ವರ ಕೇಂಡದಾರ್ಚನೆ ನಡೆಯಿತು.





ನಂತರ ಶ್ರೀಮಠದ ಡಾ.ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ರಥವನ್ನೇರಿ ನೆರದಿದ್ದ ಕೆಲವೇ ಭಕ್ತರ ಸಮ್ಮುಖದಲ್ಲಿ ರಥೋತ್ಸವ ನಡೆಯಿತು. ಈ ಹಿಂದೆ ಮಠದ ಆವರಣದಿಂದ ಅದ್ದೂರಿಯಾಗಿ ಸಹಸ್ರಾರು ಭಕ್ತರೊಂದಿಗೆ ವಿವಿಧ ವಾದ್ಯಮೇಳಗಳೊಂದಿಗೆ ಭವ್ಯವಾಗಿ ಅಲಂಕೃತವಾಗಿದ್ದ ರಥ ಶ್ರೀಮಠದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರಗೆ ಸಾಗುತ್ತ ನೆರೆದಿದ್ದ ಸಹಸ್ರಾರು ಭಕ್ತರ ಕಣ್ಣಿಗೆ ಹಬ್ಬವನ್ನು ಉಂಟು ಮಾಡುತಿತ್ತು. ಆದರೆ ಈ ವರ್ಷ ಮಹಾಮಾರಿ ಕೊರೊನಾ ಇಡೀ ಭೂಮಂಡಲವನ್ನು ಆವರಿಸಿದ್ದರಿಂದ ಮಠದ ಇತಿಹಾಸದಲ್ಲೇ ಇಂದು ಸರಳವಾಗಿ ನಡೆದಿದ್ದು ಭಕ್ತರ ಮನಸ್ಸಿಗೆ ನೊವುಂಟುಮಾಡಿದೆ.

**ಜಾತ್ರೆ ಸಡಗರವಿಲ್ಲ :** ಹಿರೇಕಲ್ಮಠದ ಚನ್ನಪ್ಪಸ್ವಾಮಿ ರಥೋತ್ಸವದ ಜಾತ್ರೆ. ತಾಲ್ಲೂಕಿನಲ್ಲಿಯೇ ಅತಿ ದೊಡ್ಡ ಜಾತ್ರೆ ಮಠದ ಆವರಣ ಸೇರಿದಂತೆ ರಸ್ತೆ ಇಕ್ಕೆಲಗಳಲ್ಲಿ ಮಕ್ಕಳ ಆಟಿಕೆ ಸಾಮಾನುಗಳು ಹೆಣ್ಣುಮಕ್ಕಳು ಉಡುಗೆ-ಆಭರಣಗಳು ಬಗೆಬಗೆಯ ತಿಂಡಿ ತಿನಿಸುಗಳು ಪ್ರತಿ ವರ್ಷ ರಾರಾಜಿತ್ತಿದ್ದವು ಅವೆಲ್ಲವು ಇಂದು ಇಲ್ಲದಂತಾಗಿ ಬಿಕೋ ಎನ್ನುತ್ತಿತ್ತು.

## ರಾಣೇಬೆನ್ನೂರು : ಶಾಂತಿ ಸಮಿತಿ ಸಭೆ



ರಾಣೇಬೆನ್ನೂರು, ಆ.18- ಕೋವಿಡ್‌ನಿಂದಾಗಿ ಹಬ್ಬಗಳ ಸಾಂಪ್ರದಾಯಿಕ ಆಚರಣೆಯಲ್ಲಿ ಬದಲಾವಣೆ ಅನಿವಾರ್ಯ ಎಂದು ಹೆಚ್ಚುವರಿ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ಹೇಳಿದರು. ಇಲ್ಲಿನ ಶಹರ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಸಂಜೆ ಗಣೇಶ ಚತುರ್ಥಿ ಹಾಗೂ ಮೊಹೋರಂ ಹಬ್ಬದ ಪ್ರಯುಕ್ತ ಏರ್ಪಡಿಸಲಾಗಿದ್ದ ಶಾಂತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಾರ್ವಜನಿಕ ಗಣಪತಿ ಸಮಿತಿಯವರು ಈ ಬಾರಿ ತಮ್ಮ ಪ್ರದೇಶದ ದೇವಸ್ಥಾನ ಅಥವಾ ಉದ್ಯಾನಗಳಲ್ಲಿ ಸರಳವಾಗಿ ಪ್ರತಿಷ್ಠಾಪಿಸಲು ಅವಕಾಶ ನೀಡಲಾಗಿದೆ. ಸರಕಾರದ ಕೋವಿಡ್ ನಿಯಮಗಳನ್ನು ಚಾಚೂ ತಪ್ಪದೇ ಪ್ರತಿಯೊಬ್ಬರೂ ಪಾಲಿಸಬೇಕು ಎಂದರು.

ತಹಶೀಲ್ದಾರ್ ಬಸನಗೌಡ ಕೋಟೂರ, ಪೌರಾಯುಕ್ತ ಡಾ. ಮಹಾಂತೇಶ್, ನಗರಸಭೆ ಸದಸ್ಯ ಪುಟ್ಟಪ್ಪ ಮರಿಯಮ್ಮನವರ, ಜಮಾಲಸಾಬ್ ಅತ್ತಾರ ಮಾತನಾಡಿದರು. ಸಿಪಿಐ ಲಿಂಗನಗೌಡ ನೆಗಳೂರ, ವಿರುಪಾಕ್ಷಪ್ಪ, ಪಿಎಸ್‌ಐಗಳಾದ ಮೇಘರಾಜ, ಪ್ರಭು ಕೆಳಗಿನ ಮನಿ, ನಗರಸಭಾ ಸದಸ್ಯರುಗಳಾದ ಗಂಗಮ್ಮ ಹಾವನೂರ, ನಿಂಗರಾಜ ಕೋಡಿಹಳ್ಳಿ, ಸಿದ್ದಪ್ಪ ಬಾಗಿಲದವರ, ನೂರುಲ್ಲಾಖಾಜಿ, ಅಂಜುಮನ್ ಸಂಸ್ಥೆ ಮತ್ತು ಗಣೇಶೋತ್ಸವ ಸಮಿತಿ ಪದಾಧಿಕಾರಿಗಳು ಇದ್ದರು.

## ರಾಣೇಬೆನ್ನೂರಿನ ಲಯನ್ಸ್ ಕನ್ನಡ ಮಾಧ್ಯಮ ಶಾಲೆಗೆ ಶೇ.82.8 ಫಲಿತಾಂಶ

ರಾಣೇಬೆನ್ನೂರು, ಆ.18- ಲಯನ್ಸ್ ಕನ್ನಡ ಮಾಧ್ಯಮ ಪ್ರೌಢಶಾಲೆಯಲ್ಲಿ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆ ಫಲಿತಾಂಶ ಶೇ. 82.8 ಬಂದಿದೆ. ವಿದ್ಯಾರ್ಥಿಗಳಾದ ಸಚಿನ ದೇವೇಂದ್ರಪ್ಪ ರಿತ್ತಿ 605 (ಶೇ.96.8), ಭಾಗ್ಯ ಬಸವರಾಜ ಸಪ್ಪಾಳಿ 599 (ಶೇ.95.8), ಅಕ್ಷತಾ ಮಲ್ಲಿಕಾರ್ಜುನ ಮೈಲಾರ 597 (ಶೇ.95.52) ಅಂಕಗಳನ್ನು ಪಡೆದಿರುತ್ತಾರೆ. 9 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್‌ನಲ್ಲಿ, 35 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಹಾಗೂ 4 ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ.


# ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 17.08.2020ರಂದು ನಿಧನರಾದ
ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್
ಆಡಳಿತ ಮಂಡಳಿಯ ವೃತ್ತಿಪರ ನಿರ್ದೇಶಕರೂ,
ಹಿರಿಯ ಲೆಕ್ಕ ಪರಿಶೋಧಕರೂ ಆದ

**ಶ್ರೀ ವಿ. ಲಿಂಗರಾಜು**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.





**ಶ್ರೀ ಕೋಗುಂಡಿ ಬಕ್ಕೇಶಪ್ಪ** ಅಧ್ಯಕ್ಷರು

**ನಿರ್ದೇಶಕರುಗಳು :**

ಶ್ರೀ ಬಿ.ಸಿ. ಉಮಾಪತಿ — ಶ್ರೀ ಮತ್ತಿಹಳ್ಳಿ ವೀರಣ್ಣ
ಶ್ರೀ ಪಲ್ಲಾಗಟ್ಟಿ ಶಿವಾನಂದಪ್ಪ — ಶ್ರೀ ಅಂದನೂರು ಮುಪ್ಪಣ್ಣ
ಶ್ರೀ ಎಂ. ಚಂದ್ರಶೇಖರ್ — ಶ್ರೀ ದೇವರಮನೆ ಶಿವಕುಮಾರ್
ಶ್ರೀ ಟಿ.ಎಸ್. ಜಯರುದ್ರೇಶ್ — ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್
ಶ್ರೀಮತಿ ಸುರೇಖಾ ಎಂ. ಚಿಗಟೇರಿ — ಶ್ರೀ ಕಂಚಿಕೇರಿ ಮಹೇಶ್
ಶ್ರೀ ಎಸ್. ರಾಘವೇಂದ್ರ — ಶ್ರೀ ಇ.ಎಂ. ಮಂಜುನಾಥ
ಶ್ರೀ ವಿ. ವಿಕ್ರಮ್

**ವೃತ್ತಿಪರ ನಿರ್ದೇಶಕರು :**

ಶ್ರೀ ಮುಂಡಾಸ್ ವೀರೇಂದ್ರ, ಚಾರ್ಟರ್ಡ್ ಅಕೌಂಟೆಂಟ್

**ವಿಶೇಷ ಆಹ್ವಾನಿತರು :**

ಶ್ರೀ ಬೆಳ್ಳೂಡಿ ಮಂಜುನಾಥ್ — ಶ್ರೀ ಎಂ. ದೊಡ್ಡಪ್ಪ

ಶ್ರೀ ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು — ಶ್ರೀ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು
ಲಕ್ಷ್ಮಿ ಠೇವಣಿ ಸಂಗ್ರಹಕಾರರು ಹಾಗೂ ನಿವೃತ್ತ ಸಿಬ್ಬಂದಿ ವರ್ಗದವರು

**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**

ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ.



## ಭಾವಪೂರ್ಣ ಶ್ರದ್ಧಾಂಜಲಿ





ದಿನಾಂಕ 15-8-20ರಂದು ನಿಧನರಾದ


**ಶ್ರೀ ಪ್ರಶಾಂತ್ ವಿ. ಕುಲಕರ್ಣಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಡಿ.ವಿ. ಜಯರುದ್ರಪ್ಪ, ಸದಸ್ಯರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ.
✦ ಎಂ. ಅಂಜನ್‌ಕುಮಾರ್ ಶಾಮನೂರು.
✦ ಬಸವರಾಜ್ ನಿಟ್ಟೂರು ✦ ನಾಗನೂರು ಸಿದ್ದೇಶ್
✦ ಏಕಾಂತಪ್ಪ ದಾವಣಗೆರೆ ಹಾಗೂ ಸ್ನೇಹಿತರ ಬಳಗ



## ಚಿರಸ್ಮರಣೆ


ಲಿಂ. ಶ್ರೀ ಕೆ.ಆರ್. ಪಾಂಡುರಂಗರಾವ್ ಗುಜ್ಜರ್

ನೀವು ನಮ್ಮನ್ನಗಲಿ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆ ಮತ್ತು ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
ಪತ್ನಿ : ಶ್ರೀಮತಿ ಮುಕ್ತಾಬಾಯಿ ಜಿ.ಪಿ. ಮತ್ತು ಮಕ್ಕಳು, ಸೊಸೆಯಂದಿರು,
ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

**ಕೆ.ಆರ್. ಪಾಂಡುರಂಗರಾವ್ ಅಂಡ್ ಕೋ**

ಎಪಿಎಂಸಿ ಯಾರ್ಡ್, 'ಡಿ' ಬ್ಲಾಕ್, ದಾವಣಗೆರೆ - 3. ಮೊ: 94483-39383


## ನಂದಗೋಕುಲ ಶಾಲೆಗೆ ಶೇ.100 ಫಲಿತಾಂಶ

ದಾವಣಗೆರೆ,ಆ.14- 2019-20ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ನಗರದ ನಂದಗೋಕುಲ ಇಂಗ್ಲಿಷ್ ಮೀಡಿಯಂ ಹೈಸ್ಕೂಲ್ ಗೆ ಶೇ.100 ರಷ್ಟು ಫಲಿತಾಂಶ ಲಭಿಸಿದೆ.

ಕು.ಎಸ್. ಪ್ರಕೃತಿ ಶೇ.97.44 (609) ಅಂಕಗಳನ್ನು ಪಡೆಯುವುದರ ಮೂಲಕ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಪ್ರಕೃತಿ, ಕನ್ನಡದಲ್ಲಿ 125ಕ್ಕೆ 123, ಹಿಂದಿ ಮತ್ತು ಸಮಾಜ ವಿಷಯಗಳಲ್ಲಿ 100, ಸಮಾಜ ವಿಜ್ಞಾನದಲ್ಲಿ 99, ಇಂಗ್ಲಿಷ್ ನಲ್ಲಿ 94, ಗಣಿತದಲ್ಲಿ 94 ಅಂಕಗಳನ್ನು ಪಡೆದಿದ್ದಾಳೆ.

ಉತ್ತಮ ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿ ತಂದ ವಿದ್ಯಾರ್ಥಿಗಳನ್ನು ಶಾಲಾಭಿವೃದ್ಧಿ ಸಮಿತಿ ಶ್ರೀ ಮಾತಾ ವಿದ್ಯಾ ಸಂಸ್ಥೆ ಅಧ್ಯಕ್ಷ ವೈ.ಬಿ. ಸತೀಶ್, ಕಾರ್ಯದರ್ಶಿ ಬಿ.ಅನುಸೂಯ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ರೆಹಾನಾ ಬಾನು ನಾಸಿಕ ಅವರುಗಳು ಅಭಿನಂದಿಸಿದ್ದಾರೆ.

# ಸರ್ಕಾರಗಳು ಕಾರ್ಮಿಕ ಮತ್ತು ರೈತ ವಿರೋಧಿ ನೀತಿ ಅನುಕರಣೆ

ದಾವಣಗೆರೆ, ಆ.18- ಕೇಂದ್ರ-ರಾಜ್ಯ ಸರ್ಕಾರಗಳು ಕಾರ್ಮಿಕ ಮತ್ತು ರೈತ ವಿರೋಧಿ ನೀತಿ ಅನುಸರಿಸುತ್ತಿರುವುದಾಗಿ ಆರೋಪಿಸಿ ಜೆಸಿಟಿಯು ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಭಾರತ ಉಳಿಸಿ ಆಂದೋಲನದ ಅಂಗವಾಗಿ ಪಾಲಿಕೆ ಆವರಣದ ಹುತಾತ್ಮರ ಸ್ಮಾರಕ ಬಳಿ ಜಮಾಯಿಸಿದ್ದ ಪ್ರತಿಭಟನಾಕಾರರು, ಕೇಂದ್ರ-ರಾಜ್ಯ ಸರ್ಕಾರದ ರೈತ-ಕಾರ್ಮಿಕ-ಜನ ವಿರೋಧಿ ನೀತಿ, ಕ್ರಮಗಳ ಖಂಡಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.




**ನಗರದಲ್ಲಿ ಜೆಸಿಟಿಯುನಿಂದ ಭಾರತ ಉಳಿಸಿ ಆಂದೋಲನ**

ಇದೇ ವೇಳೆ ಮಾತನಾಡಿದ ಸಂಘಟನೆ ಹಿರಿಯ ಮುಖಂಡ ಎಚ್.ಕೆ. ರಾಮಚಂದ್ರಪ್ಪ, ಕಾರ್ಖಾನೆಗಳ ಕಾಯ್ದೆ, ಕೈಗಾರಿಕಾ ವಿವಾದ ಕಾಯ್ದೆ, ಗುತ್ತಿಗೆ ಕಾರ್ಮಿಕರ(ನಿಯಂತ್ರಣ ಮತ್ತು ನಿಷೇಧ) ಕಾಯ್ದೆಗಳ ಮಾದರಿ ಸ್ಥಾಯಿ ಆದೇಶಗಳ ನಿಗದಿತ ಅವದಿಯ ಕೆಲಸ ಅಳವಡಿಸಲು ತರಲಾದ ಪ್ರಗತಿ ವಿರೋಧಿ ತಿದ್ದುಪಡಿಗಳು, ವ್ಯತ್ಯಾಸ ತುಟ್ಟಿ ಭತ್ಯೆ ಮುಂದೂಡುವಿಕೆ ಆದೇಶಗಳನ್ನು ತಕ್ಷಣ ಹಿಂಪಡೆಯಬೇಕು. ಭೂ ಸಂಬಂಧಿ ಕಾನೂನು, ಎಪಿಎಂಸಿ ಕಾಯ್ದೆ, ಅಗತ್ಯ ಸಾಮಗ್ರಿ ಕಾಯ್ದೆಗಳಿಗೆ ತಿದ್ದುಪಡಿ ತರಲು ಹೊರಡಿಸಿದ ಸುಗ್ರೀವಾಜ್ಞೆ ತಿಪ್ಪೆಗೆಸೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ, ಸಿಐಟಿಯು, ಸಿಪಿಐಎಂ, ಎಐಯುಟಿಯುಸಿ ಸೇರಿದಂತೆ ಹತ್ತಾರು ಎಡ ಪಕ್ಷ ಸಂಘಟನೆಗಳ ಮುಖಂಡರಾದ ಮಂಜುನಾಥ ಕೈದಾಳೆ, ಕೆ. ಎಚ್. ಆನಂದರಾಜು, ಆನಂದರಾಜ, ಆವರಗೆರೆ ಎಚ್.ಜಿ. ಉಮೇಶ, ತಿಪ್ಪೇಸ್ವಾಮಿ ಅಣಬೇರು, ಆವರಗೆರೆ ಚಂದ್ರು, ಆವರಗೆರೆ ವಾಸು, ಐರಣಿ ಚಂದ್ರು, ರಂಗನಾಥ ಸೇರಿದಂತೆ ಇತರರು ಭಾಗವಹಿಸಿದ್ದರು.

# ಹರಪನಹಳ್ಳಿ : ಬಸವರಾಜ್ ಭಂಡಾರಿ ದೇಶಭಕ್ತಿ ಗೀತೆಗೆ ಮೆಚ್ಚುಗೆ



ಹರಪನಹಳ್ಳಿ, ಆ.18- ತಾಲ್ಲೂಕಿನ ಕೂಲಹಳ್ಳಿ ಗ್ರಾಮದ ಗಾನ ಕೋಗಿಲೆ, ಸ್ವರ ವೈಭವ ಹಿಂದೂಸ್ತಾನಿ ಸಂಗೀತ ಪಾಠ ಶಾಲೆಯ ಸಾರಥಿ, ಪ್ರತಿಷ್ಠಿತ ಪರ್ಲ್ ಪಬ್ಲಿಕ್ ಶಾಲೆಯ ಸಂಗೀತ ಶಿಕ್ಷಕ ಬಸವರಾಜ್ ಭಂಡಾರಿ ಅವರು 74ನೇ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ 'ಬೆಳಗಲಿ ದೀವಿಗೆ ಭಾರತ ಮಾತೆಗೆ' ಎಂಬ ದೇಶಭಕ್ತಿ ಗೀತೆಯನ್ನು ಹಾಡುವ ಮೂಲಕ ದೇಶದ ಮೇಲಿರುವ ಅಭಿಮಾನ ಮತ್ತು ಗೌರವವನ್ನು ವ್ಯಕ್ತಪಡಿಸಿದರು.

ಭಂಡಾರಿ ಅವರು ಹಾಡಿದ ಗೀತೆ ಸಾಮಾಜಿಕ ಜಾಲತಾಣಗಳಲ್ಲಿ ತುಂಬಾ ವೈರಲ್ ಆಗಿದ್ದು, ಸಾವಿರಾರು ಕೇಳುಗರ ಮೆಚ್ಚುಗೆಗೆ ಪಾತ್ರವಾಗಿದೆ. ಗೀತೆಗೆ ಹಗರಬೊಮ್ಮನಹಳ್ಳಿಯ ಪ್ರದೀಪ್ ಅಕ್ಕಸಾಲಿ ಸಂಗೀತ ನೀಡಿದ್ದು, ಸಾಹಿತ್ಯವನ್ನು ಹಗರಿಬೊಮ್ಮನಹಳ್ಳಿಯ ಸಂದೇಶ್ ಕುಲಕರ್ಣಿ ಬರೆದಿದ್ದಾರೆ.

ಕಳೆದ ವರ್ಷ ಅಕ್ಟೋಬರ್ 2 ಗಾಂಧೀಜಯಂತಿ ಪ್ರಯುಕ್ತ ಗಾಂಧೀಜಿ ಅವರಿಗೆ ಪ್ರಿಯವಾದ ಬೆಂಗಾಲಿ ಭಾಷೆಯಲ್ಲಿರುವ ರಘುಪತಿ ರಾಘವ ರಾಜಾರಾಮ್ ಭಜನೆಯನ್ನು ಹಾಡಿದ್ದು, ಮಹಾಂತೇಶ್ ಹೆಚ್. ಸೊಪ್ಪಿನವರ್ ಅವರಿಂದ ಭಜನೆಯನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿಸಿ ಸ್ವತಹ ತಾವೇ ಹಾಡಿದ್ದರು.

ಜೀ ಕನ್ನಡದ ಸರಿಗಮ ಖ್ಯಾತಿಯ ಡಾ. ಶ್ರೀರಾಮ್ ಕಾಸರ್, ಬಳ್ಳಾರಿ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸದಸ್ಯರು, ಪ್ರಕೃತಿ ವಿದ್ಯಾಸಂಸ್ಥೆ ಅಧ್ಯಕ್ಷ ಶಶಿಧರ್ ಪೂಜಾರ್, ಕರವೇ ತಾಲ್ಲೂಕು ಅಧ್ಯಕ್ಷ ಬಸವರಾಜ್ ಹುಲಿಯಪ್ಪನವರ್, ಕನ್ನಡ ಉಪನ್ಯಾಸಕ ಹೆಚ್. ಮಲ್ಲಿಕಾರ್ಜುನ್, ಪರ್ಲ್ ಶಾಲಾ ಪರಿವಾರದವರು, ಸಂಗೀತ ಪಾಠಶಾಲೆಯವರು, ಅಭಿಮಾನಿಗಳು ಭಂಡಾರಿ ಅವರಿಂದ ಮತ್ತಷ್ಟು ಗೀತೆಗಳು ಹೊರಬರಲಿ ಎಂದು ಶುಭ ಹಾರೈಸಿದ್ದಾರೆ.

# ಕೋವಿಡ್ ಮಾರ್ಗಸೂಚಿಯನ್ನು ನಾಗರಿಕರು ಪಾಲಿಸಲು ದಿನೇಶ್ ಕರೆ



ದಾವಣಗೆರೆ, ಆ. 18- ಕೊರೊನಾ ಸಾಂಕ್ರಾಮಿಕ ರೋಗ ಸಮುದಾಯಕ್ಕೆ ಹರಡಿದ್ದು, ನಾಗರೀಕರು ನಿರ್ಲಕ್ಷ್ಯ ವಹಿಸದೇ ಸರ್ಕಾರಗಳು ಸೂಚಿಸಿರುವ ಕೋವಿಡ್-19 ಮಾರ್ಗಸೂಚಿಯನ್ನು ಎಲ್ಲಾ ನಾಗರಿಕರು ಪಾಲಿಸುವಂತೆ ಜಿಲ್ಲಾ ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ಮನವಿ ಮಾಡಿದ್ದಾರೆ.

ಈಗಾಗಲೇ ಕೊರೊನಾ ಸಾಂಕ್ರಾಮಿಕ ರೋಗ ದಿನದಿಂದ ದಿನಕ್ಕೆ ಹರಡುತ್ತಿದ್ದು, ಆಡಳಿತ ಕೈಚೆಲ್ಲುವ ಮುನ್ನವೇ ನಾಗರೀಕರು ಜೀವನಕ್ಕಿಂತ ಜೀವ ಮುಖ್ಯ ಎಂಬುದನ್ನು ತಿಳಿದು ಹಾಗೂ ನಮ್ಮ ದೇಶಕ್ಕೆ, ರಾಜ್ಯಕ್ಕೆ ಬಂದಿದ್ದ ಕೊರೊನಾ ಇಂದು ನಮ್ಮ ಮನೆ ಬಾಗಿಲಿಗೆ ಬಂದಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪರಸ್ಪರ ಅಂತರ ಕಾಪಾಡಿಕೊಂಡು ಮಾಸ್ಕ್ ಧರಿಸಬೇಕು. ಅನಾವಶ್ಯಕವಾಗಿ ಓಡಾಡದೇ ಅವಶ್ಯಕತೆ ಇರುವವರು ಮಾತ್ರ ತಮ್ಮ ಕೆಲಸಗಳಲ್ಲಿ ಭಾಗವಹಿಸಿ ಎಂದಿರುವ ಅವರು ಆದಷ್ಟು ನಾಗರೀಕರು ಮನೆಯಿಂದ ಹೊರಬರದೇ ಮನೆಯಲ್ಲಿರುವುದು ಕ್ಷೇಮ ಎಂದು ತಿಳಿಸಿದ್ದಾರೆ.

ಕೊರೊನಾ ಸಾಂಕ್ರಾಮಿಕ ರೋಗದಿಂದ ಮೃತರಾದ ವ್ಯಕ್ತಿಗಳ ಅಂತ್ಯಸಂಸ್ಕಾರವನ್ನು ಬೇಕಾಬಿಟ್ಟಿಯಾಗಿ ನೆರವೇರಿಸುತ್ತಾರೆಂದು ಅವರ ಕುಟುಂಬವರ್ಗದಲ್ಲಿ ಭಯಬೀತಿಯನ್ನುಂಟು ಮಾಡಿದ್ದು, ಜಿಲ್ಲಾಡಳಿತವು ಗೌರವಯುತವಾಗಿ ಅಂದರೆ ಮೃತ ಕುಟುಂಬ ವರ್ಗದವರಿಗೆ ಪಿಪಿಇ ಕಿಟ್ ಧರಿಸಿ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಿ ವಿಧಿ-ವಿಧಾನಗಳನ್ನು ನೆರವೇರಿಸಲು ಅನುವು ಮಾಡಿಕೊಡಬೇಕೆಂದು ದಿನೇಶ್ ಆಗ್ರಹಿಸಿದ್ದಾರೆ.

# ರಾಣೇಬೆನ್ನೂರು : ಖನ್ನೂರ ವಿದ್ಯಾನಿಕೇತನ ಸ್ಕೂಲ್‌ನಲ್ಲಿ ಕೃಷ್ಣ ಜನ್ಮಾಷ್ಟಮಿ

ರಾಣೆಬೆನ್ನೂರು, ಆ.14- ಖನ್ನೂರ ವಿದ್ಯಾನಿಕೇತನ ಸ್ಕೂಲ್ ವತಿಯಿಂದ ಆನ್‌ಲೈನ್ ವೇದಿಕೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸ ಲಾಯಿತು. ಆನ್‌ಲೈನ್ ಕಾರ್ಯಕ್ರಮದಲ್ಲಿ ಶಾಲೆಯ ಹಲವಾರು ಮಕ್ಕಳು, ಪೋಷಕರು ಮತ್ತು ಎಲ್ಲ ಸಿಬ್ಬಂದಿಗಳು ಪಾಲ್ಗೊಂಡಿದ್ದರು. ಖನ್ನೂರ ಸೊಸೈಟಿ ಕಾರ್ಯದರ್ಶಿ ಡಾ. ಪ್ರವೀಣ ಎಂ. ಖನ್ನೂರ, ಖಜಾಂಚಿ ಡಾ. ಶೈಲಶ್ರೀ ಪಿ. ಖನ್ನೂರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಿತು.

ಪ್ರಾಂಶುಪಾಲ ಡಾ. ಮಹಾಂತೇಶ ಆರ್. ಕಮ್ಮಾರ ಶ್ರೀ ಕೃಷ್ಣನ ಅವತಾರಗಳ ಕುರಿತು ಹೇಳಿದರು. ಸಂಸ್ಥೆ ಅಧ್ಯಕ್ಷ ಎಂ.ಎಂ. ಖನ್ನೂರ ಶ್ರೀ ಕೃಷ್ಣ ಮತ್ತು ಸುಧಾಮನ ಗೆಳೆತನ ಕುರಿತು ಮಾತನಾಡಿದರು. ಖನ್ನೂರ ವಿದ್ಯಾನಿಕೇತನ ಪ್ರೀಪ್ರೈಮರಿ ಸ್ಕೂಲ್‌ನ ಮುಖ್ಯ ಶಿಕ್ಷಕಿ ಲೀಲಾವತಿ ಕಾರ್ಯಕ್ರಮ ಕುರಿತು ಮಾತನಾಡಿದರು.

ಸುಧಾ ಗೊಂಡ್ಕರ್ ಪ್ರಾರ್ಥಿಸಿದರು. ಶಿಕ್ಷಕಿ ಕುಮಾರಿ, ದಿಯಾಲ್ ಕೌರ್ ಶ್ರೀಕೃಷ್ಣನ ಭಕ್ತಿಗೀತೆಗಳನ್ನು ಹಾಡಿದರು. ಶೃತಿ ಬಳ್ಳಾರಿ ಸ್ವಾಗತಿಸಿದರು. ಉಮಾ ಶೀಲವಂತ ವಂದಿಸಿದರು. ಶಿಕ್ಷಕಿ ಪಲ್ಲವಿ ಕಟ್ಟಿಮನಿ ನಿರೂಪಿಸಿದರು.

# ಹಾನಿಗೊಳಗಾದ ಮನೆಗೆ ಕಾಂಗ್ರೆಸ್ ನಿಯೋಗ ಭೇಟಿ



ದಾವಣಗೆರೆ, ಆ. 18 - ನಗರದ ದುರ್ಗಾಂಬಿಕಾ ದೇವಸ್ಥಾನದ ಬಳಿಯ ದೇವಾಂಗ ಪೇಟೆಯಲ್ಲಿ ಮಳೆಯಿಂದಾಗಿ ಸೌಭಾಗ್ಯ ಎಂಬುವವರಿಗೆ ಸೇರಿದ ಮನೆ ಭಾಗಶಃ ಹಾನಿಗೊಳಗಾದ ಹಿನ್ನೆಲೆಯಲ್ಲಿ ಶಾಸಕ ಡಾ।। ಶಾಮನೂರು ಶಿವಶಂಕರಪ್ಪ ಮತ್ತು ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ನಿಯೋಗವು ಇಂದು ಭೇಟಿ ನೀಡಿ, ಪರಿಹಾರವನ್ನು ಶೀಘ್ರ ವಿತರಿಸುವಂತೆ ತಾಲ್ಲೂಕು ಕಚೇರಿ ಅಧಿಕಾರಿಗಳಿಗೆ ತಿಳಿಸಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ದೇವರಮನಿ ಶಿವಕುಮಾರ್, ವಿನಾಯಕ, ಜಿ.ಡಿ.ಪ್ರಕಾಶ್, ಮಾಜಿ ಮಹಾಪೌರರಾದ ಶ್ರೀಮತಿ ಅನಿತಾಬಾಯಿ ಮಾಲತೇಶ್, ತಾಲ್ಲೂಕು ಕಚೇರಿಯ ಆರ್.ಐ.ಕೇಶವಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

# ಕಾನೂನು ಪರೀಕ್ಷೆ ರದ್ದತಿಗೆ ಆಗ್ರಹಿಸಿ ವಿದ್ಯಾರ್ಥಿಗಳಿಂದ ಇಂದು ಮನವಿ

ಪ್ರಥಮ ಹಾಗೂ ದ್ವಿತೀಯ ವರ್ಷದ ಕಾನೂನು ಪರೀಕ್ಷೆಗಳನ್ನು ರದ್ದುಪಡಿಸಿ ಮುಂದಿನ ತರಗತಿಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್ ಎಫ್ ಐ ಹಾಗೂ ಎಐಎಸ್ ಎಫ್ ಜಿಲ್ಲಾ ಸಮಿತಿಯ ಕಾನೂನು ವಿದ್ಯಾರ್ಥಿಗಳ ವಿಭಾಗದ ವತಿಯಿಂದ ಉಪ ವಿಭಾಗಾಧಿಕಾರಿಗಳಿಗೆ ಇಂದು ಮನವಿ ಸಲ್ಲಿಸಲಾಗುವುದು ಎಂದು ಸಂಘಟನೆಯ ಜಿಲ್ಲಾ ಸಂಚಾಲಕ ಲಕ್ಷ್ಮಣ್ ರಾಮಾವತ್ ತಿಳಿಸಿದ್ದಾರೆ.

ಒಂದು ವೇಳೆ ಪರೀಕ್ಷೆಗಳನ್ನು ನಡೆಸಿದರೆ ಪರೀಕ್ಷಾ ಶುಲ್ಕವನ್ನು ಪಾವತಿಸದೆ ಪರೀಕ್ಷೆಯನ್ನು ಬಹಿಷ್ಕರಿಸುವ ಹೋರಾಟ ಮಾಡಲಾಗುವುದು. ಇಂದು ಬೆಳಿಗ್ಗೆ 11 ಗಂಟೆಗೆ ಉಪವಿಭಾಗಾಧಿಕಾರಿಗಳ ಮೂಲಕ ರಾಜ್ಯ ಕಾನೂನು ವಿವಿ ಕುಲಪತಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಎಐಎಸ್ ಎಫ್ ನ ರಾಜ್ಯ ಕಾರ್ಯದರ್ಶಿ ರಮೇಶ್ ತಿಳಿಸಿದ್ದಾರೆ.

# ರಾಜ್ಯದಲ್ಲಿ ಶಿವಸೇನೆ ನಿಷೇಧಿಸುವಂತೆ ಆಗ್ರಹ



ದಾವಣಗೆರೆ, ಆ.18- ಛತ್ರಪತಿ ಶಿವಾಜಿ ಮಹಾರಾಜರ ಪುತ್ಥಳಿ ಸ್ಥಾಪನೆ ನೆಪದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಗೂಂಡಾಗಿರಿ ಮಾಡಿದ ಶಿವಸೇನೆಯನ್ನು ರಾಜ್ಯದಲ್ಲಿ ನಿಷೇಧಿಸುವಂತೆ ಒತ್ತಾಯಿಸಿ ಕರ್ನಾಟಕ ನವ ನಿರ್ಮಾಣ ಸೇನೆ ಜಿಲ್ಲಾ ಘಟಕದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದ ಬಳಿ ಜಮಾಯಿಸಿದ್ದ ಸೇನೆ ಕಾರ್ಯಕರ್ತರು, ಶಿವಸೇನೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ನಂತರ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಸೇನೆ ಜಿಲ್ಲಾಧ್ಯಕ್ಷ ಕೆ.ಎನ್. ವೆಂಕಟೇಶ್, ಬೆಳಗಾವಿ ಜಿಲ್ಲೆ ಮಣಗುತ್ತಿ ಗ್ರಾಮದಲ್ಲಿ ಶಿವಾಜಿ ಪುತ್ಥಳಿ ಸ್ಥಾಪನೆ ನೆಪದಲ್ಲಿ ಕನ್ನಡಿಗರ ಮೇಲೆ ಶಿವಸೇನೆಯವರು ಪುಂಡಾಟಿಕೆ ಮಾಡುತ್ತಿದ್ದು, ಕನ್ನಡಿಗರ ಸ್ವಾಭಿಮಾನದ ನೆಲವಾದ ಬೆಳಗಾವಿಯಲ್ಲಿ ಶಿವಾಜಿ ಹೆಸರಿನಲ್ಲಿ ಶಿವಸೇನೆ ಪುಂಡರು ಪದೇ ಪದೇ ಕನ್ನಡಿಗರ ಸ್ವಾಭಿಮಾನಕ್ಕೆ ಧಕ್ಕೆ ತಂದು, ಕನ್ನಡಿಗರನ್ನು ಅವಮಾನಿಸುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೇನೆ ಜಿಲ್ಲಾ ಉಪಾಧ್ಯಕ್ಷ ಶೇರ್ ಅಲಿ ಮಾತನಾಡಿ, ಶಿವಸೇನೆ ಸಂಘಟನೆಯ ಪುಂಡರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆಯ ಮುಖಂಡರಾದ ರಾಘವೇಂದ್ರ, ಕೆ.ಎನ್. ರಮೇಶ, ಸೈಯದ್ ಆರೀಫ್, ಪ್ರಸನ್ನ, ಅಯಾಜ್ ಖಾನ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮಳೆ ಆರ್ಭಟ : ಗೋಡೆ ಕುಸಿತ



**ಸೂರು ಕಳೆದುಕೊಂಡ ಕುಟುಂಬ**

ದಾವಣಗೆರೆ, ಆ.10- ಆಶ್ಲೇಷ ಮಳೆಯ ಆರ್ಭಟಕ್ಕೆ ಇಲ್ಲಿನ ಹಳೇ ನಗರದ ಐರಣಿ ಮಠದ ಸಮೀಪವಿರುವ ಮನೆಯೊಂದರ ಗೋಡೆ ಕುಸಿದ ಪರಿಣಾಮ ಕುಟುಂಬವೀಗ ಸೂರು ಕಳೆದುಕೊಂಡಿದೆ.

ಪೂರ್ಣಿಮ ಟಿ.ಯು. ನಾಗರಾಜ್ ಎಂಬುವವರ ಮನೆಯ ಮಣ್ಣಿನ ಗೋಡೆ ಮಳೆ ನೀರಿನಿಂದ ಕುಸಿದು ಬಿದ್ದಿದೆ. ಈ ವೇಳೆ ಮನೆ ಸದಸ್ಯರು ಎಚ್ಚರವಾಗಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇದೀಗ ಇಬ್ಬರು ಮಕ್ಕಳೊಂದಿಗೆ ಪಕ್ಕದ ಮನೆಯವರ ಮನೆ ಕೋಣೆಯೊಂದರಲ್ಲಿ ಸದ್ಯ ಆಶ್ರಯ ಪಡೆದುಕೊಂಡಿದ್ದಾರೆ. ಜಾಗ ಇಲ್ಲದ ಕಾರಣ ಬಿದ್ದಿರುವ ಮನೆ ಕೋಣೆಯೊಂದರಲ್ಲೇ ಈಗಲೂ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಂಡಿದ್ದು, ಉಳಿದ ಮನೆ ಗೋಡೆಯು ಯಾವಾಗಬೇಕಾದರೂ ಕುಸಿದು ಬೀಳಬಹುದು ಎಂಬ ಆತಂಕದಲ್ಲಿದ್ದಾರೆ.

ಬ್ಯಾಂಕೊಂದರಲ್ಲಿ ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುವ ಟಿ.ಯು. ನಾಗರಾಜ್‌ಗೆ ಕೆಲಸದಲ್ಲಿ ರಜೆಯೂ ಸಿಗುತ್ತಿಲ್ಲ. ಅತ್ತ ಕಳೆದ 3 ತಿಂಗಳಿನಿಂದ ವೇತನವೂ ಇಲ್ಲದೆ ಜೀವನ ನಿರ್ವಹಣೆಗೆ ಪರದಾಡುವ ಸ್ಥಿತಿ ಎದುರಾಗಿದ್ದು, ಇದೀಗ ಮನೆಯೂ ಇಲ್ಲದೆ ಸಂತ್ರಸ್ತರಾಗಿದ್ದಾರೆ.

# ಪ್ಲಾಸ್ಮಾ ದಾನಕ್ಕೆ ಮುಂದಾದ ಕುಣಿಗಲ್ ಶಾಸಕ ಡಾ. ರಂಗನಾಥ್

ಬೆಂಗಳೂರು, ಆ. 18 - ಕಳೆದ ತಿಂಗಳು ಕೊರೊನಾ ಸೋಂಕಿನಿಂದ ಸಂಪೂರ್ಣ ಗುಣಮುಖರಾದ ಕುಣಿಗಲ್ ಶಾಸಕ ಡಾ. ರಂಗನಾಥ್ ಅವರು ತಮ್ಮ ದೇಹದ ಪ್ಲಾಸ್ಮಾವನ್ನು ಇಬ್ಬರು ಕೊರೊನಾ ರೋಗಿಗಳಿಗೆ ದಾನ ಮಾಡಲು ನಿರ್ಧರಿಸಿದ್ದಾರೆ. ದಿನಾಂಕ 19-08-2020 ರಂದು ಬುಧವಾರ ಬೆಳಗ್ಗೆ 10.30 ಕ್ಕೆ ಬೆಂಗಳೂರಿನ ಕಾರ್ಪೊರೇಷನ್ ಕೇಂದ್ರ ಕಚೇರಿ ಹಿಂಭಾಗದಲ್ಲಿರುವ ಎಚ್.ಸಿ.ಜಿ. ಕ್ಯಾನ್ಸರ್ ಆಸ್ಪತ್ರೆಯಲ್ಲಿ ಅವರು ಪ್ಲಾಸ್ಮಾ ದಾನ ಮಾಡುತ್ತಿದ್ದಾರೆ. ಈ ರೀತಿ ಪ್ಲಾಸ್ಮಾ ದಾನ ಮಾಡುತ್ತಿರುವ ದೇಶದ ಮೊದಲ ಶಾಸಕ ಡಾ. ರಂಗನಾಥ್ ಅವರಾಗಿದ್ದಾರೆ.

## ಕ-ರುಣಾಳು ಕರ್ತಾರ



ಕಡು ಬಡತನದ
ಬದುಕಿನಲ್ಲೂ
ಕಲ್ಪನೆಯ ಕಲ್ಲ ದೇವರಿಗೆ
ಕವಳ ಬಡಿಸುವ
ಬಡಿವಾರ
ಕರ್ತಾರನಿಗಿದು ಸಲ್ಲದಾ
ಉಪಚಾರ.

ಕರೆದು ನೋಡು ಪ್ರೀತಿಯಲಿ
ಕರವ ಜೋಡಿಸಿ ಶಿರವ ಬಾಗಿಲು
ಕಲೆತು ಹೃದಯದಲೇ ಇರುವ ದೇವನಿಗೆ
ಕರ್ತಾರನಿಗಿದು ಸಲ್ಲುವಾ ಉಪಚಾರ.

ಕಳವಳದಿ ಕರೆಯನಾಲಿಸಿ
ಕರುಳಲವಿತು ಹಸಿವ ಹಿಂಗಿಸುವ
ಕರುಣಾಳು ಕಲ್ಪತರು
ಕರ್ತಾರನಿಗಿದು ದಿನನಿತ್ಯ ವ್ಯವಹಾರ.

ಕಲಿಯುಗದಿ ಕಲಿತವರು
ಕರಕೊಟ್ಟು ಕರೆಸುವರು
ಕರವ ಜೋಡಿಸಿ
ಕೋರಿಕೆಯನರ್ಪಿಸಲು
ಕರ್ತಾರನೊಪ್ಪನೀ ಮಧ್ಯಸ್ಥಿಕೆಯ
ವ್ಯವಹಾರ.

ಕಸಿದು ಕಾರ್ಮಿಕನ ಕಿಲುಬು ಕಾಸನು
ಕಟ್ಟುವನು ಧನಿಕ ದೇಗುಲವ
ಕತ್ತಿಗೆ ಹೇರುವನು
ಸ್ವರ್ಣದ ಹಾರವನು
ಕರ್ತಾರಗೆ ಸಲ್ಲದೀ ಭಾರದ ಹೊರೆಯು.

ಕರ್ತಾರ ಬಯಸುವನು ಬಳಲಿದಾ
ಭಾಗ್ಯಹೀನರ
ಕರಪಿಡಿದು ಮುನ್ನಡೆಸಿ ದಾಸೋಹ
ಭಾವದಿ
ಕಸುವ ನೀಡಿ ಕಳೆಯ ತುಂಬಿ
ಕನಸನವರ ನನಸ ಮಾಡುವ ಪರಿಯ.!

- ಅಣ್ಣಾಪುರ ಶಿವಕುಮಾರ್
ಲಿಬರ್ಟಿವಿಲ್,
ಇಲಿನಾಯ್, ಯು.ಎಸ್.ಎ.

# ಪಿಎಫ್‌ಐ-ಎಸ್‌ಡಿಪಿಐ ನಿಷೇಧಕ್ಕೆ ವಿಹೆಚ್‌ಪಿ ಒತ್ತಾಯ

ದಾವಣಗೆರೆ, ಆ.18- ಬೆಂಗಳೂರಿನ ಕೆಜಿ ಹಳ್ಳಿ ಮತ್ತು ಡಿಜಿ ಹಳ್ಳಿ ಘಟನೆ ಹಿಂದೆ ಕೈವಾಡವಿರುವ ಪಿಎಫ್‌ಐ, ಎಸ್‌ಡಿಪಿಐ ಸಂಘಟನೆಗಳನ್ನು ನಿಷೇಧಿಸುವಂತೆ ವಿಶ್ವ ಹಿಂದು ಪರಿಷತ್ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದೆ.

ಬೆಂಗಳೂರಿನ ಕಾವಲ್ ಭೈರಸಂದ್ರದ ಘಟನೆಗೆ ಕಾರಣರಾದ, ಕೃತ್ಯ ಎಸಗಿದ ದುಷ್ಕರ್ಮಿಗಳ ವಿರುದ್ಧ ಉತ್ತರ ಪ್ರದೇಶದ ಮಾದರಿಯಲ್ಲಿ ದೇಶದ್ರೋಹ ಹಾಗೂ ಗೂಂಡಾ ಕಾಯ್ದೆಯಡಿ ಕೇಸ್ ದಾಖಲಿಸುವಂತೆ ಪರಿಷತ್ ನ ನಗರ ಅಧ್ಯಕ್ಷ ರವೀಂದ್ರ ಪತ್ರಿಕಾಗೋಷ್ಠಿಯಲ್ಲಿ ಆಗ್ರಹಿಸಿದರು.

ಶಾಸಕ ಅಖಂಡ ಶ್ರೀನಿವಾಸಮೂರ್ತಿ ಮೇಲೆ ಹಲ್ಲೆಗೆ ಯತ್ನಿಸಿದ್ದು, ಮನೆಗೆ ಬೆಂಕಿ ಹಚ್ಚಿ ನಾಶ ಪಡಿಸಿರುವುದು, ಇಡೀ ಶಾಸಕರ ಕುಟುಂಬಕ್ಕೆ ಜೀವ ಬೆದರಿಕೆ ಹಾಕಿರುವುದು ಅಕ್ಷಮ್ಯ ಅಪರಾಧ. ಆದರೆ, ಇಂತಹ ಪೈಶಾಚಿಕ ಕೃತ್ಯವನ್ನು ಸ್ವತಃ ಕಾಂಗ್ರೆಸ್ ಪಕ್ಷದ ಮುಖಂಡರು ಸಮರ್ಥಿಸಿಕೊಂಡು ಈ ವಿಚಾರದಲ್ಲಿ ಹಿಂದೂಗಳನ್ನು ಎಳೆ ತಂದಿದ್ದು ಖಂಡನೀಯ ಎಂದು ಆಕ್ಷೇಪಿಸಿದರು.

ಸಂಘಟನೆ ಮುಖಂಡರಾದ ಡಿ. ಬಸವರಾಜ ಗುಬ್ಬಿ, ಯುವ ವಕೀಲ ಎಸ್. ರಾಘವೇಂದ್ರ ರಾವ್, ಎನ್. ಮಲ್ಲೇಶ್, ಎಸ್‌ಓಜಿ ಕಾಲೋನಿ ಹನುಮಂತಪ್ಪ ಮತ್ತಿತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಕೃಷ್ಣನ ಆದರ್ಶ ಹಾಗೂ ತತ್ವಗಳು ಇಂದಿಗೂ ಪ್ರಸ್ತುತ




ದಾವಣಗೆರೆ, ಆ.18- ನಗರದ ಕುವೆಂಪು ಕನ್ನಡ ಭವನದ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಸಭಾಂಗಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಕೃಷ್ಣ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.

ಶ್ರೀ ಕೃಷ್ಣನ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿದ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀತಮಿ ದೀಪಾ ಜಗದೀಶ್ ಮಾತನಾಡಿ, ಭಾರತದ ಪುರಾಣಗಳಲ್ಲಿ ಕೃಷ್ಣ ಹಾಗೂ ರಾಮ ಇಬ್ಬರೂ ಬಹಳ ಶ್ರೇಷ್ಟ ವ್ಯಕ್ತಿತ್ವ ಹೊಂದಿದವರು. ಕೃಷ್ಣನ ಆದರ್ಶ ಹಾಗೂ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ನಾವೆಲ್ಲರೂ ಅವರ ಆದರ್ಶಗಳನ್ನು ಪಾಲಿಸಿಕೊಂಡು ಹೋದಲ್ಲಿ ಬದುಕು ಹಸನಾಗುತ್ತದೆ ಎಂದರು.

ಜಿಲ್ಲಾ ಯಾದವ ಸಮುದಾಯದ ಅಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ದೇವರನ್ನು ಕೂಡ ದೂರ ಇಡುವಂತಹ ಪರಿಸ್ಥಿತಿ ಎದುರಾಗಿದ್ದು, ಪ್ರಸ್ತುತ ಸಂದರ್ಭದಲ್ಲಿ ಭಗವಂತನ ಸ್ಮರಣೆ ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಕೃಷ್ಣ ಜಯಂತಿ ಕಾರ್ಯಕ್ರಮವನ್ನು ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಗಿದೆ ಎಂದು ತಿಳಿಸಿದರು.

ತಹಶೀಲ್ದಾರ್ ಗಿರೀಶ್, ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಸಹಾಯಕ ನಿರ್ದೇಶಕರಾದ ರವಿಚಂದ್ರ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಡಿ. ಅಶೋಕ ಕುಮಾರ್, ಜಿಲ್ಲಾ ಯಾದವ ಸಮುದಾಯದ ಕಾರ್ಯದರ್ಶಿ ಗಂಗಾಧರಪ್ಪ ಹಾಗೂ ಉಪಾಧ್ಯಕ್ಷ ಕೆಂಚವೀರಪ್ಪ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಎಐಐಎಂಎಸ್‌ಗೆ ದಾಖಲಾದ ಷಾ



ನವದೆಹಲಿ, ಆ. 18 – ಕೇಂದ್ರ ಗೃಹ ಸಚಿವ ಅಮಿತ್ ಷಾ ಕೊರೊನಾ ಕಾರಣ ದಿಂದಾಗಿ ಎಐಐ ಎಂಎಸ್‌ಗೆ ದಾಖಲಾಗಿದ್ದಾರೆ. ಇತ್ತೀಚೆಗೆ ಕೊರೊ ನಾದಿಂದ ಚೇತರಿಸಿಕೊಂಡಿದ್ದ ಅವರಲ್ಲಿ ಬಳಲಿಕೆ ಹಾಗೂ ಬಾಧೆ ಕಾಣಿಸಿಕೊಂಡ ನಂತರ ಆಸ್ಪತ್ರೆಗೆ ದಾಖಲಾಗಿದ್ದಾರೆ. ಎಐಐಎಂಎಸ್ ಬಿಡುಗಡೆ ಮಾಡಿರುವ ಹೇಳಿಕೆಯಲ್ಲಿ ಸಚಿವರು ಸೌಖ್ಯವಾಗಿದ್ದು, ಆಸ್ಪತ್ರೆಯಿಂದಲೇ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಲಾಗಿದೆ. ಶುಕ್ರವಾರ ಅವರು ಸೋಂಕಿನಿಂದ ಮುಕ್ತರಾಗಿದ್ದರು.

# ಜನರ ಹಕ್ಕುಗಳ ಉಳಿವಿಗಾಗಿ ಕರ್ನಾಟಕ ಜನಶಕ್ತಿಯಿಂದ ಭಾರತ ಉಳಿಸಿ ಅಭಿಯಾನ




ದಾವಣಗೆರೆ, ಆ.18- ರೈತರು, ಕಾರ್ಮಿಕರು, ಜನರ ಹಕ್ಕುಗಳ ಉಳಿವಿಗಾಗಿ ಭಾರತ ಉಳಿಸಿ ಅಭಿಯಾನದ ಭಾಗವಾಗಿ ಕರ್ನಾಟಕ ಜನಶಕ್ತಿ ಸಂಘಟನೆ ಜಿಲ್ಲಾ ಸಮಿತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಸಂಘಟನೆಯ ಕಾರ್ಯಕರ್ತರು, ಕೇಂದ್ರ-ರಾಜ್ಯ ಸರ್ಕಾರಗಳ ಜನ ವಿರೋಧಿ, ರೈತ ವಿರೋಧಿ, ಕಾರ್ಮಿಕ ವಿರೋಧಿ ನೀತಿಗಳ ಅನುಸರಿಸುತ್ತಿರುವುದಾಗಿ ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಸಂಘಟನೆ ಮುಖಂಡ, ಹಿರಿಯ ವಕೀಲ ಅನೀಸ್ ಪಾಶಾ, ಕಾರ್ಮಿಕರಿಗೆ ಆಸರೆಯಾಗಿದ್ದ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಯನ್ನು ತಕ್ಷಣವೇ ಸರ್ಕಾರ ಕೈಬಿಡಬೇಕು. ಭೂ ಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಿರುವುದನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಬಗರ್ ಹುಕುಂ ಸಾಗುವಳಿದಾರರಿಗೆ ಮತ್ತು ಸೂರು ಇಲ್ಲದವರಿಗೆ ಭೂಮಿ ಮತ್ತು ವಸತಿ ಹಂಚಿಕೆ ಮಾಡಬೇಕು. ಗ್ರಾಮೀಣ ಭಾಗದ ನರೇಗಾ ಯೋಜನೆಯನ್ನು ನಗರ, ಪಟ್ಟಣ ಪ್ರದೇಶಕ್ಕೂ ವಿಸ್ತರಿಸಿ, ದುಡಿಯುವ ವರ್ಗಕ್ಕೆ ಕೆಲಸನೀಡಬೇಕು. ಎಲ್ಲಾ ಬಡವರಿಗೂ ಕೊರೋನಾ ಪರೀಕ್ಷೆಯನ್ನು ಉಚಿತವಾಗಿ ಮಾಡಿ, ಸಮಗ್ರ ಆಹಾರ ಕಿಟ್ ವಿತರಣೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘಟನೆ ಮುಖಂಡರಾದ ಸತೀಶ ಅರವಿಂದ, ಅಸ್ಗರ್, ಆದಿಲ್ ಖಾನ್, ಅಬ್ದುಲ್ ಸಮದ್, ಖಲೀಲ್, ಶೋಯಬ್, ನಿಜಾಮ್ ಇತರರು ಭಾಗವಹಿಸಿದ್ದರು.

# ಮಳೆಯಿಂದ ಮನೆಗಳಿಗೆ ಹಾನಿಯಾದ 10ನೇ ವಾರ್ಡ್‌ನ ಸಂತ್ರಸ್ತರಿಗೆ ನೆರವು



ದಾವಣಗೆರೆ, ಆ.18- ನಗರದಲ್ಲಿ ನಿರಂತರ ಮಳೆಯಿಂದ ಮನೆಗಳಿಗೆ ಹಾನಿಯುಂಟಾಗಿ ಸೂರು ಕಳೆದುಕೊಂಡ ಸಂತ್ರಸ್ತ ಕುಟುಂಬಗಳಿಗೆ ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಅಗತ್ಯ ಆಹಾರ ಪದಾರ್ಥಗಳ ಕಿಟ್ ಜೊತೆಗೆ ವೈಯುಕ್ತಿಕವಾಗಿ ಆರ್ಥಿಕ ಪರಿಹಾರವನ್ನು ನೀಡಿ ಸಂಕಷ್ಟಕ್ಕೆ ನೆರವಾಗಿದ್ದಾರೆ.

ಪಾಲಿಕೆ ವ್ಯಾಪ್ತಿಯ 10ನೇ ವಾರ್ಡ್ ನಲ್ಲಿ ಇತ್ತೀಚೆಗೆ ಸತತವಾಗಿ ಸುರಿದ ಆಶ್ಲೇಷ ಮಳೆಗೆ ಹಳೆ ದಾವಣಗೆರೆ ಭಾಗದ ಐರಣಿ ಮಠದ ಸಮೀಪದಲ್ಲಿ ಬ್ಯಾಂಕೊಂದರ ಸೆಕ್ಯುರಿಟಿ ಗಾರ್ಡ್ ಟಿ.ಯು. ನಾಗರಾಜ್ ಎಂಬುವರ ಮನೆಯ ಮಣ್ಣಿನ ಗೋಡೆ ಕುಸಿದು ಬಿದ್ದಿತ್ತು. ಅಂತೆಯೇ ದೇವಾಂಗ ಪೇಟೆಯಲ್ಲಿನ ಕೂಲಿ ಕಾರ್ಮಿಕರೋರ್ವರ ಮನೆಯ ಗೋಡೆಯು ಕಳೆದ ವಾರ ಕುಸಿದು ಬಿದ್ದಿತ್ತು.

ತಮ್ಮ ಮಗ ರಾಕೇಶ್ ಜಾಧವ್ ಸ್ಪರ್ಧಿಸಿ ಗೆದ್ದಿರುವ ಈ 10ನೇ ವಾರ್ಡ್ ನ ಈ ಎರಡೂ ಕಡೆಗಳಿಗೂ ಯಶವಂತ್ ರಾವ್ ಜಾಧವ್ ಅವರು ಮಗನೊಂದಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ, ಸಂತ್ರಸ್ಥರ ಅಹವಾಲು ಆಲಿಸಿ ಪ್ರತಿ ಮನೆಗೂ ವೈಯುಕ್ತಿಕವಾಗಿ 15 ದಿನದ ಅಗತ್ಯ ಆಹಾರ ಪದಾರ್ಥಗಳು ಹಾಗೂ ತಲಾ 5 ಸಾವಿರ ಪರಿಹಾರವನ್ನು ನೀಡಿದ್ದಾರೆ.

ಮಳೆಗೆ ಕರೀ ಹಂಚಿನ ಎರಡು ಮನೆಗಳ ಗೋಡೆ ಕುಸಿದು ಸಂಕಷ್ಟದಲ್ಲಿದ್ದ ಈ ಎರಡು ಬಡ ಕುಟುಂಬಗಳ ಕಷ್ಟಕ್ಕೆ ಸ್ಪಂದಿಸಿ, ಅಕ್ಕಿ, ಬೇಳೆ, ಸಕ್ಕರೆ ಹೀಗೆ ಅಗತ್ಯ ಆಹಾರ ಪದಾರ್ಥಗಳ ಕಿಟ್ ನೀಡಲಾಗಿದೆ.

ವಾರ್ಡ್ ಸದಸ್ಯ ರಾಕೇಶ್ ಜಾಧವ್, ಪ್ರವೀಣ್ ಜಾಧವ್, ವಾರ್ಡ್ ಅಧ್ಯಕ್ಷ ಗೋವಿಂದರಾಜ, ರಾಜು, ಚೇತನ್, ಮಂಜು, ಕುಮಾರ, ಗಣೇಶ್ ಮಾನೆ ಸೇರಿದಂತೆ ಇತರರು ಇದ್ದರು.

# ಐವರು ಕ್ರೀಡಾ ಸಾಧಕರಿಗೆ 'ಖೇಲ್ ರತ್ನ' ಪ್ರಶಸ್ತಿ

ನವದೆಹಲಿ, ಆ. 18 – ಕುಸ್ತಿ ಪಟು ವಿನೇಶ್ ಫೋಗಟ್, ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಮಪಾಲ್, ಪ್ಯಾಡ್ಲರ್ ಮನಿಕಾ ಬಾತ್ರಾ, ರಿಯೋ ಪ್ಯಾರಲಿಂಪಿಕ್ ಬಂಗಾರದ ಪದಕ ವಿಜೇಯತ ಮರಿಯಪ್ಪನ್ ಥಂಗವೇಲು ಹಾಗೂ ಕ್ರಿಕೆಟಿಗ ರೋಹಿತ್ ಶರ್ಮಾ ಅವರನ್ನು ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಕೇಂದ್ರ ಕ್ರೀಡಾ ಸಚಿವಾಲಯದ ಆಯ್ಕೆ ಸಮಿತಿ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಇದೇ ವೇಳೆ 29 ಕ್ರೀಡಾ ಸಾಧಕರಿಗೆ ಅರ್ಜುನ ಪ್ರಶಸ್ತಿ ನೀಡಬೇಕೆಂದು ಶಿಫಾರಸ್ಸು ಮಾಡಲಾಗಿದೆ.

12 ಸದಸ್ಯರ ಆಯ್ಕೆ ಸಮಿತಿ ಈ ನಿರ್ಧಾರಗಳನ್ನು ತೆಗೆದುಕೊಂಡಿದ್ದು, ಕೊನೆ ಗಳಿಗೆಯಲ್ಲಿ ರಾಣಿ ರಾಮಪಾಲ್ ಅವರನ್ನು ಪ್ರಶಸ್ತಿಗೆ ಸಮಿತಿ ಆಯ್ಕೆ ಮಾಡಿದೆ.

ವೇಗದ ಬೌಲರ್ ಇಶಾಂತ್ ಶರ್ಮ, ಆರ್ಚರ್ ಅತನು ದಾಸ್, ಹಾಕಿ ತಂಡದ ದೀಪಿಕಾ ಠಾಕೂರ್, ಕಬಡ್ಡಿಯ ದೀಪಕ್ ಹೂಡಾ ಹಾಗೂ ಟೆನ್ನಿಸ್ ಆಟಗಾರ್ತಿ ದಿವಿಜ್ ಶರಣ್ ಸೇರಿದಂತೆ 29 ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿದೆ.

ಐವರು ಕ್ರೀಡಾಪಟುಗಳಿಗೆ ಅತ್ಯುನ್ನತ ಕ್ರೀಡಾ ಪ್ರಶಸ್ತಿ ನೀಡುತ್ತಿರುವುದು ಇದೇ ಮೊದಲು. ಈ ಬಗ್ಗೆ ಕ್ರೀಡಾ ಸಚಿವ ಕಿರಣ್ ರಿಜಿಜು ಅಂತಿಮ ನಿರ್ಧಾರ ತೆಗೆದುಕೊಳ್ಳಬೇಕಿದೆ.

ಸಾಮಾನ್ಯವಾಗಿ ರಾಷ್ಟ್ರಪತಿ ಭವನದಲ್ಲಿ ಕ್ರೀಡಾ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಆನ್‌ಲೈನ್ ಮೂಲಕ ಪ್ರಶಸ್ತಿ ನೀಡುವ ಸಾಧ್ಯತೆ ಇದೆ.

## ಬಿ.ಎಸ್.ಸಿ. ಮೆನ್ಸ್ ಶೋರೂಂ ವಿಸ್ತರಣೆ



ದಾವಣಗೆರೆ,ಆ.18- ನಗರದ ಎವಿಕೆ ಕಾಲೇಜು ರಸ್ತೆಯಲ್ಲಿರುವ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನ ಮೆನ್ಸ್ ಶೋರೂಮ್‌ನ ಮೊದಲ ಮಹಡಿಯಲ್ಲಿ 1500 ಚದರ ಅಡಿಯಷ್ಟು ವಿಸ್ತರಿಸಲಾಗಿದೆ. ಪುರುಷರ ಕ್ಯಾಜುವಲ್ ವೇರ್ ಮತ್ತು ಫ್ಯಾಬ್ರಿಕ್ಸ್‌ನ ಈ ವಿಭಾಗವನ್ನು ಸಂಸ್ಥೆಯ ಮಾಲೀಕರಾದ ಬಿ.ಸಿ. ಉಮಾಪತಿ, ಬಿ.ಸಿ. ಚಂದ್ರಶೇಖರ್, ಬಿ.ಸಿ. ಶಿವಕುಮಾರ್, ಬಿ.ಯು.ಸಿ ಶೇಖರ್, ಬಿ.ಸಿ. ವಿವೇಕ್, ಬಿ.ಎಸ್. ಮೃನಾಲ್ ಸೋಮವಾರ ಉದ್ಘಾಟಿಸಿದರು.

## ಪರೀಕ್ಷೆ ಹೆಚ್ಚಾದರೂ ಕೊರೊನಾ ಪತ್ತೆ ಕಡಿಮೆ



ನವದೆಹಲಿ, ಆ. 18 – ದೇಶದಲ್ಲಿ ಕೊರೊನಾ ವೈರಸ್ ಪರೀಕ್ಷೆಯ ಪ್ರಮಾಣ ಹೆಚ್ಚಾಗುತ್ತಿದ್ದು, ಒಂದೇ ದಿನ 8.99 ಲಕ್ಷ ಪರೀಕ್ಷೆಗಳನ್ನು ನಡೆಸಲಾಗಿದೆ. ಇಷ್ಟಾದರೂ, ಪಾಸಿಟಿವ್ ಬರುತ್ತಿರುವ ಪ್ರಮಾಣ ಶೇ.8.8ರಷ್ಟು ಮಾತ್ರವಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಸೋಮವಾರ ಒಂದೇ ದಿನ 57,937 ಜನರು ಕೊರೊನಾದಿಂದ ಗುಣಮುಖರಾಗಿದ್ದು, ಇದುವರೆಗು ಒಟ್ಟಾರೆ 19 ಲಕ್ಷಕ್ಕೂ ಹೆಚ್ಚು ಜನರು ಚೇತರಿಸಿಕೊಂಡಂತಾಗಿದೆ.

ಸೋಮವಾರ ಒಂದೇ ದಿನ 55,079 ಜನ ಸೋಂಕಿತರು ಪತ್ತೆಯಾಗಿದ್ದಾರೆ. ಈ ದಿನದಂದು ಸೋಂಕಿತರಿಗಿಂತ ಗುಣಮುಖರಾಗಿ ಬಿಡುಗಡೆಯಾದವರ ಸಂಖ್ಯೆ ಹೆಚ್ಚಾಗಿದೆ ಎಂದು ಸಚಿವಾಲಯ ಹೇಳಿದೆ.

## ಪ್ರಶಾಂತ್ ಅವರಿಗೆ 'ಸೇವಾರತ್ನ ಪ್ರಶಸ್ತಿ'



ದಾವಣಗೆರೆ, ಆ. 18- ವಿವಿಧ ಕ್ಷೇತ್ರಗಳ ಸಾಧಕರಿಗೆ ನಗರದ ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿಯು ತನ್ನ ವಾರ್ಷಿಕೋತ್ಸವದ ಸಂದರ್ಭ ದಲ್ಲಿ ಪ್ರತಿ ವರ್ಷ ಕೊಡಮಾಡುವ 'ಭಾರತ ಸೇವಾ ರತ್ನ 2019-20' ರಾಷ್ಟ್ರೀಯ ಪ್ರಶಸ್ತಿಗೆ ಜಿಲ್ಲಾ ಪೊಲೀಸ್ ಇಲಾಖೆಯ ಪೇದೆ ಎಂ.ಹೆಚ್. ಪ್ರಶಾಂತ್‌ಕುಮಾರ್ ಭಾಜನರಾಗಿದ್ದಾರೆ.

74ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಸ್ಥಳೀಯ ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪದಲ್ಲಿ ಏರ್ಪಾಡಾಗಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಾಂತ್ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಪ್ರಶಸ್ತಿ ಪುರಸ್ಕೃತ ಪ್ರಶಾಂತ್ ಅವರನ್ನು ದೇವರಾಜ ಅರಸು ಬಡಾವಣೆ ಎ ಬ್ಲಾಕ್ ನ ಸಾರ್ವಜನಿಕ ಹಿತರಕ್ಷಣಾ ಸಮಿತಿಯ ಕಾರ್ಯದರ್ಶಿ ಕೆ.ಎಂ. ವೀರಯ್ಯ ಸ್ವಾಮಿ ಅಭಿನಂದಿಸಿದ್ದಾರೆ.

## ನಾಳಿನ ಲಿಂಗೇಶ್ವರ ರಥೋತ್ಸವ ರದ್ದು



ದಾವಣಗೆರೆ, ಆ. 18- ಕೊರೊನಾ ಹಿನ್ನೆಲೆಯಲ್ಲಿ ಜಿಲ್ಲಾ ಡಳಿತ ಆದೇಶದ ಮೇರೆಗೆ ನಾಡಿದ್ದು ದಿನಾಂಕ 20ರ ಗುರುವಾರ ನಡೆಯಬೇಕಾಗಿದ್ದ ಶ್ರೀ ಲಿಂಗೇಶ್ವರ ಸ್ವಾಮಿ ರಥೋತ್ಸವವನ್ನು ರದ್ದುಪಡಿಸಲಾಗಿದೆ. ಅನ್ನ ಸಂತರ್ಪಣೆ ಇರುವುದಿಲ್ಲ. ದೇವಸ್ಥಾನದಲ್ಲಿ ದೇವರ ದರ್ಶನ ಇರುತ್ತದೆ. ಭಕ್ತರು ಸಹಕರಿಸಬೇಕೆಂದು ಶ್ರೀ ಲಿಂಗೇಶ್ವರ ದೇವಸ್ಥಾನ ಸಂಘದವರು ಕೋರಿದ್ದಾರೆ.

## ಭಾನುವಳ್ಳಿ ವಿನಾಯಕ ಸಂಸ್ಥೆಗೆ ಶೇ. 92

ಭಾನುವಳ್ಳಿ, ಆ.14- ಇಲ್ಲಿನ ವಿನಾಯಕ ವಿದ್ಯಾಸಂಸ್ಥೆಯ ಶ್ರೀಮತಿ ಗೌರಮ್ಮ ಜೆ. ರಾಮಪ್ಪ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 92 ಫಲಿತಾಂಶ ಲಭಿಸಿದೆ. 12 ವಿದ್ಯಾರ್ಥಿಗಳು ಅತ್ಯುನ್ನತ ದರ್ಜೆ, 8 ಪ್ರಥಮ ಮತ್ತು ಇಬ್ಬರು ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಾರೆ.

ಬೇಕಾಗಿದ್ದಾರೆ
ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ:
ಶಾಂತಲಾ ವೆಡ್ಡಿಂಗ್ ಮಾಲ್
ಚಾಮರಾಜಪೇಟೆ, ದಾವಣಗೆರೆ - 577 001.
96861 95327







JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte